14 October 2026 Wednesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಭವಿಷ್ಯದ ಮುನ್ನುಡಿ

ಸಂಪಾದಕ: ಕೆ.ಎನ್.ರವಿ

info.varthaman@gmail.com

**ಭಾವನಾಂತರಂಗ**

ನಮ್ಮ ಸುಖ,ದುಃಖ ಎಲ್ಲವನ್ನೂ ಭಗವಂತನಿಗೆ ಅರ್ಪಿಸಿದರೆ ಬೇರೆ ನಾಮ ಸ್ಮರಣೆಯೇ ಬೇಕಿಲ್ಲ!

ಸ್ನೇಹಾ ಆನಂದ್


ಮೈಸೂರು ದಸರೆಯಲ್ಲಿ ಮಹಿಳೆಯರ ದರ್ಬಾರ್ — ಪುಟ ಸಂ. 2


ಕಾವ್ಯ ನಿರಂತರ ಹರಿಯುವ ಭಾವನೆಗಳ ಅಭಿವ್ಯಕ್ತಿ — ಪುಟ ಸಂ. 3


ಸ್ವಚ್ಛತೆಯಿಲ್ಲದೆ ಸೊರಗಿದ ಇಟ್ನ ಗ್ರಾಮ: ಪಾಳು ಬಿದ್ದ ಘನತ್ಯಾಜ್ಯ ಘಟಕ — ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು

ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 296 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಸಚಿವರ, ಶಾಸಕರ ಟೆಲಿಫೋನ್ 'ಕದ್ದಾಲಿಕೆ

## ಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧ ಎಚ್.ಡಿ.ಕುಮಾರಸ್ವಾಮಿ ತೀವ್ರ ವಾಗ್ದಾಳಿ

**ಬೆಂಗಳೂರು:** ನಿವೃತ್ತ ಪೊಲೀಸ್ ಅಧಿಕಾರಿಗಳನ್ನು ಬಳಸಿಕೊಂಡು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮ್ಮದೇ ಸಚಿವರು ಮತ್ತು ಶಾಸಕರ ಫೋನ್ ಕದ್ದಾಲಿಕೆ ನಡೆಸುತ್ತಿದ್ದಾರೆಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಬಾಂಬ್ ಸಿಡಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಶಿವಕುಮಾರ್ ಅವರು ಮುಖ್ಯಮಂತ್ರಿ ಆದನಂತರ ಸದಾಶಿವ ನಗರದಲ್ಲಿ ಮನೆಯೊಂದನ್ನು ಗೊತ್ತು ಮಾಡಿದ್ದಾರೆ. ಅಲ್ಲಿ ಅತ್ಯಾಧುನಿಕ ಉಪಕರಣಗಳನ್ನು ಅಳವಡಿಸಲಾಗಿದೆ. ತಮ್ಮದೇ ಸರ್ಕಾರದ ಸಚಿವರು, ತಮ್ಮ ಪಕ್ಷದ ನಾಯಕರು, ಶಾಸಕರು ಏನೇನೆಲ್ಲಾ ಮಾತನಾಡುತ್ತಾರೆ ಎಂಬುದನ್ನು ಕೇಳಿಸಿಕೊಳ್ಳಲು ನಾಲ್ವರು ನಿವೃತ್ತ ಪೊಲೀಸ್ ಅಧಿಕಾರಿಗಳನ್ನು ನೇಮಕ ಮಾಡಿದ್ದಾರೆಂದು ಗಂಭೀರ ಆರೋಪ ಮಾಡಿದರು.



ರಾಜ್ಯದಲ್ಲಿ ಮಾನ–ಮರ್ಯಾದೆ ಹರಾಜಾಗುತ್ತಿರುವ ಈ ಸ್ಟಿಂಗ್ ಆಪರೇಷನ್ ಪ್ರಕರಣಕ್ಕೆ ಅಂತ್ಯ ಹಾಡಲು ಪ್ರಕರಣವನ್ನು ಕೂಡಲೇ ಸಿಬಿಐಗೆ ವಹಿಸಬೇಕು ಎಂದು ಎಚ್‌ಡಿಕೆ ಆಗ್ರಹಿಸಿದರು. ಇದರ ಹಿಂದೆ ಯಾರಿದ್ದಾರೆ ಎಂಬುದು ಹೊರಬರಬೇಕು. ಈ ಸಂಬಂಧ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಸಮಯ ಕೋರಿದ್ದೇನೆ. ಅವರನ್ನು ಖುದ್ದಾಗಿ ಭೇಟಿಯಾಗಿ ಸ್ಟಿಂಗ್ ಆಪರೇಷನ್ ಜಾಲದ ಕುರಿತು ಸಿಬಿಐ ತನಿಖೆ ನಡೆಸುವಂತೆ ಮನವಿ ಸಲ್ಲಿಸುತ್ತೇನೆ ಎಂದು ತಿಳಿಸಿದರು

ಮಾರುವೇಷದ ಕಾರ್ಯಾಚರಣೆ ವಿಚಾರದಲ್ಲಿ ಸಿದ್ದರಾಮಯ್ಯ ಅವರು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರಂತೆ. ಅಂತಹ ಕಾರ್ಯಾಚರಣೆ ನಡೆಸಿದವರು ಯಾರು ಎಂಬುದು ಗೊತ್ತಾಗಲು ತನಿಖೆ ನಡೆಸಬೇಕು ಎಂದು ಸ್ವತಃ ಸಿದ್ದರಾಮಯ್ಯ ಅವರೇ ಹೇಳಿದ್ದಾರೆ. ಅವರು ತಪ್ಪು ಮಾಡಿಲ್ಲ ಎಂಬ ನಂಬಿಕೆ ನನಗಿದೆ ಎಂದು ಹೇಳಿದರು.

ಸಿದ್ದರಾಮಯ್ಯ ಅವರಂತಹ ದೊಡ್ಡ ನಾಯಕರನ್ನು ಈ ರೀತಿ ಬೀದಿಗೆ ತಂದು ನಿಲ್ಲಿಸಿದ್ದಾರೆ. ಹಲವು ಸಚಿವರ ವಿರುದ್ಧ ಮಾರುವೇಷದ ಕಾರ್ಯಾಚರಣೆ ನಡೆಸಲಾಗುತ್ತಿದೆ. ಇದನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು. ಇಲ್ಲಿ ನನ್ನೊಬ್ಬನ ದನಿ ಮಾತ್ರವೇ ಸಾಲುವುದಿಲ್ಲ. ಸಿದ್ದರಾಮಯ್ಯ ಅವರೂ ದನಿಯೆತ್ತಬೇಕು. ಆಗ ಈ ಒತ್ತಾಯಕ್ಕೆ ಬಲಬರುತ್ತದೆ ಎಂದರು.

# ಸಿದ್ದುಗೆ ಧೈರ್ಯ ತುಂಬಿದ ಎಚ್‌ಡಿಕೆ!

**ಬೆಂಗಳೂರು:** ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಧೈರ್ಯ ತುಂಬುವಂತೆ ಮಾತನಾಡಿದ ಎಚ್.ಡಿ.ಕುಮಾರಸ್ವಾಮಿ ಅವರು, ಸಿದ್ದರಾಮಯ್ಯನವರೇ, ನಿಮ್ಮ ನೋವು ಏನೆಂದು ನನಗೆ ಅರ್ಥವಾಗುತ್ತದೆ. ನಿಮ್ಮನ್ನು ಯಾವ ಮಟ್ಟಕ್ಕೆ ತಂದು ನಿಲ್ಲಿಸಿದ್ದಾರೆ ನೋಡಿ ಎಂದು ಅನುಕಂಪದ ಮಾತನಾಡಿದರು.

ಆದರೆ, ನೀವು ಹೆದರಿ ಸ್ಟೇ ತರಬಾರದಿತ್ತು. ಸ್ಟೇ ತರುವುದು ರಕ್ಷಣೆಯಲ್ಲ. ನಿಮ್ಮ ಹಳೆಯ ಗಟ್ಟಿ ಧ್ವನಿ ಹೊರಬರಬೇಕು. ಹೋರಾಟ ಮಾಡಿ. 136 ಶಾಸಕರಿದ್ದಾರೆ. ಸರ್ಕಾರ ಹೇಗೆ ಬೀಳುತ್ತದೆ? ನೀವು ಟ್ರ್ಯಾಪ್ ಆಗಬೇಡಿ. ಈ ಸ್ಟಿಂಗ್ ಆಪರೇಷನ್ ದಂಧೆಗೆ ಸಂಪೂರ್ಣ



ಇತಿಶ್ರೀ ಹಾಡಿ ಎಂದು ಕುಮಾರಸ್ವಾಮಿ ಸಲಹೆ ನೀಡಿದರು.

ಸಿದ್ದರಾಮಯ್ಯ ಬಗ್ಗೆ ನನಗೆ ಅನುಕಂಪವಿಲ್ಲ. ಅವರು ಅಹಿಂದ ಸಮುದಾಯಗಳ ದೊಡ್ಡ ದನಿ. ಅಂತಹವರನ್ನು ಈ ಸ್ಥಿತಿಗೆ ತಂದಿದ್ದಾರೆ. ರಾಜ್ಯ ಯಾವ ಸ್ಥಿತಿಗೆ ಹೋಗುತ್ತಿದೆ ಎಂಬುದು ಅರಿವಾಗುತ್ತದೆ ಎಂದು ಹೇಳಿದರು.

## ಡಿಕೆಶಿ ಸಿಎಂ ಎಂದು ಒಪ್ಪಲ್ಲ

**ಬೆಂಗಳೂರು:** ನಾನು ಡಿ.ಕೆ ಶಿವಕುಮಾರ್ ಅವರನ್ನು ಇಂದಿಗೂ ಮುಖ್ಯಮಂತ್ರಿ ಎಂದು ಹೇಳಲು ಸಿದ್ಧನಿಲ್ಲ. ನಮ್ಮ ರಾಜ್ಯಕ್ಕೆ ಇಂತಹ ಸ್ಥಿತಿ ಬರಬಾರದಾಗಿತ್ತು ಎಂದು ಡಿ.ಕೆ.ಶಿವಕುಮಾರ್ ವಿರುದ್ಧ ಎಚ್.ಡಿ.ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು. ನನ್ನ ತಾಯಿಯನ್ನೂ ಬಿಡಲಿಲ್ಲ ಇವರು. ದಿನಾ ದೇವರ ಕೋಣೆಯಲ್ಲಿ ಬದುಕಿದವರು ನನ್ನ ತಾಯಿ, ಅವರ ಬಗ್ಗೆಯೂ ಸರಣಿ ಕಥೆಗಳನ್ನು ಸೃಷ್ಟಿಸಿದರು. ಈ ರೀತಿಯ ವಾತಾವರಣ ನಿರ್ಮಾಣ ಮಾಡಿರುವ ಪುಟ 2ಕ್ಕೆ

## ದೀಪಾವಳಿ ನಂತರ ಯುಪಿಐ ಶುಲ್ಕ ಜಾರಿ




**ನವದೆಹಲಿ:** ದೀಪಾವಳಿ ಹಬ್ಬದ ನಂತರ ಯುಪಿಐ ಶುಲ್ಕ ಜಾರಿ ಮಾಡಲಾಗುವುದು ಎಂದು ನ್ಯಾಷನಲ್ ಪೇಮೆಂಟ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ ತಿಳಿಸಿದೆ.

ಯುಪಿಐ ವಹಿವಾಟುಗಳ ಮೇಲಿನ ಶುಲ್ಕ ವಿಧಿಸುವ ಪ್ರಕ್ರಿಯೆಯನ್ನು ಮುಂದೂಡುವಂತೆ ವ್ಯಾಪಾರಿಗಳು ಸಲ್ಲಿಸಿದ್ದ ಮನವಿಯನ್ನು ಪುರಸ್ಕರಿಸಿರುವ ಎನ್‌ಪಿಸಿಐ ಪುಟ 2ಕ್ಕೆ

# ಕೋರ್ಟ್‌ನಲ್ಲಿ ಆತಂಕಕ್ಕೆ ಒಳಗಾದ ನಟ ಚಿಕ್ಕಣ್ಣ

**ಬೆಂಗಳೂರು:** ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನ್ಯಾಯಾಲಯದಲ್ಲಿ ಮಂಗಳವಾರ ಸಾಕ್ಷ್ಯ ನುಡಿಯಲು ಹಾಜರಾಗಿದ್ದ ನಟ ಚಿಕ್ಕಣ್ಣ ತೀವ್ರ ಆತಂಕ ಮತ್ತು ಗಾಬರಿಯಿಂದ ಸಾಕ್ಷಿ ಹೇಳುವಾಗ ತಡಬಡಿಸಿದ್ದಾರೆ. ಮತ್ತೊಬ್ಬ ಪ್ರಮುಖ ಸಾಕ್ಷಿಯಾದ ನಟ ಯಶಸ್ ಸೂರ್ಯ ನ್ಯಾಯಾಲಯದ ಕಟಕಟೆಯಲ್ಲಿ ನಿಂತು ಘಟನೆಯ ದಿನ ನಡೆದ ಪಾರ್ಟಿಯ ಕುರಿತು ಹೇಳಿಕೆಯನ್ನು ದಾಖಲಿಸಿದ್ದಾರೆ. ಈ ಬೆನ್ನಲ್ಲೇ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸರ್ಕಾರಿ ಅಭಿಯೋಜಕರು ಕೋರ್ಟ್‌ಗೆ ಮನವಿ ಮಾಡಿದ್ದಾರೆ.

ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ಚಿಕ್ಕಣ್ಣ ಹಾಗೂ ನಟ ಯಶಸ್ ಸೂರ್ಯ ಅವರನ್ನು ಘಟನೆ ನಡೆದ ದಿನ (ಜೂನ್ 8, 2024) ಆರ್‌ಆರ್ ನಗರದ ಸ್ಟೋನಿ ಬ್ರೂಕ್ ರೆಸ್ಟೋರೆಂಟ್‌ನಲ್ಲಿ ನಟ ದರ್ಶನ್ ಅವರೊಂದಿಗೆ ಪಾರ್ಟಿಯಲ್ಲಿದ್ದ ಕಾರಣ ಇವರನ್ನು ಪ್ರಮುಖ ಸಾಕ್ಷಿಗಳನ್ನಾಗಿ ಪರಿಗಣಿಸಲಾಗಿದೆ.

ನ್ಯಾಯಾಲಯದ ಕಟಕಟೆಯಲ್ಲಿ ಸಾಕ್ಷಿ ಹೇಳಲು ನಿಂತ



ನಟ ಚಿಕ್ಕಣ್ಣ ಅವರು ತೀವ್ರ ಆತಂಕಕ್ಕೆ ಒಳಗಾಗಿ ಮಾತನಾಡಲು ತಡಬಡಿಸಿದರು. ಇದನ್ನು ಗಮನಿಸಿದ ನ್ಯಾಯಾಧೀಶರು ಅವರಿಗೆ ಸ್ವಲ್ಪ ಸಮಯ ವಿಶ್ರಾಂತಿ ತೆಗೆದುಕೊಳ್ಳುವಂತೆ ಸೂಚಿಸಿದರು. ಆದರೂ ಚಿಕ್ಕಣ್ಣ ತಮಗೆ ತೀವ್ರ ಟೆನ್ಷನ್ ಆಗುತ್ತಿದೆ ಎಂದು ಹೇಳಿ ಪೂರ್ಣ ಹೇಳಿಕೆ ನೀಡಲು ಹಿಂದೇಟು ಹಾಕಿದರು. ಚಿಕ್ಕಣ್ಣ ಅವರ ಒತ್ತಡ ಮತ್ತು ಆತಂಕದ ಪರಿಸ್ಥಿತಿಯನ್ನು ಪರಿಗಣಿಸಿದ ನ್ಯಾಯಾಲಯ ಅವರ ವಿಚಾರಣೆಯನ್ನು ಬುಧವಾರಕ್ಕೆ ಮುಂದೂಡಿತು.

# ಸ್ಟಿಂಗ್ ಆಪರೇಷನ್ ವಿಡಿಯೋ ನಕಲಿ

## ವಿಡಿಯೋ ಹರಡಿದವರ ವಿರುದ್ಧ ದೂರು: ಸಚಿವ ಯತೀಂದ್ರ

**ಬೆಂಗಳೂರು:** ಸ್ಟಿಂಗ್ ಆಪರೇಷನ್ ವಿವಾದದ ಕೇಂದ್ರ ಬಿಂದುವಾಗಿರುವ ವಿಡಿಯೋ ನಕಲಿ. ತಮ್ಮ ತಂದೆಯ ವರ್ಚಸ್ಸಿಗೆ ಮಸಿ ಬಳಿಯುವ ಉದ್ದೇಶದಿಂದಲೇ ಇದನ್ನು ಸೃಷ್ಟಿಸಲಾಗಿದೆ ಎಂದು ಸಿದ್ದರಾಮಯ್ಯ ಪುತ್ರ ಹಾಗೂ ಸಚಿವ ಯತೀಂದ್ರ ಮಂಗಳವಾರ ಆರೋಪಿಸಿದರು.

ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ವಿರುದ್ಧ ನಡೆಯುತ್ತಿರುವ 'ಸುಳ್ಳು ಪ್ರಚಾರ'ಕ್ಕೆ ತಡೆ ಕೋರಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ನ್ಯಾಯಾಲಯದ ಮೊರೆ ಹೋಗಿರುವ ಕುರಿತು ಮಾತನಾಡಿದ ಅವರು, ಈ ವಿಡಿಯೋವನ್ನು ಹರಡಿದವರ ವಿರುದ್ಧ ಕ್ರಮಕೈಗೊಳ್ಳುವಂತೆ ಕೋರಿ ದೂರು ಕೂಡ ದಾಖಲಿಸಲಾಗಿದೆ ಎಂದು ಯತೀಂದ್ರ ಹೇಳಿದರು.

ಅವರು ಸುಳ್ಳು ಪ್ರಚಾರವನ್ನು ಹರಡುತ್ತಿದ್ದಾರೆ. ನಾವು ಸುಮ್ಮನೆ ಕುಳಿತು ನೋಡಲು ಸಾಧ್ಯವೇ? ವಾಸ್ತವಾಂಶಗಳ ಅರಿವಿಲ್ಲದ ಜನರು ಆ ವಿಡಿಯೋ ಅಸಲಿಯೆಂದು ನಂಬಬಹುದು. ಇದು ಸ್ಟಿಂಗ್ ಆಪರೇಷನ್ ಅಲ್ಲ, ಬದಲಿಗೆ ಸುಳ್ಳು ಪ್ರಚಾರವನ್ನು ಹರಡಿ ಒಬ್ಬರ ವರ್ಚಸ್ಸಿಗೆ ಮಸಿ ಬಳಿಯುವ ಸಂಚು 'ಎಂದ ತಿಳಿಸಿದ ಯತೀಂದ್ರ, ಆ ವಿಡಿಯೋ ಸ್ಟಿಂಗ್ ಆಪರೇಷನ್ ಆಗಿತ್ತು ಎಂಬ ಅಭಿಪ್ರಾಯಗಳನ್ನು ತಳ್ಳಿಹಾಕಿದರು.

ನಾಯಕರು ನ್ಯಾಯಾಲಯದ ಮೊರೆ ಹೋಗಬೇಕಾದ ಹಂತಕ್ಕೆ ರಾಜಕೀಯ ಪರಿಸ್ಥಿತಿ ತಲುಪಿದೆಯೇ ಎಂಬ ಪ್ರಶ್ನೆಗೆ, ಇಂದಿನ ರಾಜಕೀಯ ಪರಿಸ್ಥಿತಿ ತೀರಾ ಕೆಳಮಟ್ಟಕ್ಕೆ ಕುಸಿದಿದೆ. ಸಿದ್ದರಾಮಯ್ಯ ಅವರಂತಹ ಹಿರಿಯ ನಾಯಕರೂ ಕೂಡ ಇಂತಹ ಸುಳ್ಳು ಆರೋಪಗಳನ್ನು ಎದುರಿಸಬೇಕಾದ ಪರಿಸ್ಥಿತಿ ಇದೆ ಎಂದು ಅವರು ತಿಳಿಸಿದರು.



ಆ ವಿಡಿಯೋ ಹೊರಬಂದ ತಕ್ಷಣವೇ ತಮ್ಮ ತಂದೆ ಆ ಬಗ್ಗೆ ನನಗೆ ತಿಳಿಸಿದ್ದರು. ದೂರು ದಾಖಲಿಸುವ ಇಂಗಿತ ವ್ಯಕ್ತಪಡಿಸಿದ್ದರು. ಕಾನೂನು ಸಲಹೆ ಪಡೆದ ನಂತರ ದೂರು ದಾಖಲಿಸುವಂತೆ ನಾನು ಅವರಿಗೆ ಹೇಳಿದೆ ಎಂದು ಯತೀಂದ್ರ ತಿಳಿಸಿದರು.

ಈ ಬೆಳವಣಿಗೆಗಳು ವ್ಯವಸ್ಥೆಯ ಬಗ್ಗೆ ಅವರನ್ನು ನಿರಾಶೆಗೊಳಿಸಿವೆಯೇ ಪುಟ 2ಕ್ಕೆ

# ಮೆರಿಟ್ ಅಭ್ಯರ್ಥಿಗಳಿಂದಲೂ ಹಣ ಪೀಕಿದ್ದ ಗ್ಯಾನೇಂದ್ರ ಗ್ಯಾಂಗ್

**ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗದ ನೇಮಕಾತಿ ಅಕ್ರಮದ ಕುರಿತು ಜಾರಿ ನಿರ್ದೇಶನಾಲಯ ನಡೆಸುತ್ತಿರುವ ತನಿಖೆಯಲ್ಲಿ ಬೆಚ್ಚಿಬೀಳಿಸುವ ಮಾಹಿತಿ ಹೊರಬಿದ್ದಿದೆ.

ಪರೀಕ್ಷೆ ಮುಗಿದ ನಂತರ ಬಿಡುಗಡೆಯಾಗುವ 1:3 ಮೆರಿಟ್ ಲಿಸ್ಟ್‌ನಲ್ಲಿ ಅಭ್ಯರ್ಥಿಗಳು ಗಳಿಸಿದ ಗೌಪ್ಯ ಅಂಕಗಳಮಾಹಿತಿಯನ್ನುದುರುಪಯೋಗಪಡಿಸಿಕೊಂಡು ಕೋಟಿ ಕೋಟಿ ಹಣ ದೋಚಿರುವುದು ಬಹಿರಂಗವಾಗಿದೆ.

ಐಎಎಸ್ ಅಧಿಕಾರಿ ಗ್ಯಾನೇಂದ್ರ ಸೇರಿದಂತೆ ಹಲವು ಅಧಿಕಾರಿಗಳು ಮತ್ತು ಕೆಪಿಎಸ್‌ಸಿ ಸದಸ್ಯರು ಈ ಜಾಲದಲ್ಲಿದ್ದರು. ಮೆರಿಟ್ ಆಧಾರದಲ್ಲಿ ತಮ್ಮ ಸ್ವಂತ ಸಾಮರ್ಥ್ಯದಿಂದಲೇ ಕೆಲಸ ಗಿಟ್ಟಿಸಿಕೊಳ್ಳುವ ಅಭ್ಯರ್ಥಿಗಳನ್ನು ಗುರಿಯಾಗಿಸಿಕೊಂಡು, ನಮ್ಮ ಪ್ರಭಾವದಿಂದಲೇ ನಿಮಗೆ ಕೆಲಸ ಸಿಗುತ್ತಿದೆ ಎಂದು ನಂಬಿಸಿ ಅವರಿಂದ ಲಕ್ಷಾಂತರ ರೂಪಾಯಿ ಲಂಚ ವಸೂಲಿ ಮಾಡಿರುವುದು ಬೆಳಕಿಗೆ ಬಂದಿದೆ.



ಕಂಪ್ಯೂಟರ್, ಸಿ–3 ಹಾಗೂ ಕಾರ್ಯದರ್ಶಿಗಳ ಕಚೇರಿಯಲ್ಲಿದ್ದ ಅಧಿಕಾರಿಗಳು ಈ ಗೌಪ್ಯ ಮಾಹಿತಿಯನ್ನು ಕೆಪಿಎಸ್‌ಸಿ ಸದಸ್ಯರು ಮತ್ತು ಮಧ್ಯವರ್ತಿಗಳಿಗೆ ಸೋರಿಕೆ ಮಾಡುತ್ತಿದ್ದರು. ಸ್ವಂತ ಶ್ರಮದಿಂದ ಆಯ್ಕೆಯಾಗುವ ಅಭ್ಯರ್ಥಿಗಳಿಗೂ ಮೋಸ ಮಾಡಿ ಹಣ ಪೀಕುತ್ತಿದ್ದ ಅಧಿಕಾರಿಗಳ ಈ ಕಳ್ಳಾಟ ಈಗ ಇ.ಡಿ ತನಿಖೆಯಿಂದ ಅನಾವರಣಗೊಂಡಿದೆ.

## ಪ್ರತಿಭಟನೆ ಹಕ್ಕು ಕಸಿಯಲ್ಲ: ಡಿಕೆಶಿ

**ನವದೆಹಲಿ:** ಶಾಂತಿಯುತ ಪ್ರತಿಭಟನೆ ಪ್ರಜಾಪ್ರಭುತ್ವದ ಮೂಲಭೂತ ಹಕ್ಕಾಗಿದೆ. ಆ ಹಕ್ಕನ್ನು ನಾವು ದೆಹಲಿಯಲ್ಲಿ ಪ್ರತಿಪಾದಿಸುತ್ತಿದ್ದೇವೆ. ಬೆಂಗಳೂರಿನಲ್ಲಿ ಬೇರೆಯವರಿಗೆ ಅದನ್ನು ನಿರಾಕರಿಸಲು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಪ್ರತಿಭಟನಾಕಾರರು ಮತ್ತು ಮಾಧ್ಯಮ ಮಿತ್ರರನ್ನು ಒಳಗೊಂಡ ಬೆಂಗಳೂರಿನ ಘಟನೆಯನ್ನು ನಾನು ಗಮನಿಸಿದ್ದೇನೆ. ಪೊಲೀಸ್ ಕಾರ್ಯಾಚರಣೆಗೆ ಕಾರಣವಾದ ಸಂದರ್ಭ ಕುರಿತು ಸಂಪೂರ್ಣ ವರದಿ ಕೇಳಿದ್ದೇನೆ. ಅನಗತ್ಯ ಬಲ ಪ್ರಯೋಗ ಅಥವಾ ಅತಿ ಯಾದ ವರ್ತನೆ ನಡೆದಿರುವುದು ಕಂಡುಬಂದರೆ, ಪುಟ 2ಕ್ಕೆ



# ಕೆಪಿಎಸ್ಸಿ ಅಕ್ರಮ: ತನಿಖಾ ತಂಡದಿಂದ ಅಲೋಕ್ ಕೈಬಿಡಲು ಸುಪ್ರೀಂ ಅಸ್ತು

**ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಅಕ್ರಮ ನೇಮಕಾತಿ ಪ್ರಕರಣದ ತನಿಖೆಗೆ ಹೈಕೋರ್ಟ್ ರಚಿಸಿದ್ದ ವಿಶೇಷ ತನಿಖಾ ತಂಡದಿಂದ (ಎಸ್‌ಐಟಿ) ಡಿಜಿಪಿ ಅಲೋಕ್ ಕುಮಾರ್ ಸೇರಿದಂತೆ ಇಬ್ಬರನ್ನು ಕೈಬಿಡಲಾಗಿದೆ.

ಈ ಸ್ಥಾನಗಳಿಗೆ ಇಬ್ಬರ ಹೆಸರುಗಳನ್ನು ಹೈಕೋರ್ಟ್‌ಗೆ ಎರಡು ವಾರಗಳಲ್ಲಿ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ರಾಜ್ಯ ಸರ್ಕಾರದ ಆಕ್ಷೇಪದ ಹಿನ್ನೆಲೆಯಲ್ಲಿ ಅಧಿಕಾರಿಗಳ ಬದಲಾವಣೆ ಮಾಡಲಾಗಿದೆ. ಅಲ್ಲದೆ, ಕೆಪಿಎಸ್‌ಸಿ ಅಕ್ರಮದ ತನಿಖೆಯ ದೋಷಾರೋಪ ಪಟ್ಟಿ ಸಲ್ಲಿಸದಂತೆ ಸಿಐಡಿಗೆ ನ್ಯಾಯಪೀಠ ಸೂಚನೆ ನೀಡಿದೆ.



ಕೆಪಿಎಸ್‌ಸಿ ಅಕ್ರಮದ ತನಿಖೆಗೆ ಎಸ್‌ಐಟಿ ರಚಿಸಿ ಹೈಕೋರ್ಟ್ ತೀರ್ಪು ನೀಡಿರುವುದನ್ನು ಪ್ರಶ್ನಿಸಿ ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಸೆ.26ರಂದು ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿತ್ತು.

ತನಿಖಾ ತಂಡದ ನೇತೃತ್ವ ಪುಟ 2ಕ್ಕೆ

## 108 ಅಂಬುಲೆನ್ಸ್ ನೌಕರರ ಬ್ಲ್ಯಾಕ್‌ಮೇಲ್‌ಗೆ ಬಗ್ಗಲ್ಲ: ಖಾದರ್

**ಬೆಂಗಳೂರು:** 108 ಸೇವೆ ಮೇಲೆ ಅವಲಂಬನೆ ಆಗಬೇಡಿ. ಬದಲಿ ವ್ಯವಸ್ಥೆ ಮಾಡಿಕೊಳ್ಳಿ ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ತಿಳಿಸಿದರು.

ಅಂಬುಲೆನ್ಸ್ ಸೇವೆ ಸ್ಥಗಿತಗೊಳಿಸಿ ಎರಡು ತಿಂಗಳು ಮುಷ್ಕರ ಘೋಷಿಸಿರುವ ಕುರಿತು ಮಾತನಾಡಿದ ಯು.ಟಿ. ಖಾದರ್, ನಾವು ವ್ಯವಸ್ಥೆ ಸರಿ ಮಾಡುತ್ತಿದ್ದೇವೆ. ಹೊಸ ಅಂಬುಲೆನ್ಸ್ ಖರೀದಿ ಮಾಡಿ ಸಮಸ್ಯೆ ಸರಿ ಮಾಡುತ್ತೇವೆ. ಎರಡು ತಿಂಗಳು ಕಾಲ 108 ಅಂಬುಲೆನ್ಸ್ ಮೇಲಿನ ಅವಲಂಬನೆ ತಪ್ಪಿಸಿ. ಅಂಬುಲೆನ್ಸ್ ಶಾರ್ಟೇಜ್ ಇದೆ. ನಾವು ಖರೀದಿ ಮಾಡುತ್ತೇವೆ. ಅಲ್ಲಿವರೆಗೆ ನೀವೆ ವ್ಯವಸ್ಥೆ ಮಾಡಿಕೊಳ್ಳಿ ಎಂದು ತಿಳಿಸಿದರು.

ಅಂಬುಲೆನ್ಸ್ ನೌಕರರ ಬ್ಲ್ಯಾಕ್‌ಮೇಲ್‌ಗೆ ನಾನು ಬಗ್ಗಲ್ಲ. ಇವರ ದಬ್ಬಾಳಿಕೆಗೂ ನಾನು ಬಗ್ಗಲ್ಲ. ರೋಗಿಗಳಿಗೆ ತೊಂದರೆ ಆದರೆ ಕಂಪನಿಗಳೇ ಹೊಣೆ. ಮೂರು ತಿಂಗಳಿಗೊಮ್ಮೆ ಬಂದು ಮುಷ್ಕರ ಅಂದರೆ ಏನು ಅರ್ಥ? ಎಂದು ಸಚಿವರು ಕಿಡಿಕಾರಿದರು.



## ಎಚ್‌ಡಿಕೆ ದಾಖಲೆ ನೀಡಲಿ: ಡಿ.ಕೆ.ಶಿವಕುಮಾರ್ ತಿರುಗೇಟು

**ನವದೆಹಲಿ:** ಕೇಂದ್ರ ಸಚಿವ ಕುಮಾರಸ್ವಾಮಿ ಒಳ್ಳೆಯ ವಿಚಾರದ ಬಗ್ಗೆ ರಾಜ್ಯದ ಗಮನ ಸೆಳೆದಿದ್ದಾರೆ. ಎಲ್ಲ ಆರೋಪಗಳಿಗೆ ಕಾಲವೇ ಉತ್ತರಿಸಲಿದೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ವ್ಯಂಗ್ಯವಾಡಿದರು.

ದೆಹಲಿಯಲ್ಲಿ ಮಾಧ್ಯಮಗಳಿಗೆ ಮಂಗಳವಾರ ಪ್ರತಿಕ್ರಿಯೆ ನೀಡಿದರು. ನಿಮ್ಮ ಸಚಿವ ಸಂಪುಟ ಸಹೋದ್ಯೋಗಿಗಳ ಸ್ಟಿಂಗ್ ಆಪರೇಷನ್ ಹಿಂದೆಯೂ ನೀವೇ ಇದ್ದೀರಿ ಎನ್ನುವ ಕುಮಾರಸ್ವಾಮಿ ಆರೋಪದ ಪುಟ 2ಕ್ಕೆ

# ಒಂದೇ ಫ್ಯಾಕ್ಟರಿ ಪ್ರಾಡೆಕ್ಟ್!

## ಸ್ಟಿಂಗ್ ಆಪರೇಷನ್ ಬಗ್ಗೆ ರಾಜಣ್ಣ ಸ್ಫೋಟಕ ಹೇಳಿಕೆ

**ಬೆಂಗಳೂರು:** ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ನಡೆದಿದೆ ಎನ್ನಲಾದ ಸ್ಟಿಂಗ್ ಆಪರೇಷನ್ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಕೆ.ಎನ್.ರಾಜಣ್ಣ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಂಬಂಧಿಸಿದ ಸ್ಟಿಂಗ್ ಆಪರೇಷನ್ ವಿಚಾರ ರಾಜ್ಯ ರಾಜಕೀಯದಲ್ಲಿ ಚರ್ಚೆಗೆ ಗ್ರಾಸವಾಗಿರುವ ಬೆನ್ನಲ್ಲೇ, ಮಾಜಿ ಸಚಿವ ಕೆ.ಎನ್.ರಾಜಣ್ಣ ಮಹತ್ವದ ಹೇಳಿಕೆ ನೀಡಿದ್ದಾರೆ.

ಈ ಹಿಂದೆ ಸ್ಟಿಂಗ್ ಆಪರೇಷನ್ ಮಾಡಿಯೇ ಸಿದ್ದರಾಮಯ್ಯ ಅವರ ರಾಜೀನಾಮೆ ಪಡೆಯಲಾಯಿತೇ ಎಂಬ ಅನುಮಾನವೂ ಇರಬಹುದು. ಅದನ್ನು ತಳ್ಳಿಹಾಕಲು ಸಾಧ್ಯವಿಲ್ಲ ಎಂದು ಗಂಭೀರ ಆರೋಪ ಮಾಡಿದರು.

ರಾಜ್ಯದಲ್ಲಿ ಸ್ಟಿಂಗ್ ಆಪರೇಷನ್‌ಗಳಿಗೆ ಸಂಬಂಧಿಸಿದಂತೆ ಒಂದೇ ರೀತಿಯ ಜಾಲವಿದೆ. ಇದೆಲ್ಲಾ ಒಂದೇ ಫ್ಯಾಕ್ಟರಿಯಲ್ಲಿ ತಯಾರಾಗುತ್ತಿದೆ. ಅದರ ಪಾಲುದಾರರು ಬೇರೆ ಇರಬಹುದು ಎಂದು ರಾಜಣ್ಣ ಮಾರ್ಮಿಕವಾಗಿ ಮಾತನಾಡಿದರು.

ರಮೇಶ್ ಜಾರಕಿಹೊಳಿ ಪ್ರಕರಣದ ಬಗ್ಗೆ ಪ್ರಸ್ತಾಪಿಸಿದ ಅವರು, ಆ ಸ್ಟಿಂಗ್ ಆಪರೇಷನ್ ಅನ್ನು ಯಾರು ನಡೆಸಿದ್ದರೋ ಅವರೇ ಇದನ್ನೂ ಸಹ ನಡೆಸಿದ್ದಾರೆ. ಈ ಪ್ರಕರಣದ ಬಗ್ಗೆ ಮುಖ್ಯಮಂತ್ರಿ ತನಿಖೆ ನಡೆಸಿ, ಜನರಲ್ಲಿರುವ ಅನುಮಾನ ದೂರ ಮಾಡಬೇಕು ಎಂದು ರಾಜಣ್ಣ ಆಗ್ರಹಿಸಿದರು. ಸಿದ್ದರಾಮಯ್ಯ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುವ ವಿಚಾರವನ್ನು ಪ್ರಸ್ತಾಪಿಸಿದರು. ಸ್ಟಿಂಗ್ ಆಗಿರುವುದರಿಂದಲೇ ಅಲ್ಲವೇ ಸಿದ್ದರಾಮಯ್ಯನವರು ತಡೆಯಾಜ್ಞೆ ಪಡೆದುಕೊಂಡಿದ್ದಾರೆ ಎಂದು ಹೇಳಿದರು.



### ಜಾರಕಿಹೊಳಿ ಸಿಡಿ ಬಿಟ್ಟವರೇ ಸಿದ್ದುಗೆ ಸ್ಟಿಂಗ್ ಮಾಡಿದ್ದಾರೆ!

ಈ ಹಿಂದೆ ನನ್ನ ಮೇಲೂ ಸ್ಟಿಂಗ್ ಮಾಡಲು ಪ್ರಯತ್ನ ಮಾಡಿದ್ದರು. ಅದು ಸರ್ಕಾರಿ ನಿವಾಸವಾಗಿದ್ದರಿಂದ ಭದ್ರತೆಗೆ ಸಿಸಿಟಿವಿ ಇರುತ್ತದೆ ಎಂದು ಭಾವಿಸಿದ್ದೆ. ಆದರೆ ನಂತರ ಅಲ್ಲಿ ಸಿಸಿಟಿವಿ ಇಲ್ಲ ಎಂಬುದು ಗೊತ್ತಾಯಿತು ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಬಹಿರಂಗಪಡಿಸಿದರು.

ಈ ಇಡೀ ಬೆಳವಣಿಗೆಯನ್ನು ಬ್ಲ್ಯಾಕ್‌ಮೇಲ್ ತಂತ್ರ ಎಂದು ಬಣ್ಣಿಸಿದ ಅವರು, ಮುಖ್ಯಮಂತ್ರಿಗಳ ಬಳಿ ಎಲ್ಲಾ ತನಿಖಾ ಸಂಸ್ಥೆಗಳಿವೆ. ಜನರಲ್ಲಿರುವ ಗೊಂದಲವನ್ನು ಅವರೇ ತನಿಖೆ ಮಾಡಿಸಿ ದೂರ ಮಾಡಬೇಕು. ರಮೇಶ್ ಜಾರಕಿಹೊಳಿ ಅವರ ಸಿಡಿಯನ್ನು ಯಾರು ಮಾಡಿಸಿದ್ದು ಎಂದು ಪುಟ 2ಕ್ಕೆ

# ರಾಜಕೀಯ ದುರುದ್ದೇಶದಿಂದ ನನ್ನ ವಿರುದ್ಧ ಅಪಪ್ರಚಾರ

## ಸ್ಟಿಂಗ್ ವಿಡಿಯೋಗೂ ನನಗೂ ಸಂಬಂಧವಿಲ್ಲ: ಸಿದ್ದರಾಮಯ್ಯ ಕಳವಳ

**ಬೆಂಗಳೂರು:** ಸಾಮಾಜಿಕ ಜಾಲತಾಣಗಳಲ್ಲಿ ಸ್ಟಿಂಗ್ ಆಪರೇಷನ್ ವಿಡಿಯೋಗೆ ನನ್ನ ಹೆಸರನ್ನು ಜೋಡಿಸಿ ಅಪಪ್ರಚಾರ ನಡೆಸಲಾಗುತ್ತಿದೆ. ಇದು ರಾಜಕೀಯ ದುರುದ್ದೇಶದಿಂದ ನನ್ನ ಚಾರಿಹನನ ಮಾಡುವ ಪ್ರಯತ್ನದಂತೆ ಕಾಣುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕಳವಳ ವ್ಯಕ್ತಪಡಿಸಿದ್ದಾರೆ.



ಈ ಕುರಿತು ಮಂಗಳವಾರ ಎಕ್ಸ್ ಖಾತೆಯಲ್ಲಿ ವಿಷಯ ಹಂಚಿಕೊಂಡಿರುವ ಸಿದ್ದರಾಮಯ್ಯ ಅವರು, ಈ ಸ್ಟಿಂಗ್ ಆಪರೇಷನ್ ವಿಡಿಯೋಗೂ ನನಗೂ ಯಾವುದೇ ಸಂಬಂಧ ಇಲ್ಲ. ಆದರೆ, ಇದನ್ನು ಬಳಸಿಕೊಂಡು ಕೆಲವು ಕಿಡಿಗೇಡಿಗಳು ನನ್ನ ವಿರುದ್ಧ ಅಪಪ್ರಚಾರದಲ್ಲಿ ತೊಡಗಿದ್ದಾರೆ ಎಂದು ಟೀಕಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ನನ್ನ ಹೆಸರಿನ ಉಲ್ಲೇಖ ಇರುವ ಈ ಸ್ಟಿಂಗ್ ಆಪರೇಷನ್ ವಿಡಿಯೋ ಅನ್ನು ಯಾವುದೇ ಪತ್ರಿಕೆ, ಚಾನೆಲ್ ಇಲ್ಲವೇ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಣೆ ಇಲ್ಲವೇ ಪ್ರಸಾರ ಮಾಡದಂತೆ ತಡೆ ನೀಡಬೇಕು ಎಂದು ಕೋರಿ ಬೆಂಗಳೂರು ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದೇನೆ ಎಂದು ತಿಳಿಸಿದ್ದಾರೆ.

ಈ ವಿಷಯದಲ್ಲಿ ನಾನು ಸಂಪೂರ್ಣ ನಿರಪರಾಧಿ ಎನ್ನುವುದು ನನ್ನ ಆತ್ಮಸಾಕ್ಷಿಗೆ ತಿಳಿದಿದೆ. ತೆರೆದ ಪುಸ್ತಕದಂತಿರುವ ನನ್ನ ಐದು ದಶಕಗಳ ರಾಜಕೀಯ ಜೀವನದ ಅರಿವು ಇರುವ ರಾಜ್ಯದ ಜನತೆಗೂ ಇದು ಗೊತ್ತಿದೆ. ಆದರೆ ಆಧುನಿಕ ತಂತ್ರಜ್ಞಾನದ ಯುಗದಲ್ಲಿ ಸುಳ್ಳನ್ನು ಸತ್ಯವಾಗಿ ಬಿಂಬಿಸುವುದು ಸುಲಭದ ಕೆಲಸವಾಗಿದೆ. ಈ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆಯ ಕ್ರಮವಾಗಿ ನಾನು ನ್ಯಾಯಾಲಯದ ಮೆಟ್ಟಿಲು ಏರಿದ್ದೇನೆಯೇ ಹೊರತು ಉಳಿದಂತೆ ಯಾವ ಭಯವೂ ನನಗಿಲ್ಲ. ಅಂತಿಮವಾಗಿ ಸತ್ಯವೇ ಗೆಲ್ಲುತ್ತದೆ ಎನ್ನುವ ವಿಶ್ವಾಸವೂ ನನಗಿದೆ ಎಂದು ಸಿದ್ದರಾಮಯ್ಯ ಬರೆದುಕೊಂಡಿದ್ದಾರೆ.

ನಾನು ಸಂಪೂರ್ಣವಾಗಿ ಅಭಿವ್ಯಕ್ತಿ ಸ್ವಾತಂತ್ರ್ಯದ ಪರವಾಗಿ ಇರುವವನು. ಆದರೆ ಕೆಲವು ಮಾಧ್ಯಮಗಳು ಅಭಿವ್ಯಕ್ತಿ ಸ್ವಾತಂತ್ರ್ಯದ ದುರುಪಯೋಗ ನಡೆಸುತ್ತಿರುವ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ ನ್ಯಾಯಾಲಯದ ಮೂಲಕ ಪ್ರಕಟಣೆ– ಪ್ರಸಾರಕ್ಕೆ ತಡೆಯಾಜ್ಞೆ ತರಬೇಕಾದ ಅನಿವಾರ್ಯತೆ ಇದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಈ ಸ್ಟಿಂಗ್ ಆಪರೇಷನ್ ವಿಡಿಯೊ ಬಗ್ಗೆ ನಿಷ್ಪಕ್ಷಪಾತವಾಗಿ ತನಿಖೆ ನಡೆಸುವಂತೆ ನಾನು ಈಗಾಗಲೇ ನಗರ ಪೊಲೀಸ್ ಆಯುಕ್ತರಿಗೂ ದೂರು ನೀಡಿದ್ದೇನೆ. ಆ ತನಿಖೆಯಿಂದ ಸತ್ಯ ಹೊರಬರಲಿದೆ ಎಂಬ ವಿಶ್ವಾಸವೂ ನನಗಿದೆ ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

# ಮೊದಲ ಪುಟದಿಂದ

## ಸ್ಟಿಂಗ್ ಆಪರೇಷನ್ ವಿಡಿಯೋ ನಕಲಿ

ಎಂದು ಕೇಳಿದಾಗ, ತಪ್ಪು ಮಾಡದಿದ್ದಲ್ಲಿ ಬೇಸರಪಡುವ ಅಗತ್ಯವಿಲ್ಲ. ತಪ್ಪು ಮಾಡಿದಾಗ ಮಾತ್ರ ಒಬ್ಬರು ಬೇಸರಪಡಬೇಕು. ವ್ಯವಸ್ಥೆಯ ಬಗ್ಗೆ ನಾವೇನು ಮಾಡಲು ಸಾಧ್ಯ? ಇಂದು ವ್ಯವಸ್ಥೆಯು ಹದಗೆಟ್ಟ ಸ್ಥಿತಿಯಲ್ಲಿದೆ. ಒಮ್ಮೆ ರಾಜಕೀಯಕ್ಕೆ ಬಂದ ಮೇಲೆ, ಎದುರಾಗುವ ಎಲ್ಲವನ್ನೂ ನಾವು ಎದುರಿಸಲೇಬೇಕು ಎಂದು ಅವರು ಹೇಳಿದರು.

## ದೀಪಾವಳಿ ನಂತರ ಶುಲ್ಕ ಜಾರಿ

ನವೆಂಬರ್ ಎರಡನೇ ವಾರದಲ್ಲಿ ಜಾರಿಯಾಗಲಿದೆ ಎಂದು ತಿಳಿಸಿದೆ.

ಗ್ರಾಹಕರಿಂದ ವ್ಯಾಪಾರಿಗೆ ನಡೆಯುವ ಯುಪಿಐ ವಹಿವಾಟುಗಳ ಮೇಲಿನ ಎಂಡಿಆರ್ ಅನ್ನು ದೀಪಾವಳಿ ಮುಗಿದ ತಕ್ಷಣ ಜಾರಿಗೆ ತರಲು ಯುಪಿಐ ಮತ್ತು ಸರ್ವೀಸಸ್ ಸ್ಟೀರಿಂಗ್ ಕಮಿಟಿ ನಿರ್ಧರಿಸಿದೆ ಎಂದು ಎನ್‌ಪಿಸಿಐ ಮಂಗಳವಾರ ತಿಳಿಸಿದೆ.

## ಪ್ರತಿಭಟನೆ ಹಕ್ಕು ಕಸಿಯಲ್ಲ: ಡಿಕೆಶಿ

ಅದಕ್ಕೆ ಹೊಣೆಗಾರರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಹೇಳಿದರು. ಚುನಾವಣಾ ಆಯೋಗದೊಂದಿಗಿನ ಭಿನ್ನಾಭಿಪ್ರಾಯವಾಗಲಿ, ನನ್ನ ಸರ್ಕಾರದೊಂದಿಗಿನ ಭಿನ್ನಾಭಿಪ್ರಾಯ ವಾಗಲಿ ಅಥವಾ ವೈಯಕ್ತಿಕವಾಗಿ ನನ್ನೊಂದಿಗಿನ ಭಿನ್ನಾಭಿಪ್ರಾಯವಾಗಲಿ, ಶಾಂತಿಯುತವಾಗಿ ಅದನ್ನು ವ್ಯಕ್ತಪಡಿಸುವ ಯಾರೊಬ್ಬರ ಹಕ್ಕನ್ನೂ ಕುಗ್ಗಿಸಲು ಅವಕಾಶ ನೀಡುವುದಿಲ್ಲ ಎಂದರು.

## ಡಿಕೆಶಿ ಸಿಎಂ ಎಂದು ಒಪ್ಪಲ್ಲ

ವ್ಯಕ್ತಿಯ ಕಸುಬೇ ಅಂತಹದ್ದು ಎಂದು ಡಿ.ಕೆ ಶಿವಕುಮಾರ್ ವಿರುದ್ಧ ಕಿಡಿಕಾರಿದರು.ಇಂತಹ ಕೆಟ್ಟ ಬೆಳವಣಿಗೆಗಳನ್ನು ವಿರೋಧಿಸದಿದ್ದರೆ ಮುಂದಿನ ದಿನಗಳಲ್ಲಿ ತಕ್ಕ ಬೆಲೆ ತೆರಬೇಕಾಗುತ್ತದೆ. ಈ ಬಗ್ಗೆ ಉನ್ನತ ತನಿಖೆ ನಡೆಸಿ ಎಂದು ಆಗ್ರಹಿಸಿದರು.

## ಕೈಬಿಡಲು ಸುಪ್ರೀಂ ಅಸ್ತು

ವಹಿಸಬೇಕಾಗಿದ್ದ ಅಧಿಕಾರಿಯನ್ನು ಸ್ವತಃ ಹೈಕೋರ್ಟ್ ಹೆಸರಿಸಿರುವುದಕ್ಕೆ ರಾಜ್ಯ ಸರ್ಕಾರದ ಆಕ್ಷೇಪ ವ್ಯಕ್ತಪಡಿಸಿತ್ತು. ಈ ಪ್ರಕರಣದ ತನಿಖೆಯನ್ನು ಸಿಐಡಿ ಶೇ.80ರಷ್ಟು ಮುಗಿಸಿದೆ. ಹಲವರನ್ನು ಬಂಧಿಸಿ, ಮಹತ್ವದ ದಾಖಲೆ, ಹಣ, ಸಿಸಿಟಿವಿ ದೃಶ್ಯಾವಳಿಗಳನ್ನು ವಶಪಡಿಸಿಕೊಂಡಿದೆ. ಸಿಐಡಿಯ ಅಧಿಕಾರಿಗಳು ದಕ್ಷವಾಗಿ ಕೆಲಸ ಮಾಡುತ್ತಿರುವಾಗ ನಿರ್ದಿಷ್ಟ ಅಧಿಕಾರಿಗಳನ್ನೇ ಹೆಸರಿಸಿ ಎಸ್‌ಐಟಿ ರಚಿಸಲು ಸೂಚಿಸಿರುವುದು ತಪ್ಪು ಸಂದೇಶ ರವಾನಿಸಿದಂತಾಗಿದೆ ಎಂಬುದು ರಾಜ್ಯ ಸರ್ಕಾರದ ವಾದ. ಯಾವ ಅಧಿಕಾರಿಯನ್ನು ತನಿಖಾ ತಂಡಕ್ಕೆ ನೇಮಿಸಬೇಕು ಎಂಬುದು ಸರ್ಕಾರದ ವಿವೇಚನೆಗೆ ಬಿಟ್ಟ ವಿಚಾರ. ನ್ಯಾಯಾಲಯಗಳ ಹಸ್ತಕ್ಷೇಪ ಸರಿಯಲ್ಲ ಎಂದು ಸಿಎಂ ಡಿ.ಕೆ.ಶಿವಕುಮಾರ್ ಹೇಳಿದ್ದರು.

## ಎಚ್‌ಡಿಕೆ ದಾಖಲೆ ನೀಡಲಿ: ಡಿ.ಕೆ.ಶಿವಕುಮಾರ್ ತಿರುಗೇಟು

ಬಗ್ಗೆ ಕೇಳಿದಾಗ, ಬಹಳ ಸಂತೋಷ. ಅವರು ಆರೋಪಕ್ಕೆ ಅದೇನು ದಾಖಲೆಗಳಿವೆಯೋ ಅದನ್ನು ತರಿಸಿ ಅವರಿಗೆ ತಿಳಿಸುತ್ತೇನೆ. ತನಿಖೆ ಮಾಡಲು ಯಾರಿಗೋ ನೀಡಬೇಕು ಎಂದು ಹೇಳಿದ್ದಾರಲ್ಲ, ಅವರಿಗೆ ದಾಖಲೆ ಕೊಡಲಿ ಎಂದು ತಿರುಗೇಟು ನೀಡಿದರು.

ದೆಹಲಿಯಲ್ಲಿ ನಡೆದ ಎಸ್ ಐಆರ್ ಪ್ರತಿಭಟನೆ ವೇಳೆ ರಾಹುಲ್ ಗಾಂಧಿ ಅವರು ನನ್ನನ್ನು ತಳ್ಳಲಿಲ್ಲ. ಪ್ರತಿಭಟನಾಕಾರರು ಹೆಚ್ಚಾಗಿದ್ದರಿಂದ ಹಿಂದೆ ಬರುತ್ತಿದ್ದ ವಾಹನದಲ್ಲಿ ಹತ್ತುವಂತೆ ಸಲಹೆ ನೀಡಿ ನನ್ನ ಬಗ್ಗೆ ಕಾಳಜಿ ತೋರಿದರು ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ಸ್ಪಷ್ಟನೆ ನೀಡಿದರು.

## ಜಾರಕಿಹೊಳಿ ಸಿಡಿ ಬಿಟ್ಟವರೇ ಸಿದ್ದುಗೆ ಸ್ಟಿಂಗ್ ಮಾಡಿದ್ದಾರೆ!

ನೀವೇ ಹೇಳಿ? ಅವರದ್ದು ಮಾಡಿಸಿದವರೇ ಈಗ ಸಿದ್ದರಾಮಯ್ಯ ಅವರದ್ದನ್ನೂ ಮಾಡಿಸಿದ್ದಾರೆ ಎಂದು ಆರೋಪಿಸಿದರು.

ಇದರಿಂದ ಇಡೀ ಕರ್ನಾಟಕದ ಮಾನ, ಮರ್ಯಾದೆ ಹರಾಜಾಗುತ್ತಿದೆ. ನಮ್ಮ ಗೌರವವನ್ನು ನಾವೇ ಕಳೆದುಕೊಳ್ಳುತ್ತಿದ್ದೇವೆ. ಮುಖ್ಯಮಂತ್ರಿಗಳೇ ಅಸಹಾಯಕರಂತೆ ಮಾತನಾಡಿದರೆ ಹೇಗೆ? ತನಿಖೆ ನಡೆಸಿ ಎಲ್ಲವನ್ನೂ ಬಹಿರಂಗಪಡಿಸಿದರೆ ಈ ಸ್ಟಿಂಗ್ ದಂಧೆ ಇಲ್ಲಿಗೇ ನಿಲ್ಲುತ್ತದೆ ಎಂದು ಆಗ್ರಹಿಸಿದರು.

# ಸಮುದಾಯಭವನಕ್ಕೆ ಭೂಮಿಪೂಜೆ



ಚಾಮರಾಜನಗರ, ನಗರದ ಯಡಬೆಟ್ಟದ ಸಮೀಪ ಬುಡಕಟ್ಟು ಆದಿವಾಸಿ ಸಮುದಾಯದ ಅನುಕೂಲಕ್ಕಾಗಿ 3.90 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಿರುವ ಸಮುದಾಯ ಭವನದ ಕಾಮಗಾರಿಗೆ ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಸಿ. ಪುಟ್ಟರಂಗಶೆಟ್ಟಿ ಅವರು ಇಂದು ಭೂಮಿ ಪೂಜೆ ನೆರವೇರಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರು ಮಾತನಾಡಿ ಬುಡಕಟ್ಟು ಆದಿವಾಸಿ ಸಮುದಾಯದ ಜನರಿಗೆ ಅನುಕೂಲವಾಗುವ ಉದ್ದೇಶದಿಂದ ಜಿಲ್ಲಾ ಕೇಂದ್ರದಲ್ಲಿ ಸಮು ದಾಯ ಭವನ ನಿರ್ಮಿಸಲಾಗುತ್ತಿದೆ. ಈ ಭವನವು ಸಮುದಾಯದ ವಿವಿಧ ಕಾರ್ಯ ಕ್ರಮಗಳು ಹಾಗೂ ಸಭೆ-ಸಮಾರಂಭಗಳನ್ನು ಆಯೋಜಿಸಲು ಸಹ ಕಾರಿಯಾಗಲಿದೆ. ಸಮು ದಾಯ ಭವನವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಸಮುದಾಯ ಭವನದ ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವುದರ ಜೊತೆಗೆ ಗುಣಮಟ್ಟವನ್ನು ಕಾಯ್ದುಕೊಂಡು ನಿರ್ಮಾಣ ಕಾರ್ಯ ಕೈಗೊಳ್ಳಬೇಕು ಎಂದು ಸಚಿವರು ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರಾದ ಕೇತಮ್ಮ, ಮುಖಂಡರಾದ ಜಡೆಯಪ್ಪ, ಡಾ. ಸಿ.ಮಾದೇಗೌಡ, ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಸುಬ್ಬರಾಯ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಕಚೇರಿ ಅಧೀಕ್ಷಕರಾದ ಶ್ರೀನಿವಾಸ ಮೂರ್ತಿ, ತಾಲೂಕು ಕಚೇರಿಯ ವ್ಯವಸ್ಥಾಪಕರಾದ ಸುರೇಶ್, ಮನೋಹರ್ ಇತರರು ಉಪಸ್ಥಿತರಿದ್ದರು.

# ವೇದಿಕೆ ನಿರ್ಮಾಣಕ್ಕೆ ಚಾಲನೆ



ಚಾಮರಾಜನಗರ, ನಗರದಲ್ಲಿ ಅಕ್ಟೋಬರ್ 17, 18 ಮತ್ತು 19ರಂದು ನಡೆಯಲಿರುವ ದಸರಾ ಮಹೋತ್ಸವದ ಅಂಗವಾಗಿ ವೇದಿಕೆ ನಿರ್ಮಾಣ ಕಾರ್ಯಕ್ಕೆ ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಸಿ. ಪುಟ್ಟರಂಗಶೆಟ್ಟಿ ಅವರು ಇಂದು ಭೂಮಿ ಪೂಜೆ ನೆರವೇರಿಸಿದರು.

**ಚಾಮರಾಜನಗರ ದಸರಾ ಮಹೋತ್ಸವ**

ನಗರದ ಚಾಮರಾಜೇಶ್ವರ ದೇವಾಲಯದ ಮುಂಭಾಗದಲ್ಲಿ ದಸರಾ ಕಾರ್ಯಕ್ರಮಗಳು ನಡೆಯಲಿರುವ ಬೃಹತ್ ವೇದಿಕೆ ಹಾಗೂ ವಿಶಾಲವಾದ ಶಾಮಿಯಾನ, ಇನ್ನಿತರ ಕಾರ್ಯಗಳ ನಿರ್ಮಾಣಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ಚಾಮರಾಜನಗರ ದಸರಾ ಮಹೋತ್ಸವಕ್ಕೆ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲಾಗುತ್ತಿದೆ. ಮೂರು ದಿನಗಳ ಕಾಲ ನಡೆಯಲಿರುವ ಉತ್ಸವದ ಅಂಗವಾಗಿ ವಿವಿಧ ಸಾಂಸ್ಕೃತಿಕ ಹಾಗೂ ಮನರಂಜನಾ ಕಾರ್ಯಕ್ರಮಗಳನ್ನು ಆಯೋಜಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು. ನಗರಸಭೆ ಪೌರಾಯುಕ್ತರಾದ ಪರಶುರಾಮ್ ಛಲವಾದಿ, ನಗರಸಭೆ ಮಾಜಿ ಅಧ್ಯಕ್ಷರಾದ ಸುರೇಶ್ ನಾಯಕ, ಮಾಜಿ ಉಪಾಧ್ಯಕ್ಷರಾದ ರಾಜಪ್ಪ, ಮಾಜಿ ಸದಸ್ಯರಾದ ಶಿವಣ್ಣ, ಬಂಗಾರ ನಾಯಕ, ಚಾಮುಲ್ ಸದಸ್ಯರಾದ ನಾಗಯ್ಯ, ಅರ್ಚಕರಾದ ರಾಮಕೃಷ್ಣ ಭಾರದ್ವಾಜ್, ನಗರಸಭೆಯ ಹಿರಿಯ ಆರೋಗ್ಯ ನಿರೀಕ್ಷಕರಾದ ಮಂಜುನಾಥ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ದಸರೆಯಲ್ಲಿ ಮಹಿಳೆಯರ ದರ್ಬಾರ್

## ಅರಮನೆ ಅಂಗಳದಲ್ಲಿ ರಂಗೋಲಿ ಚಿತ್ತಾರ, ಸಾಂಸ್ಕೃತಿಕ ನೃತ್ಯ, ಗಾಯನದ ಸಂಭ್ರಮ

ಮೈಸೂರು: ನವರಾತ್ರಿ ದಸರೆ ಮೂರನೇ ದಿನದಂದು ಮಹಿಳಾ ದಸರೆಗೆ ಭವ್ಯ ಚಾಲನೆ ದೊರೆತಿದ್ದು, ಮೊದಲ ದಿನದಂದೆ ಅರಮನೆ ಅಂಗಳದಿ ರಂಗೋಲಿ ಚಿತ್ತಾರ ಮೂಡಿದ್ದರೆ, ಸಂಜೆ ಜೆ.ಕೆ.ಮೈದಾನದಲ್ಲಿ ನಡೆದ ಸಾಂಸ್ಕೃತಿಕ ನೃತ್ಯ, ಗಾಯನದಲ್ಲಿ ಸಾವಿರಾರು ಮಹಿಳೆಯರು ಪಾಲ್ಗೊಂಡು ಇಡೀ ದಿನ ನಗರದಲ್ಲಿ ಮಹಿಳೆಯರು ತಮ್ಮ ದರ್ಬಾರ್ ನಡೆಸಿ ಸಂಭ್ರಮಿಸಿದರು.

ಮುಂಜಾನೆ ನಗರದ ಅರಮನೆಯ ಕೋಟೆ ಆಂಜನೇಯ ದೇವಾಲಯದ ಆವರಣದಲ್ಲಿ ಆಯೋಜಿಸಿದ್ದ ರಂಗೋಲಿ ಸ್ಪರ್ಧೆಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ 265ಕ್ಕೂ ಹೆಚ್ಚು ಮಂದಿ ಭಾಗವಹಿಸಿ ಸಂಭ್ರಮಿಸಿದರು. ಇದರಲ್ಲಿ ಮೈಸೂರಿನ 63 ವರ್ಷದ ಸರಸಮ್ಮ ಪ್ರಥಮ ಬಹುಮಾನ ಪಡೆದು ಸಂಭ್ರಮಿಸಿದರು. ಶ್ರೀರಂಗಪಟ್ಟಣ ತಾಲ್ಲೂಕಿನ ಗಾಮಿನಗಳ್ಳಿ ಸಾವಿತ್ರಿ(ದ್ವಿ), ವಿಜಯನಗರದ ನಿವಾಸಿ ಮಾಲಾ (ತೃ) ಬಹುಮಾನ ಪಡೆದುಕೊಂಡರು. ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಶಾಸಕ ಶ್ರೀವತ್ಸ ಮಾತನಾಡಿ, ನವರಾತ್ರಿ ಸಂಭ್ರಮದಲ್ಲಿ ಮಹಿಳೆಯರೆಲ್ಲರೂ ಒಗ್ಗೂಡಿ ನಮ್ಮ ಸಂಸ್ಕೃತಿ, ಪರಂಪರೆಯ ಸಂಕೇತವಾದ ರಂಗೋಲಿಯನ್ನು ಬಿಡಿಸಿರುವುದು ನಿಜಕ್ಕೂ ಸಂತಸದ ಸಂಗತಿ. ನಾಡಿನ ತಾಯಿ ಚಾಮುಂಡೇಶ್ವರಿ ಎಲ್ಲರಿಗೂ ಒಳಿತು ಮಾಡಲಿ. ನಿಮ್ಮ ಕಲೆ ವೈವಿಧ್ಯಮಯವಾಗಿ ಎಲ್ಲರನ್ನು ಆಕರ್ಷಿಸುತ್ತಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ,ಅಪರ ಜಿಲ್ಲಾಧಿಕಾರಿ ಆರ್. ಐಶ್ವರ್ಯ, ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿ ಅಧ್ಯಕ್ಷೆ ಚೂಡಾಮಣಿ, ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿ ಕಾರ್ಯದರ್ಶಿ ನಾಗರಾಜ್, ಆರ್.ಬಿ.ಎಂ. ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿ ಉಪವಿಶೇಷಾಧಿಕಾರಿ ಕೆ.ಜಿ.ಎಸ್.ಸವಿತಾ ಹಾಗೂ



ಮತ್ತಿತರರು ಉಪಸ್ಥಿತರಿದ್ದರು.

ಬಳಿಕ ಜೆ.ಕೆ.ಮೈದಾನದಲ್ಲಿ ಆಯೋಜಿಸಿದ್ದ ಮಹಿಳಾ ಮತ್ತು ಮಕ್ಕಳ ದಸರೆಯ ವೇದಿಕೆ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸಿ ಮಾತನಾಡಿ ಮಹಿಳೆಯರೇ ಈ ಸಮಾಜದ ಶಕ್ತಿ ಹಾಗೂ ಕುಟುಂಬದ ಆಧಾರ ಸ್ತಂಭ ಹಾಗಾಗಿ ಮಹಿಳೆಯರಿಗೆ ಎಲ್ಲಾ ಕ್ಷೇತ್ರಗಳಲ್ಲಿ ಹೆಚ್ಚಿನ ಅವಕಾಶ ಸಿಗಬೇಕು. ಮಹಿಳೆಯರಿಗೆ ಹಿಂದಿನ ಕಾಲದಿಂದಲೂ ಸಮಾನವಾದ ಅವಕಾಶಗಳು ಸಿಕ್ಕಿಲ್ಲ, ಸರಿಯಾದ ಅವಕಾಶ ಸಿಕ್ಕರೆ ಮಹಿಳೆಯರ ಶಕ್ತಿ ಏನೆಂದು ಎಲ್ಲರಿಗೂ ತಿಳಿಯಲಿದೆ ಎಂದು ಹೇಳಿದರು. ರೇಷ್ಮೆ ಹಾಗೂ ಪಶು ಸಂಗೋಪನಾ ಸಚಿವ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ದಸರಾ ಮಹೋತ್ಸವ ಎಂದರೆ ಚಾಮುಂಡೇಶ್ವರಿ ತಾಯಿಯ ಹಬ್ಬ ಹಾಗಾಗಿ ಮಹಿಳೆಯರು ಇದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಮಹಿಳೆಯರು ಯಾವುದಕ್ಕೂ ಹಿಂಜರಿಯಬಾರದು ಇದು ನಿಮ್ಮ ಕಾರ್ಯಕ್ರಮವೆಂದರು.

ವೇದಿಕೆ ಕಾರ್ಯಕ್ರಮದ ಬಳಿಕ ಸಾಮೂಹಿಕ ನೃತ್ಯ, ಜಾನಪದ ನೃತ್ಯ ಹಾಗೂ ಗಾಯನ ಕಾರ್ಯಕ್ರಮ ನಡೆಯಿತು. ಒಲೆ ರಹಿತ ಅಡುಗೆ ಸ್ಪರ್ಧೆಯಲ್ಲಿ ಅನೇಕರು ಭಾಗವಹಿಸಿ ಸಂಭ್ರಮಿಸಿದರು. ಇದೇ ವೇಳೆ 50ಕ್ಕೂ ಹೆಚ್ಚು ಮಹಿಳೆಯರು ಸ್ವ ಉದ್ಯಮದ ಮಳಿಗೆಗಳಲ್ಲಿ ವಿವಿಧ ಮನೆಗಳ ಅಲಂಕಾರಿಕ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ಕಂಡು ಬಂದಿತು. ಶಾಸಕ ಹರೀಶ್ ಗೌಡ, ಮಹಿಳಾಭಿವೃದ್ಧಿ ನಿಗಮದ ಅಧ್ಯಕ್ಷೆ ಪದ್ಮಾವತಿ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ರಾಜ್ಯಾ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ಹಾಡ್ಯ ರಂಗಸ್ವಾಮಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಎಸ್.ಅರುಣ್ ಕುಮಾರ್, ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿ ಅಧ್ಯಕ್ಷೆ ಚೂಡಾಮಣಿ ಇದ್ದರು.



## ಇತ್ತೀಚಿನ ಮಹಿಳೆಯರಲ್ಲಿ ಕಾಣದ ಸಹಿಷ್ಣುತೆ: ಪ್ರೊ.ಸುತ್ತೂರು ಮಾಲಿನಿ

ಮೈಸೂರು: ಅಳು ಎಂಬುದು ಹೆಣ್ಣು ಮಕ್ಕಳಿಗೆ ಕೊಟ್ಟ ವರ ಆಗಿದೆ. ಒತ್ತಡದಲ್ಲೇ ಮಹಿಳೆಯರಿಗೆ ಹೃದಯಾಘಾತ ಕಮ್ಮಿ ಎಸ್ಟ್ರೋಜೆನ್ ಆರ್ಮೋನ್ ಮಹಿಳೆಯರ ದೇಹದಲ್ಲಿದೆ. ಪರಸ್ಪರ ಆದಿಶಕ್ತಿ ಚೇತನ ಸೇರಿದರೆ ಬದುಕು ಸುಂದರ ಆಗುತ್ತದೆ. ಸಹಿಷ್ಣುತೆ ಕಡಿಮೆ ಆಗುತ್ತಿದೆ ಎಂದು ಪ್ರೊ.ಸುತ್ತೂರು ಮಾಲಿನಿ ಅಭಿಪ್ರಾಯ ಪಟ್ಟರು.

ಮಹಿಳಾದಸರಾ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡಿದ ಅವರು, ಋತುಚಕ್ರ, ಹೆರಿಗೆ ನೋವಿನ ಸಂದರ್ಭ ಒಬ್ಬ ಕ್ಯಾನ್ಸರ್ ಅನುಭವಿಸುವಷ್ಟು ನೂರು ಪಟ್ಟು ನೋವು ಹೆಚ್ಚಾಗಿರುತ್ತದೆ. ಆದರೆ, ಇತ್ತೀಚಿನ ದಿನಗಳಲ್ಲಿ ಸಿಸರಿಂಗ್ ಹೆಚ್ಚಾಗಿದೆ. ಹೀಗಾಗಿ ಮಹಿಳೆಯರಲ್ಲಿ ಇತ್ತೀಚಿನ ದಿನಗಳಲ್ಲಿ ಸಹಿಸಿಕೊಳ್ಳುವ ಶಕ್ತಿ ಕಡಿಮೆಯಾಗಿ ಸಂಸಾರದಲ್ಲಿ ಜಗಳ ಹೆಚ್ಚಾಗುತ್ತಿದೆ ಎಂದರು.

ಮಹಿಳಾ ಶಕ್ತಿ ಏಕೆಂದರೆ ಗಂಡಿಗೆ ಆಗಲ್ಲ ಎನ್ನುವ ಸಂದರ್ಭದಲ್ಲಿ ಆಗ ಸ್ತ್ರೀ ಆ ಸಮಸ್ಯೆ ಬಗೆಹರಿಸುತ್ತಾಳೆ. ಮೈಟ್ರೋಕಾಂಡ್ರೀಯಾ ಎನರ್ಜಿ ಎಂಬ ಶಕ್ತಿ ತಾಯಿಯಿಂದ ಬಂದಿದೆ. ಈ ಕಾರಣಕ್ಕೆ ಇಡೀ ಜಗತ್ತಿನಲ್ಲಿರುವ ಎಲ್ಲರ ಶಕ್ತಿ ತಾಯಿಯಿಂದ ಬಂದಿರುವ ಕಾರಣಕ್ಕೆ ಆದಿ ಶಕ್ತಿ. ಹೆಣ್ಣಿನ ಅರ್ಥ ಮಾಡಿಕೊಳ್ಳುವ ಗಂಡಸ್ಸು ಇದುವರೆವಿಗೂ ಹುಟ್ಟಿಲ್ಲ. ಹೀಗೆ ಹೆಣ್ಣಿನ ಮೆದುಳು ಅರಿಯಲು ಸಾಧ್ಯವಿಲ್ಲ. ಸಬಲೀಕರಣ ಆಗಿಲ್ಲವೆಂಬುದು ಸುಳ್ಳು ಸದ್ಯ ಸಬಲೀಕರಣ ಆಗಿದೆ. ಮಹಿಳೆಯರು ಮಲ್ಟಿ ಟಾಸ್ಕರ್ ಆಗಿದ್ದಾರೆ. ಎಲ್ಲಾ ಕೆಲಸವನ್ನು ಎಕಕಾಲದಲ್ಲಿ ಮಾಡುವ ಶಕ್ತಿ ಮಹಿಳೆಯರಿಗೆ ಮಾತ್ರ ಇರುವುದಾಗಿದೆ. ಭಾವನಾತ್ಮಕ ಜ್ಞಾಪನ ಶಕ್ತಿ ಹೆಚ್ಚಾಗಿ ಮಹಿಳೆಯರಿಗೆ ಇರುತ್ತದೆ. ಭಾವನಾತ್ಮಕ ಜ್ಞಾಪನ ಶಕ್ತಿ ಪುರುಷರಿಗೆ ಇರುವುದಿಲ್ಲ. ಕುಟುಂಬದ ಆರೋಗ್ಯ ಹೆಣ್ಣು ಮಕ್ಕಳ ಕೈಯಲ್ಲಿದೆ. ಆರೋಗ್ಯ, ಸಂತೋಷ, ನೆಮ್ಮದಿ ಹೆಣ್ಣು ಮಕ್ಕಳ ಕೈಯಲ್ಲಿ ಇರುವ ಕಾರಣಕ್ಕೆ ಆದಿಶಕ್ತಿ ಆಗಿದ್ದಾಳೆ ಎಂದು ಹೇಳಿದರು.

# ಜಿ.ತಾ.ಪಂ ಚುನಾವಣೆಗಳಲ್ಲಿ ಒಳಮೀಸಲಾತಿ ಜಾರಿಗೆ ಮಾದಿಗ ಸಮಾಜದ ಆಗ್ರಹ: ಹೋರಾಟದ ಎಚ್ಚರಿಕೆ

**ಮೈಸೂರು:** ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಪರಿಶಿಷ್ಟ ಜಾತಿಗಳ ಒಳಮೀಸಲಾತಿಯನ್ನು ಜಾರಿಗೊಳಿಸಿ, ಮಾದಿಗ ಸಮಾಜಕ್ಕೆ ನ್ಯಾಯಯುತವಾದ ರಾಜಕೀಯ ಪ್ರಾತಿನಿಧ್ಯ ಕಲ್ಪಿಸಬೇಕು. ಅಕ್ಟೋಬರ್ 19ರೊಳಗೆ ಈ ಕುರಿತು ಸೂಕ್ತ ಕ್ರಮ ಕೈಗೊಳ್ಳದಿದ್ದರೆ ರಾಜ್ಯಾದ್ಯಂತ ಹೋರಾಟ ನಡೆಸಲಾಗುವುದು ಎಂದು ಮಾದಿಗ ಸಮಾಜದ ಮುಖಂಡರು ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಮೈಸೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಧ್ಯಕ್ಷ ಅರುಣ್ ಕುಮಾರ್, ರಾಜ್ಯದ 31 ಜಿಲ್ಲೆಗಳಲ್ಲಿ ಒಟ್ಟು 1,129 ಜಿಲ್ಲಾ ಪಂಚಾಯಿತಿ ಸ್ಥಾನಗಳು ಹಾಗೂ 3,656 ತಾಲ್ಲೂಕು ಪಂಚಾಯಿತಿ ಸ್ಥಾನಗಳಿದ್ದು, ಈ ಚುನಾವಣೆಗಳಲ್ಲಿ ಒಳಮೀಸಲಾತಿ ಅನ್ವಯವಾಗುವಂತೆ ಕ್ಷೇತ್ರಗಳನ್ನು ಗುರುತಿಸಿ ಅಧಿಸೂಚನೆ ಹೊರಡಿಸಬೇಕು. ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಪರಿಶಿಷ್ಟ ಜಾತಿಗಳ ಒಳಮೀಸಲಾತಿಯನ್ನು ಜಾರಿಗೊಳಿಸಿ, ಮಾದಿಗ ಸಮಾಜಕ್ಕೆ ನ್ಯಾಯಯುತವಾದ ರಾಜಕೀಯ ಪ್ರಾತಿನಿಧ್ಯ ಕಲ್ಪಿಸಬೇಕು. ಅಕ್ಟೋಬರ್ 19ರೊಳಗೆ ಈ ಕುರಿತು ಸೂಕ್ತ ಕ್ರಮ ಕೈಗೊಳ್ಳದಿದ್ದರೆ ರಾಜ್ಯಾದ್ಯಂತ ಹೋರಾಟ ನಡೆಸಲಾಗುವುದು ಎಂದು ಮಾದಿಗ ಸಮಾಜದ ಮುಖಂಡರು ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಸಮಾಜದ ಮುಖಂಡರು, ರಾಜ್ಯದ 31 ಜಿಲ್ಲೆಗಳಲ್ಲಿ ಒಟ್ಟು 1,129 ಜಿಲ್ಲಾ ಪಂಚಾಯಿತಿ ಸ್ಥಾನಗಳು ಹಾಗೂ 3,656 ತಾಲ್ಲೂಕು ಪಂಚಾಯಿತಿ ಸ್ಥಾನಗಳಿದ್ದು, ಈ ಚುನಾವಣೆಗಳಲ್ಲಿ ಒಳಮೀಸಲಾತಿ ಅನ್ವಯವಾಗುವಂತೆ ಕ್ಷೇತ್ರಗಳನ್ನು ಗುರುತಿಸಿ ಅಧಿಸೂಚನೆ ಹೊರಡಿಸಬೇಕು ಎಂದು ಒತ್ತಾಯಿಸಿದರು.

ಮೈಸೂರು ಜಿಲ್ಲೆಯಲ್ಲಿ ಒಟ್ಟು 46 ಜಿಲ್ಲಾ ಪಂಚಾಯಿತಿ ಸ್ಥಾನಗಳಿದ್ದು, ಅವುಗಳಲ್ಲಿ 10 ಸ್ಥಾನಗಳನ್ನು ಪರಿಶಿಷ್ಟ ಜಾತಿಗೆ ಮೀಸಲಿಡಲಾಗಿದೆ. ಅದೇ ರೀತಿ, 163 ತಾಲ್ಲೂಕು ಪಂಚಾಯಿತಿ ಸ್ಥಾನಗಳಲ್ಲಿ 34 ಸ್ಥಾನಗಳು ಪರಿಶಿಷ್ಟ ಜಾತಿಗೆ ಮೀಸಲಾಗಿವೆ. ಚಾಮರಾಜನಗರ ಜಿಲ್ಲೆಯಲ್ಲಿ 28 ಜಿಲ್ಲಾ ಪಂಚಾಯಿತಿ ಸ್ಥಾನಗಳ ಪೈಕಿ ಏಳು ಹಾಗೂ 83 ತಾಲ್ಲೂಕು ಪಂಚಾಯಿತಿ ಸ್ಥಾನಗಳ ಪೈಕಿ 22 ಸ್ಥಾನಗಳು ಪರಿಶಿಷ್ಟ ಜಾತಿಗೆ ಮೀಸಲಾಗಿವೆ. ಒಳಮೀಸಲಾತಿ ಜಾರಿಯ ವಿಚಾರದಲ್ಲಿ ಸರ್ಕಾರ ಸ್ಪಷ್ಟ ನಿರ್ಧಾರ ಕೈಗೊಳ್ಳದಿರುವುದರಿಂದ ಚುನಾವಣೆಯಲ್ಲಿ ಸ್ಪರ್ಧಿಸಲು ಆಸಕ್ತಿ ಹೊಂದಿರುವ ಮಾದಿಗ ಸಮಾಜದ ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತಿದೆ ಎಂದು ಆರೋಪಿಸಿದರು. ಸಮಾಜದ ಪದಾಧಿಕಾರಿಗಳಾದ ಮಾಳಪ್ಪ, ಲಕ್ಷ್ಮಿನಾರಾಯಣ್, ಸುರೇಂದ್ರ ಕುಮಾರ್, ಎಮ್.ದಾಸಯ್ಯ ಇದ್ದರು

# ಹಿಂದುಳಿದ ವರ್ಗಗಳ ಸಬಲೀಕರಣಕ್ಕೆ ಬದ್ಧ

ಮೈಸೂರು: ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸರ್ಕಾರದ ಯೋಜನೆಗಳು ತಲುಪಬೇಕು ಎಂಬುದು ಕೇಂದ್ರ ಸರ್ಕಾರದ ಮುಖ್ಯ ಉದ್ದೇಶವಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರ ಹಿಂದುಳಿದ ವರ್ಗಗಳು, ಹಿರಿಯ ನಾಗರಿಕರು ಹಾಗೂ ದಿವ್ಯಾಂಗರ ಸರ್ವಾಂಗೀಣ ಅಭಿವೃದ್ಧಿಗಾಗಿ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಹಲವಾರು ಜನಪರ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯಖಾತೆ ಸಚಿವ ರಾಮದಾಸ್ ಅಠಾವಳೆ ಹೇಳಿದರು.

ಮೈಸೂರಿನಲ್ಲಿ ನಡೆದ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿ, ಇಂತಹ ಶೋಷಿತ ಹಾಗೂ ವಂಚಿತ ಸಮುದಾಯಗಳ ಆರ್ಥಿಕ ಸ್ವಾವಲಂಬನೆಗಾಗಿ ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ನಿಗಮಗಳ ಮೂಲಕ 1.5 ಲಕ್ಷದಿಂದ 35 ಲಕ್ಷದವರೆಗೆ ಅತಿ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಸಣ್ಣ ಉದ್ಯಮಿಗಳು, ಕರಕುಶಲ ಕರ್ಮಿಗಳು ಮತ್ತು ದಿವ್ಯಾಂಗ ಕಲಾವಿದರು ತಯಾರಿಸುವ ವಿಶಿಷ್ಟ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಅವಕಾಶ ಹಾಗೂ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ದೇಶಾದ್ಯಂತ 'ಸಮಾಗಮ ಮೇಳ' ಮತ್ತು 'ದಿವ್ಯ ಕಲಾ ಮೇಳ'ಗಳನ್ನು ನಿರಂತರವಾಗಿ ಆಯೋಜಿಸಲಾಗುತ್ತಿದೆ. ಈ ಮೇಳಗಳು ಕೇವಲ ವ್ಯಾಪಾರಕ್ಕಷ್ಟೇ ಸೀಮಿತವಾಗದೆ, ಕುಶಲಕರ್ಮಿಗಳಿಗೆ ಸ್ವಾವಲಂಬಿ ಜೀವನ ರೂಪಿಸಿಕೊಳ್ಳಲು ಉತ್ತಮ ವೇದಿಕೆಯಾಗಿವೆ ಎಂದು ಅಭಿಪ್ರಾಯಪಟ್ಟರು.




ಒಕ್ಕೂಟ ವ್ಯವಸ್ಥೆ ಮತ್ತು ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ಪರಿಶಿಷ್ಟ ಜಾತಿಗೆ ಶೇ.15 ಹಾಗೂ ಪರಿಶಿಷ್ಟ ಪಂಗಡಕ್ಕೆ ಶೇ.7.5 ಮೀಸಲಾತಿಯನ್ನು ಕಲ್ಪಿಸಲಾಗಿದೆ. ಅಂತೆಯೇ ಮಂಡಲ್ ಆಯೋಗದ ಶಿಫಾರಸಿನಂತೆ ಇತರ ಹಿಂದುಳಿದ ವರ್ಗಗಳಿಗೆ ಶೇ.27 ಮೀಸಲಾತಿಯನ್ನು ಜಾರಿಗೆ ತರಲಾಗಿದ್ದು, ಸಾಮಾಜಿಕ ಸಮಾನತೆಯನ್ನು ಎತ್ತಿಹಿಡಿಯಲಾಗುತ್ತಿದೆ. ಪ್ರಧಾನಮಂತ್ರಿ ಜನಧನ್ ಯೋಜನೆ, ಪ್ರಧಾನಮಂತ್ರಿ ಮುದ್ರಾ ಯೋಜನೆ, ಉಜ್ವಲ ಯೋಜನೆ, ಪ್ರಧಾನಮಂತ್ರಿ ಆವಾಸ್ ಯೋಜನೆ ಹಾಗೂ ಆಯುಷ್ಮಾನ್ ಭಾರತ್ ನಂತಹ ಹಲವು ಪ್ರಮುಖ ಯೋಜನೆಗಳು ದೇಶದ ಕೋಟ್ಯಂತರ ಬಡ ಮತ್ತು ಮಧ್ಯಮ ವರ್ಗದ ಜನರ ಜೀವನದಲ್ಲಿ ಗಮನಾರ್ಹ ಬದಲಾವಣೆ ತಂದಿವೆ. ಈ ಯೋಜನೆಗಳ ನೇರ ಲಾಭವು ಸಮಾಜದ ನೈಜ ಫಲಾನುಭವಿಗಳನ್ನು ತಲುಪುತ್ತಿದ್ದು, ದೇಶವನ್ನು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಶಕ್ತಗೊಳಿಸಲಾಗುತ್ತಿದೆ ಎಂದು ಹೇಳಿದರು.

## ನೈಸ್ ಹೆದ್ದಾರಿಗೆ ಕುರಿತ ಸರ್ಕಾರದ ನಿಲುವು ತಿಳಿಸಲಿ

ಮೈಸೂರು: ನೈಸ್ ಹೆದ್ದಾರಿಗೆ ಸಂಬಂಧಿಸಿದಂತೆ ಭೂಸ್ವಾಧೀನಕ್ಕಾಗಿ ಸರ್ಕಾರ ಹೊರಡಿಸಿದ್ದ ಅಧಿಸೂಚನೆಗಳನ್ನು ಹೈಕೋರ್ಟ್ ವಿಭಾಗೀಯ ಪೀಠದ ರದ್ದುಗೊಳಿಸಿದೆ. ಯೋಜನೆ ಅನುಷ್ಠಾನದಲ್ಲಿ ಆಗಿರುವ ವ್ಯತ್ಯಾಸ ಹಾಗೂ ಬೃಹತ್ ಪ್ರಮಾಣದ ಭೂ ಬಳಕೆಗಳು ಇದಕ್ಕೆ ಕಾರಣವಾಗಿವೆ. ಹೀಗಾಗಿ ಸರ್ಕಾರ ಈ ಕುರಿತು ತನ್ನ ನಿಲುವನ್ನು ಸಾರ್ವಜನಿಕರಿಗೆ ತಿಳಿಸಬೇಕೆಂದು ವಕೀಲ ಕೆ.ವಿ.ಹೃತಿಕ್ ಗೌಡ ಆಗಹಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಭೂಸ್ವಾಧೀನ ಅಧಿಸೂಚನೆಗಳನ್ನು ನ್ಯಾಯಾಲಯ ರದು ಪಡಿಸಿರುವುದರಿಂದಾಗಿ ಯೋಜನೆಯ ಪ್ರತಿಯೊಂದೂ ರಸೆಯಲ್ಲಿನ ಟೋಲ್ ವಸೂಲಿ ಸಯಂ ಚಾಲಿತವಾಗಿ ರದಾಗುತದೆ. ಆದರೂ ಸಂಬಂಧಿತ ರಸ್ತೆ, ಭೂಸ್ವಾಧೀನ, ಯೋಜನಾ ಒಪಂದ, ಟೋಲ್ ವಸೂಲಿಗೆ ನೀಡಿರುವ ಅನುಮತಿ ಮತ್ತು ನ್ಯಾಯಾಲಯದ ಆದೇಶಗಳ ವ್ಯಾಪಿ ಪರಿಶೀಲಿಸಿ ಟೋಲ್ ವಸೂಲಿಗೆ ಕಾನೂನುಬದ್ಧ ಅಧಿಕಾರವಿದೆಯೇ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು. ಇದಲ್ಲದೆ ಸುಮಾರು 25 ವರ್ಷ ಹಿಂದೆ ಯೋಜನೆಗೆ ಭೂಮಿ ನೀಡಿದ್ದರೂ ಬಹಳಷ್ಟು ಮಂದಿಗೆ ಇನ್ನೂ ಪರಿಹಾರ ನೀಡಿಯೇ ಇಲ್ಲ. ಹೀಗಾಗಿ ಇವರ ಭೂಮಿ ವಾಪಸು ನೀಡಬೇಕೆಂದು ಆಗ್ರಹಿಸಿದರು. ಎಂ.ಎನ್. ತೃಪೇಶ್, ಪಥಮ್ ಕಾಮತ್ ಇದ್ದರು.

ದಾರಿ ಯುದ್ದಕ್ಕೂ ಹೂಮಳೆ ಸುರಿಸುವ ಮೂಲಕ ನಿರ್ಗಮಿ ತರನ್ನು ಸಮಾರಂಭಕ್ಕೆ ಸ್ವಾಗತ

# ಜಿಪಂ ಸಿಇಒ ಮೋನಾರೋತ್‌ಗೆ ಆತ್ಮೀಯ ಬೀಳ್ಕೊಡುಗೆ

**ಚಾಮರಾಜನಗರ,** ಮರಾಜನಗರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯಿಂದ ವರ್ಗಾವಣೆಗೊಂಡು ನಿರ್ಗಮಿಸಿದ ಮೋನಾ ರೋತ್ ಅವರಿಗೆ ಆತ್ಮೀಯ ಹಾಗೂ ಹೃದಯಸ್ಪರ್ಶಿ ಬೀಳ್ಕೋಡುಗೆ ನೀಡಲಾಯಿತು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ಜಿಲ್ಲಾ ಹಾಗೂ ತಾಲೂಕು ಪಂಚಾಯತ್ ವತಿಯಿಂದ ಆಯೋಜಿಸಲಾಗಿದ್ದ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ದಾರಿ ಯುದ್ದಕ್ಕೂ ಹೂಮಳೆ ಸುರಿಸುವ ಮೂಲಕ ನಿರ್ಗಮಿತರನ್ನು ಸಮಾರಂಭಕ್ಕೆ ಆತ್ಮೀಯವಾಗಿ ಬರಮಾಡಿಕೊಂಡರು. ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷರಾದ ಎಚ್.ವಿ. ಚಂದ್ರು ಅವರು ನಿರ್ಗಮಿತ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಜಿಲ್ಲೆಯ ಅಭಿವೃದ್ಧಿಗೆ ಹಲವಾರು ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದಾರೆ. ಕುಡಿಯುವ ನೀರಿನ ಯೋಜನೆ



ಹಾಗೂ ಕಾಮಗಾರಿಗಳ ಪ್ರಗತಿಗೆ ಮೋನಾ ರೋತ್ ಅವರ ಕೊಡುಗೆ ಅನನ್ಯವಾಗಿದೆ. ಅವರ ಸೇವೆ ಚಾಮರಾಜನಗರ ಜಿಲ್ಲೆಗೆ ಇನ್ನೂ ಅಗತ್ಯವಾಗಿತ್ತು ಎಂದರು.

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಜಿಲ್ಲೆ ಮುಂಚೂಣಿ ಸ್ಥಾನ ಕಾಯ್ದುಕೊಳ್ಳಲು ಮೋನಾ ರೋತ್ ಅವರ ಪರಿಶ್ರಮವಿದೆ. ಯೋಜನೆಗಳ ಪ್ರಗತಿಗಾಗಿ ಜಿಲ್ಲಾ ಗ್ಯಾರಂಟಿ ಸಮಿತಿಗೆ ಉತ್ತಮ ಸಹಕಾರ ನೀಡಿದ್ದರು. ಗ್ಯಾರಂಟಿ ಯೋಜನೆಗಳ ರಾಜ್ಯಮಟ್ಟದ ಸಭೆಗಳಲ್ಲಿಯೂ ಅವರು ಜಿಲ್ಲೆಯ ಪರವಾಗಿ ಉತ್ತಮ ಕೆಲಸ ಮಾಡಿದ್ದಾರೆ. ಮುಂದಿನ ವೃತ್ತಿಜೀವನದಲ್ಲಿ ಇನ್ನೂ ಹೆಚ್ಚಿನ ಯಶಸ್ಸು ದೊರೆಯಲಿ ಎಂದು ಎಚ್.ವಿ. ಚಂದ್ರು ಅವರು ಹಾರೈಸಿದರು. ಸನ್ಮಾನ ಸ್ವೀಕರಿಸಿದ ನಿರ್ಗಮಿತ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಮಾತನಾಡಿ ಜಿಲ್ಲಾ ಪಂಚಾಯತ್ ವತಿಯಿಂದ ಸಾಕಷ್ಟು ಯೋಜನೆ ಅನುಷ್ಟಾನ ಮಾಡುವ ಮೂಲಕ ಜಿಲ್ಲೆಯ ಅಭಿವೃದ್ಧಿಯಲ್ಲಿ ನಾನು ಭಾಗಿಯಾಗಿರುವುದು ಹೆಮ್ಮೆಯ ವಿಚಾರ. ಕಾರ್ಯಕ್ರಮಗಳ ಪ್ರಗತಿಯನ್ನು ಮುಂಚೂಣಿಗೆ ತರಲು ಶಿಕ್ಷಣ, ಆರೋಗ್ಯ ಮತ್ತು ಮಹಿಳಾ, ಮಕ್ಕಳ ಅಭಿವೃದ್ಧಿಗಳಿಗೆ ಆದ್ಯತೆ ನೀಡಿದ್ದೇನೆ ಎಂದರು.

ಜಿಲ್ಲೆ ಅಭಿವೃದ್ಧಿ ಪಥದತ್ತ ಸಾಗುತ್ತಿದೆ. ಅಭಿವೃದ್ಧಿಗಾಗಿ ಸ್ವಯಂ ಪ್ರೇರಣೆಯಿಂದ ಕರ್ತವ್ಯದಲ್ಲಿ ತೊಡಗಿಸಿಕೊಳ್ಳಲು ಅಧಿಕಾರಿಗಳಿಗೆ ಸಲಹೆ ನೀಡಿದ್ದೇನೆ. ಯಾವುದೇ ವಿಭಾಗಗಳ ಪ್ರಗತಿಯಲ್ಲಿ ಜಿಲ್ಲೆ ಅಗ್ರ 10 ರೊಳಗಿರಬೇಕು ಎಂಬುದು ನನ್ನ ಅಭಿಲಾಷೆಯಾಗಿತ್ತು. ಒಟ್ಟಾರೆ ಜಿಲ್ಲೆಯಲ್ಲಿ ಕೆಲಸ ಮಾಡಿದ ತೃಪ್ತಿ ನನಗಿದೆ ಎಂದ ಮೋನಾ ರೋತ್ ಅವರು ಎಲ್ಲರ ಸಹಕಾರಕ್ಕೆ ಧನ್ಯವಾದಗಳನ್ನು ತಿಳಿಸಿದರು. ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಡಿ.ಸಿ. ಶೃತಿ, ಮುಖ್ಯ ಯೋಜನಾಧಿಕಾರಿ ಹೊನ್ನರಾಜು, ಜಿಲ್ಲಾ ಹಾಗೂ ತಾಲೂಕು ಪಂಚಾಯತ್ ಅಧಿಕಾರಿಗಳು, ವಿವಿಧ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು, ಎನ್.ಆರ್.ಎಲ್.ಎಂ ಸದಸ್ಯರು, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಕಾವ್ಯ ನಿರಂತರ ಹರಿಯುವ ಭಾವನೆಗಳ ಅಭಿವ್ಯಕ್ತಿ

## ಸಾಹಿತಿ ವೈದೇಹಿ ಅಭಿಮತ । ಕವಿಗೋಷ್ಠಿ ಉಪಸಮಿತಿವತಿಯಿಂದ ಬಹುರೂಪಿ ಕವಿಗೋಷ್ಠಿ

ಮೈಸೂರು: ಕಾವ್ಯ ರಚನೆ ಎನ್ನುವುದು ನಿರಂತರವಾಗಿ ಹರಿಯುವ ಭಾವನೆಗಳ ಅಭಿವ್ಯಕ್ತಿ. ಪ್ರತಿಯೊಬ್ಬರ ತೃಪ್ತಿಗೆ ತಕ್ಕಂತೆ ಅವರವರ ಕಾವ್ಯವಿರುತ್ತದೆ ಹಾಗೂ ಅವರವರ ಅಗತ್ಯಕ್ಕೆ ತಕ್ಕಂತೆ ಗ್ರಹಿಕೆಯೂ ಇರುತ್ತದೆ ಎಂದು ಸಾಹಿತಿ ವೈದೇಹಿ ಹೇಳಿದರು.

ನಗರದ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿ.ಎಂ.ಶ್ರೀ ಸಭಾಂಗಣದಲ್ಲಿ ದಸರಾ ಕವಿಗೋಷ್ಠಿ ಉಪಸಮಿತಿ ವತಿಯಿಂದ ಆಯೋಜಿಸಿದ್ದ ಬಹುರೂಪಿ ಕವಿಗೋಷ್ಠಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾವ್ಯವು ಸಮಾಜದ ಮಂಥನ ಮಾಡುವ ಶಕ್ತಿಯನ್ನು ಹೊಂದಿದೆ. ಜಗತ್ತಿನ ಮೊಟ್ಟಮೊದಲ ಕವಿ ತಾಯಿಯೇ ಆಗಿದ್ದು, ಆಕೆ ಜೋಗುಳ ಹಾಡುವ ಮೂಲಕ ಮಗುವಿನಲ್ಲಿ ಭಾವನೆಗಳನ್ನು ಮೂಡಿಸುತ್ತಾಳೆ. ಕಾವ್ಯಕ್ಕೆ ಬೇಕಾದ ವಿಶೇಷ ಗುಣವೆಂದರೆ ನೋಟದ ಭಾವನೆ. ಮನಸ್ಸಿನ ಪ್ರೇಕ್ಷಕತ್ವದಲ್ಲಿ ಭಾವನೆಗಳು ಘನೀಕೃತಗೊಳ್ಳುತ್ತವೆ. ಕಾವ್ಯ ರಚನೆಗೆ ಸರಳ ಮಾತುಗಳನ್ನು ಹೊರತುಪಡಿಸಿ ದೊಡ್ಡ ದೊಡ್ಡ ಪದಗಳೇ ಬೇಕಿಲ್ಲ. ಸರಳವಾದ ಶಬ್ದಗಳಲ್ಲಿಯೇ ಗಹನವಾದ ವಿಚಾರಗಳನ್ನು ಹೇಳಲು ಸಾಧ್ಯ ಎಂಬುದನ್ನು ಮನವರಿಕೆ ಮಾಡಿಕೊಳ್ಳುವುದೇ ಆತ್ಮವಿಶ್ವಾಸದ ಲಕ್ಷಣ ಎಂದರು.

ಪ್ರತಿಭೆ ಮತ್ತು ಪರಿಶ್ರಮ ಎರಡೂ ಅಗತ್ಯ ಎಂಬುದನ್ನು ಒಪ್ಪಿಕೊಳ್ಳಬಹುದು. ಆದರೆ, ಒಳಗೆ ಅನುಭವದ ದ್ರವ್ಯವೂ ಇರಬೇಕಲ್ಲವೇ? ಅನುಭವವಿಲ್ಲದ ಬದುಕಿನಲ್ಲಿ ಅನುಭವದ ಕುರಿತು ಕೇವಲ ಕಲ್ಪನೆ ಹೊಂದಿರುತ್ತೇವೆ. ಯಾವುದೇ ಕಾವ್ಯ ಅಥವಾ ಸಾಹಿತ್ಯ ಸೃಷ್ಟಿಗೆ ಪರಿಶ್ರಮ ಮತ್ತು ಒಡನಾಟ ಅತ್ಯಾವಶ್ಯಕ. ಅನೇಕ ಸಲ ನಾವೇ ನಮ್ಮ ಭಾವನೆಗಳನ್ನು ಭಾರ ಮಾಡಿಕೊಳ್ಳುತ್ತೇವೆ. ಸಿಟ್ಟು, ಸೆಡವು, ದ್ವೇಷ ಮುಂತಾದವುಗಳಿಂದ ಸಮಾಜದಿಂದ ದೂರವಾಗುವ ಬದಲು, ಕಾವ್ಯದ ಮೂಲಕ ಎಲ್ಲ ಅತಿಗಳನ್ನು ಕರಗಿಸಿ ಸಂಬಂಧಗಳ ನೆಲೆಗೆ ಮರಳುವುದು ಮುಖ್ಯ ಎಂದು ಹೇಳಿದರು.

ಹಿಂದೆ ಸ್ತ್ರೀರೂಪಿಯಾಗಿದ್ದ ಕಾವ್ಯದಲ್ಲಿ ಸಾಕಷ್ಟು ವೈವಿಧ್ಯತೆ ಇತ್ತು. ಆದರೆ, ಇಂದಿನ ದಿನಗಳಲ್ಲಿ ಪುರುಷರಲ್ಲಿಯೂ ಮಹಾಕವಿಗಳು ಮೂಡಿಬರುವುದು ಕಷ್ಟವಾಗುತ್ತಿದೆ. ಕನ್ನಡ ನಾಡಿನಲ್ಲಿ ಕನ್ನಡವನ್ನು ಮರೆತು ಇಂಗ್ಲಿಷ್ ಭಾಷೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತಿದ್ದು, ಇದು ನಮ್ಮತನದ ಮೇಲಿನ ಮೋಹವನ್ನು ಕಡಿಮೆ ಮಾಡುತ್ತಿದೆ. ಪಂಪ, ಕುಮಾರವ್ಯಾಸ, ಬಸವಣ್ಣ ಮುಂತಾದ ಮಹನೀಯರು ನಡೆದಾಡಿದ ನಾಡಿನಲ್ಲಿ ಇಂದು ಕನ್ನಡದ ಅಸ್ಮಿತೆಯನ್ನು ಕಾಪಾಡುವ ನಿಟ್ಟಿನಲ್ಲಿ ಕೆಲಸ ಮಾಡಬೇಕಿದೆ ಎಂದರು.

ಕನ್ನಡ ಕಾವ್ಯವು ತನ್ನದೇ ಆದ ಸಹಜ ಸೌಂದರ್ಯ ಮತ್ತು ಭಾವನಾತ್ಮಕ ಲೋಕವನ್ನು ಹೊಂದಿದೆ. ಅದಕ್ಕೆ ಕೃತಕ ಬುದ್ಧಿಮತ್ತೆಯ ಸ್ಪರ್ಶವಾಗಬಾರದು. ಡಿಜಿಟಲ್ ಯುಗದಲ್ಲಿಯೂ ನಮ್ಮ ದುಃಖ-ಸುಖಗಳು ಪ್ರಾಕೃತಿಕವಾಗಿ ದೊರೆಯಬೇಕು. ನುಡಿಗಡಿಗೆ ಇಳಿದ ಹಕ್ಕಿಗಳು ಎಷ್ಟು ಚೆಂದವಾಗಿ ಹಾಡುತ್ತವೆ ಎಂಬುದನ್ನು ಗಮನಿಸಬೇಕು. ಪ್ರಾಚೀನ ಮಹಾಕವಿಗಳು ಕಾವ್ಯದ ಕುರಿತು ಸಾಕಷ್ಟು ಹೇಳಿದ್ದಾರೆ. ಆದರೂ, ನಾವೆಲ್ಲರೂ ಕಾವ್ಯದ ಸಣ್ಣ ತರಂಗಗಳಂತೆ ಕನ್ನಡದ ಅಂದವನ್ನು, ಅದರ ಸೊಗಸನ್ನು ಅನುಭವಿಸಬೇಕು. ಕನ್ನಡದ ಅಂದಕ್ಕೆ ಕಿವಿಗೊಟ್ಟು, ನೂರಾರು ಭಾವಗೀತೆಗಳು ಹಾಡು ಮತ್ತು ಕುಣಿತದೊಂದಿಗೆ ಜೀವಂತವಾಗಿರಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ನಟ ಮುಖ್ಯಮಂತ್ರಿ ಚಂದ್ರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯಸ್ಥ ಪ್ರೊ. ನಂಜಪ್ಪ ಹೊಂಗನೂರು, ದಸರಾ ಕವಿಗೋಷ್ಠಿಯ ವಿಶೇಷಾಧಿಕಾರಿ ಎಂ. ದಾಸೇಗೌಡ, ಮಹಾದೇವ, ಎಂ.ಕೆ. ಲೋಕಲಾಕ್ಷಿ, ಎಸ್.ಡಿ. ಶಶಿಕಲಾ, ಡಾ. ತ್ರಿವೇಣಿ ಹಾಗೂ ಡಾ. ಉಮೇಶ್ ಮತದಾರ ಉಪಸ್ಥಿತರಿದ್ದರು.



### ಕನ್ನಡದ ಅಸ್ಮಿತೆ ಉಳಿಸುವುದು ಮುಖ್ಯ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಕೆ. ಹರೀಶ್ ಗೌಡ ಮಾತನಾಡಿ, ತಾವು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಂಟು ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಿದ್ದು, ಅಲ್ಲಿನ ಗ್ರಂಥಾಲಯದಲ್ಲಿ ತಂದೆಯವರ ಸಹಕಾರದಿಂದ ಸಾಹಿತ್ಯ ಮತ್ತು ಕಾವ್ಯದ ಒಡನಾಟ ಬೆಳೆಸಿಕೊಂಡಿದ್ದಾಗಿ ತಿಳಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಕ್ಯಾಂಪಸ್ ಸಾಹಿತಿಗಳು, ವಿಜ್ಞಾನಿಗಳು, ಇತಿಹಾಸಕಾರರು ಹಾಗೂ ವಾಣಿಜ್ಯ ಪ್ರಾಧ್ಯಾಪಕರನ್ನು ಒಳಗೊಂಡ ಒಂದು ವಿಶ್ವವಿದ್ಯಾನಿಲಯದಂತಿದೆ. ಅಲ್ಲಿ ಎಂಟು ವರ್ಷಗಳ ಕಾಲ ಕಳೆದಿರುವುದು ತಮ್ಮ ಸೌಭಾಗ್ಯ ಎಂದರು. ಮೈಸೂರು ನಗರ ಮತ್ತು ಜಿಲ್ಲೆಯು ಕವಿಗಳು ಹಾಗೂ ಸಾಹಿತಿಗಳ ತವರೂರಾಗಿದೆ. ಕುವೆಂಪು ಅವರ ಕರ್ಮಭೂಮಿಯಾದ ಈ ನಾಡಿನಲ್ಲಿ ಇಂತಹ ಕಾರ್ಯಕ್ರಮ ನಡೆಯುತ್ತಿರುವುದು ನಮ್ಮೆಲ್ಲರ ಪುಣ್ಯ ಎಂದು ಹೇಳಿದರು.

### ಕನ್ನಡಕ್ಕೆ ಹೆಚ್ಚಿನ ಆದ್ಯತೆ ನೀಡಿ: ಪ್ರೊ.ಎನ್.ಕೆ.ಲೋಕನಾಥ್

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಮಾತನಾಡಿ, ನಾವು ದಿನನಿತ್ಯ ಬಳಸುವ ಭಾಷೆ ಬಹಳ ಮುಖ್ಯವಾಗಿದ್ದು, ನಮ್ಮ ಭಾಷೆಯಲ್ಲಿಯೇ ನಮ್ಮ ಅಸ್ಮಿತೆ ಅಡಗಿದೆ. ಕನ್ನಡವನ್ನು ನಾವೆಲ್ಲರೂ ಹೆಚ್ಚು ಬಳಸಬೇಕು ಎನ್ನುವುದು ನಮ್ಮೆಲ್ಲರ ಆಶಯ ಎಂದರು. ಹಿಂದಿನ ದಿನಗಳಲ್ಲಿ ಕನ್ನಡವನ್ನು ಬೆಳೆಸುವಲ್ಲಿ ಅಧ್ಯಾಪಕ ಮಿತ್ರರು ಪ್ರಮುಖ ಪಾತ್ರ ವಹಿಸಿದ್ದರು. ಆದರೆ, ಈಗಿನ ಅಧ್ಯಾಪಕ ಮಿತ್ರರು ಕನ್ನಡದ ಬಗ್ಗೆ ಹೆಚ್ಚಿನ ಆಸಕ್ತಿ ತೋರುತ್ತಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು.

## ಭಾರತ ಶ್ರೀಮಂತ ರಾಷ್ಟ್ರ: ನಟ ಮುಖ್ಯಮಂತ್ರಿ ಚಂದ್ರು

ಮೈಸೂರು: ಕಲೆ, ಸಾಹಿತ್ಯ ಹಾಗೂ ವೈವಿಧ್ಯಮಯ ಸಂಸ್ಕೃತಿಗಳಿಂದ ಕೂಡಿದ ಭಾರತವು ಅತ್ಯಂತ ಶ್ರೀಮಂತ ರಾಷ್ಟ್ರ ಎಂದು ಖ್ಯಾತ ಚಲನಚಿತ್ರ ನಟ ಡಾ. ಮುಖ್ಯಮಂತ್ರಿ ಚಂದ್ರು ಬಣ್ಣಿಸಿದರು.

ನಗರದ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿ.ಎಂ. ಶ್ರೀ ಸಭಾಂಗಣದಲ್ಲಿ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ದಸರಾ ಕವಿಗೋಷ್ಠಿ ಉಪಸಮಿತಿ ವತಿಯಿಂದ ಮಂಗಳವಾರ ಆಯೋಜಿಸಿದ್ದ 'ಹಾಸ್ಯ ಮತ್ತು ಚುಟುಕು' ಕವಿಗೋಷ್ಠಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಾರತವು ವೈವಿಧ್ಯಮಯ ಸಂಸ್ಕೃತಿಗಳ ಏಕತೆಯ ದೇಶವಾಗಿದೆ. ಸಾಹಿತ್ಯ ಲೋಕಕ್ಕೆ ಅನೇಕ ಮಹನೀಯರು ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ತ್ರಿಪದಿಗಳ ಮೂಲಕ ಚುಟುಕು ಸಾಹಿತ್ಯ ಬೆಳೆದುಬಂದಿದ್ದು, ಡಿ.ವಿ. ಗುಂಡಪ್ಪ, ದಿನಕರ್ ದೇಸಾಯಿ ಹಾಗೂ ರಾಜರತ್ನಂ ಅವರ ಸಾಹಿತ್ಯದಲ್ಲಿಯೂ ಚುಟುಕು ಸಾಹಿತ್ಯದ ಸೊಗಸನ್ನು ಕಾಣಬಹುದು ಎಂದರು.

ಈ ಸಂದರ್ಭದಲ್ಲಿ, "ನೂರು ವರ್ಷ ಬದುಕಿದ ಮನುಷ್ಯ, ಹೆಣವಾಗಿ ಮೂರು ದಿನವೂ ಇರಲ್ಲ" ಎಂಬ ಚುಟುಕನ್ನು ವಾಚಿಸಿ ಸಭಿಕರನ್ನು ರಂಜಿಸಿದರು.

ಬಳ್ಳಾರಿ ಮೂಲದ ಶಿಕ್ಷಕ ಎ. ಎರ್ರಿಸ್ವಾಮಿ ಅವರು ವಾಚಿಸಿದ 'ಕನ್ನಡಿಗರ ಉಸಿರು ಕನ್ನಡ' ಕವಿತೆ ಹಾಗೂ 'ಕನ್ನಡ ಚೂಡಾಮಣಿ' ಎಂಬ ಮುಖ್ಯಮಂತ್ರಿ ಚಂದ್ರು ಅವರ ಚುಟುಕುಗಳು ಸಭಿಕರನ್ನು ನಗೆಗಡಲಲ್ಲಿ ತೇಲಿಸಿದವು. 'ಎಲ್ಲಿದ್ದರೇನು ಸ್ವರ್ಗ-ನರಕಗಳು, ನರಕಕ್ಕೆ ಏರುವಾಗ ನೂಕುನುಗ್ಗಲು, ಸ್ವರ್ಗಕ್ಕೆ ಇರುವುದಿಲ್ಲ' ಎಂಬ ಚುಟುಕು ಹಾಗೂ 'ಆಧುನಿಕ ಪುರುಷರು ಏಕೆ ನಗಲಾರರು, ಆಧಾರ್ ಕಾರ್ಡ್ ಫೋಟೋದಂತೆ' ಎಂಬ ಸಾಲುಗಳಿಗೆ ಸಭಿಕರು ಚಪ್ಪಾಳೆ ತಟ್ಟಿದರು. ಕಾರ್ಯಕ್ರಮದಲ್ಲಿ ಪ್ರಸಿದ್ಧ ಲೇಖಕಿ ಡಾ. ಹೆಚ್.ಆರ್. ಸುಜಾತ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು. ಹಾಸ್ಯ ಕವಿಗಳಾದ ರಿಚರ್ಡ್ ಲೂಯಿಸ್, ಮೈಸೂರು ಆನಂದ್ ಹಾಗೂ ಕಿರ್ಲೋಸ್ಕರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಗುಂಡ್ಲುಪೇಟೆ: ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ



ಗುಂಡ್ಲುಪೇಟೆ, :– ರೈತರ ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ನಿಗದಿಪಡಿಸುವುದು ಸೇರಿದಂತೆ ವಿವಿಧ ಜ್ವಲಂತ ಸಮಸ್ಯೆಗಳನ್ನು ಪರಿಹರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಚುನ್ನಪ್ಪ ಪೂಜಾರಿ (ಬಣ) ಗುಂಡ್ಲುಪೇಟೆ ತಾಲೂಕು ಘಟಕದ ವತಿಯಿಂದ ಮಂಗಳವಾರ ಪಟ್ಟಣದಲ್ಲಿ ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಿಂದ ಮೆರವಣಿಗೆಯಲ್ಲಿ ಹೊರಟ ಪ್ರತಿಭಟನಾಕಾರರು ರಾಷ್ಟ್ರೀಯ ಹೆದ್ದಾರಿ ಮೂಲಕ ಸಾಗಿ ಊಟಿ ಸರ್ಕಲ್‌ನಲ್ಲಿ ಜಮಾವಣೆಗೊಂಡರು. ಬಳಿಕ ಮಾನವ ಸರಪಳಿ ನಿರ್ಮಿಸಿ ಕೇಂದ್ರ ಸರ್ಕಾರದ ವಿರುದ್ಧ ಹಾಗೂ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರೈತ ಸಂಘದ ತಾಲೂಕು ಅಧ್ಯಕ್ಷ ಪ್ರಭುಸ್ವಾಮಿ ಮಾತನಾಡಿ, ರೈತರ ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ನಿಗದಿಪಡಿಸುವಂತೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರಿಗೆ ಸಲ್ಲಿಸಿದ ಮನವಿಗೆ ಸೂಕ್ತ ಸ್ಪಂದನೆ ದೊರೆತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರೈತರ ಕೃಷಿ ಉತ್ಪನ್ನಗಳಿಗೆ ಶಾಸನಬದ್ಧ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಜಾರಿಗೊಳಿಸುವುದರ ಜೊತೆಗೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆ ನಿಗದಿಪಡಿಸಬೇಕು. ಗೋಧಿ, ಮೆಕ್ಕೆಜೋಳ, ತೆಂಗು, ಹತ್ತಿ, ಅರಿಶಿನ, ಆಲೂಗಡ್ಡೆ, ಶುಂಠಿ ಹಾಗೂ ಬಾಳೆ ಸೇರಿದಂತೆ ಎಲ್ಲ ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ದೊರೆಯುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರಸಕ್ತ ಸಾಲಿನಲ್ಲಿ ಬೆಳೆ ನಷ್ಟದಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ಸೂಕ್ತ ಪರಿಹಾರ ನೀಡಬೇಕು. ರೈತರ ಸಂಪೂರ್ಣ ಕೃಷಿ ಸಾಲ ಮನ್ನಾ ಮಾಡಬೇಕು. ಕೃಷಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವ ಕ್ರಮ ಕೈಬಿಟ್ಟು, ನಿರಂತರ ಉಚಿತ ವಿದ್ಯುತ್ ಪೂರೈಕೆಯನ್ನು ಮುಂದುವರಿಸಬೇಕು. ಕೃಷಿ ಉತ್ಪನ್ನಗಳ ಮಾರುಕಟ್ಟೆಯಲ್ಲಿ ರೈತರ ಶೋಷಣೆ ತಡೆದು, ಬೆಳೆದ ಬೆಳೆಗಳಿಗೆ ನ್ಯಾಯಯುತ ಬೆಲೆ ದೊರಕಿಸಿಕೊಡಬೇಕು ಎಂದು ಆಗ್ರಹಿಸಿದರು.

ರೈತರ ಸಮಸ್ಯೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಬೇಡಿಕೆಗಳನ್ನು ಈಡೇರಿಸಲು ಕೂಡಲೇ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ರೈತ ಸಂಘದ ವತಿಯಿಂದ ತೀವ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಸಂಘಟನೆಯ ಪದಾಧಿಕಾರಿಗಳು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ರೈತ ಸಂಘದ ತಾಲೂಕು ಉಪಾಧ್ಯಕ್ಷ ಶಿವರಾಜು, ಗೌರವಾಧ್ಯಕ್ಷ ಸಿದ್ದಯ್ಯ, ತಾಲೂಕು ಮಹಿಳಾ ಅಧ್ಯಕ್ಷೆ ಪ್ರೇಮ, ಪ್ರಧಾನ ಕಾರ್ಯದರ್ಶಿ ಆನಂದ್ ಹಂಗಳ, ಹೋಬಳಿ ಅಧ್ಯಕ್ಷ ಚಿನ್ನಸ್ವಾಮಿ, ತೆರಕಣಾಂಬಿ ಹೋಬಳಿ ಉಪಾಧ್ಯಕ್ಷ ಶಿವಪ್ರಸಾದ್, ಸುರೇಶ್, ಹುಚ್ಚನಾಯಕ, ಚಿಕ್ಕಾಟಿ ಶಿವಣ್ಣ ಸೇರಿದಂತೆ ರೈತ ಸಂಘದ ಪದಾಧಿಕಾರಿಗಳು ಹಾಗೂ ರೈತರು ಭಾಗವಹಿಸಿದ್ದರು.

# ಪ್ರತಿ ಮನೆಗೂ ಶುದ್ಧ ಕುಡಿವ ನೀರು

## ಮೈಸೂರಿನಲ್ಲಿ ಪ್ರಾಯೋಗಿಕವಾಗಿ ಜಾರಿಗೆ ಸಚಿವ ಡಾ.ಯತೀಂದ್ರ ನಿರ್ಧಾರ



ಮೈಸೂರು: ಪ್ರತಿಯೊಂದು ಮನೆಗೂ ನಲ್ಲಿಯ ಮೂಲಕ ನೇರವಾಗಿ ಶುದ್ಧ ಕುಡಿಯುವ ನೀರನ್ನು ಪೂರೈಸುವ ಉದ್ದೇಶದ 'ಮನೆಮನೆಗೆ ಶುದ್ಧ ಜಲ' ಅಭಿಯಾನವನ್ನು ಒಂದು ವರ್ಷದಲ್ಲಿ ಮೈಸೂರು ನಗರದಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸುವಂತೆ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಸೂಚಿಸಿದರು.

ಕುಡಿಯುವ ನೀರಿಗೆ ಸಂಬಂಧಿಸಿದಂತೆ ನಡೆದ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಒಂದು ವರ್ಷದೊಳಗೆ ಈ ಯೋಜನೆಯನ್ನು ಮೈಸೂರಿನಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಪಾಶ್ಚಿಮಾತ್ಯ ರಾಷ್ಟ್ರಗಳ ಹಲವು ನಗರಗಳಲ್ಲಿ ಮನೆಗಳಿಗೆ ನೇರವಾಗಿ ನಲ್ಲಿಯ ಮೂಲಕ ಶುದ್ಧ ಕುಡಿಯುವ ನೀರನ್ನು ಪೂರೈಸುವ ವ್ಯವಸ್ಥೆ ಜಾರಿಯಲ್ಲಿದೆ. ಇದೇ ಮಾದರಿಯ ವ್ಯವಸ್ಥೆಯನ್ನು ಕರ್ನಾಟಕದಲ್ಲಿಯೂ ಪರಿಚಯಿಸುವ ಮೂಲಕ ನಗರ ಪ್ರದೇಶಗಳ ಜನರಿಗೆ ಸುಲಭವಾಗಿ ಶುದ್ಧ ಕುಡಿಯುವ ನೀರು ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಈ ಅಭಿಯಾನವನ್ನು ರೂಪಿಸುವ ಕುರಿತು ಸಭೆಯಲ್ಲಿ ಸಮಾಲೋಚನೆ ನಡೆಸಲಾಯಿತು.

ಒಡಿಶಾ ರಾಜ್ಯದ ಪುರಿ ನಗರದಲ್ಲಿ ಈ ಮಾದರಿಯ ಯೋಜನೆಯನ್ನು ಜಾರಿಗೊಳಿಸಲಾಗಿದ್ದು, ಕರ್ನಾಟಕದಲ್ಲಿಯೂ ಇದನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮೈಸೂರು ನಗರವನ್ನು ಪ್ರಾಯೋಗಿಕ ಅನುಷ್ಠಾನಕ್ಕಾಗಿ ಆಯ್ಕೆ ಮಾಡಲಾಯಿತು. ಮನೆಗಳಿಗೆ ನೇರವಾಗಿ ನಲ್ಲಿಯ ಮೂಲಕ ಶುದ್ಧ ಕುಡಿಯುವ ನೀರು ಪೂರೈಸುವ ವ್ಯವಸ್ಥೆಯನ್ನು ರೂಪಿಸಲು ಅಗತ್ಯವಿರುವ ತಾಂತ್ರಿಕ ಅಂಶಗಳು, ಕಾರ್ಯಸಾಧ್ಯತೆ ಹಾಗೂ ಅನುಷ್ಠಾನದ ಸಂದರ್ಭದಲ್ಲಿ ಎದುರಾಗಬಹುದಾದ ಸವಾಲುಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಒಡಿಶಾ ಸರ್ಕಾರದ ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶ್ರೀ ಎಂ. ಜಿ. ಮತಿ ವಾತನನ್ ಅವರು ಸಭೆಯಲ್ಲಿ ಉಪಸ್ಥಿತರಿದ್ದು, ಒಡಿಶಾದಲ್ಲಿ ಈ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ತಮ್ಮ ಅನುಭವಗಳನ್ನು ಹಂಚಿಕೊಂಡರು. ಯೋಜನೆಯ ತಾಂತ್ರಿಕ ಸ್ವರೂಪ, ಕಾರ್ಯಸಾಧ್ಯತೆ ಹಾಗೂ ಪರಿಣಾಮಕಾರಿ ಅನುಷ್ಠಾನಕ್ಕೆ ಸಂಬಂಧಿಸಿದ ಹಲವು ಸಲಹೆಗಳನ್ನು ನೀಡಿದರು.

ಸಭೆಯಲ್ಲಿ ವಿಶೇಷವಾಗಿ ಕೊಳಗೇರಿ ಪ್ರದೇಶಗಳ ಸಮಗ್ರ ಪರಿವರ್ತನೆ, ತಂತ್ರಜ್ಞಾನ ಆಧಾರಿತ ಅನುಷ್ಠಾನ, ಸಾಮಾಜಿಕ ಮೂಲಸೌಕರ್ಯಗಳ ಬಲವರ್ಧನೆ ಮತ್ತು ಸುಸ್ಥಿರ ಜೀವನೋಪಾಯ ಮಾದರಿಗಳ ಕುರಿತು ಸಮಾಲೋಚನೆ ನಡೆಸಲಾಯಿತು. ನಗರ ಪ್ರದೇಶಗಳ ವಸತಿಗಳಲ್ಲಿ ಜನರ ಜೀವನಮಟ್ಟ ಸುಧಾರಿಸುವುದು, ಮೂಲಭೂತ ನಾಗರಿಕ ಸೌಲಭ್ಯಗಳ ಲಭ್ಯತೆಯನ್ನು ಹೆಚ್ಚಿಸುವುದು, ಯೋಜನೆಗಳ ಪರಿಣಾಮಕಾರಿ ರೂಪುರೇಷೆ ಮತ್ತು ಅನುಷ್ಠಾನಕ್ಕಾಗಿ ತಂತ್ರಜ್ಞಾನವನ್ನು ಬಳಸಿಕೊಳ್ಳುವುದು ಹಾಗೂ ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಬಲಪಡಿಸುವ ಕಾರ್ಯತಂತ್ರಗಳ ಕುರಿತು ಚರ್ಚೆ ನಡೆಯಿತು. ಸಭೆಯಲ್ಲಿ ನಗರಾಭಿವೃದ್ಧಿ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಬಿ.ಬಿ.ಕಾವೇರಿ ಭಾಗವಹಿಸಿದ್ದರು.

### ಸುಳ್ಳು ಅಪಪ್ರಚಾರ ವಿರುದ್ಧ ಕ್ರಮವಾಗಲಿ: ಯತೀಂದ್ರ

ಮೈಸೂರು: ಸುಳ್ಳು ವಿಡಿಯೋವನ್ನು ಹಾಕಿ ಸುಳ್ಳು ಅಪಪ್ರಚಾರ ಮಾಡಲು ಮುಂದಾದರೆ ನೋಡಿಕೊಂಡು ಸುಮ್ಮನಿರಬೇಕೆ? ಹೀಗಾಗಿ ತಂದೆಯವರು ದೂರು ನೀಡಿದ್ದಾರೆ. ಅಂತಹ ಸುಳ್ಳು ವಿಡಿಯೋ ಚಿತ್ರೀಕರಿಸಿ ಹರಿಬಿಟ್ಟವರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಮೈಸೂರಿನಲ್ಲಿ ಸ್ಟಿಂಗ್ ವಿಡಿಯೋ ತಡೆಗೆ ಮಾಜಿ ಸಿಎಂ ಸಿದ್ದರಾಮಯ್ಯ ದೂರು ನೀಡಿರುವ ಕುರಿತು ಪ್ರತಿಕ್ರಯಿಸಿದ ಅವರು, ನನ್ನ ಮೇಲೆ ಅಪಪ್ರಚಾರ ಮಾಡುತ್ತಿದ್ದಾರೆಂದು ತಂದೆ ಸಿದ್ದರಾಮಯ್ಯ ಹಿಂದೆಯೇ ಹೇಳಿದ್ದರು. ಕಾನೂನು ಸಲಹೆ ಪಡೆದು ಮುಂದುವರೆಯುವಂತೆ . ಸುಳ್ಳು ಅಪಪ್ರಚಾರ ಸುಳ್ಳು ವಿಡಿಯೋ ಇದಾಗಿದೆ. ಅವರನ್ನು ಕಂಡು ಹಿಡಿದು ಕ್ರಮ ಜರುಗಿಸಿ ಎಂದು ಹೇಳಿದ್ದಾರೆ. ಇದು ಸ್ಟಿಂಗ್ ಅಲ್ಲಾ, ಬದಲಿಗೆ ಯಾರೋ ಕೈಯಲ್ಲೋ ಸುಳ್ಳು ಆಪಾದನೆ ಮಾಡಿಸುತ್ತಿದ್ದಾರೆ. ಅವರ ಮೇಲೆ ಕ್ರಮ ಜರುಗಿಸಬೇಕಿದೆ. ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಇಂತಹದೆಲ್ಲವನ್ನೂ ಎದುರಿಸಬೇಕಾಗಿರುವುದು ಸಹಜವಾಗಿದೆ ಎಂದು ಹೇಳಿದರು.

## ಉಪ್ಪು ತಿಂದವರು, ನೀರು ಕುಡಿಯಲಿ: ತನ್ವೀರ್ ಸೇಠ್

ಮೈಸೂರು: ಮೈಸೂರು: ಸ್ಟಿಂಗ್ ಆಪರೇಷನ್ ವಿಚಾರ ಉಪ್ಪು ತಿಂದವರು ನೀರು ಕುಡಿಯಲೇ ಬೇಕು. ತಪ್ಪು ಮಾಡಿದವರಿಗೆ ಶಿಕ್ಷೆಯಾಗಲೇ ಬೇಕು. ಕೆಲವರು ತಮ್ಮ ಮಾನಕ್ಕೆ ಹೆದರಿ ನ್ಯಾಯಾಲಯದ ಮೊರೆ ಹೋಗಿರುತ್ತಾರೆ. ಮಾನವಂತರಿಗೆ ಅವಮಾನಗಳನ್ನ ಸಹಿಸಿಕೊಳ್ಳುವುದು ಕಷ್ಟ, ಹೀಗಾಗಿ



ನ್ಯಾಯಾಲಯದ ಮೊರೆ ಹೋಗುತ್ತಾರೆ. ಸ್ಟಿಂಗ್ ಆಪರೇಷನ್ ಬಗ್ಗೆ ಹೇಳಿಕೆ ಕೊಡುತ್ತಿರುವವರು ಅದರ ಬಗ್ಗೆ ದಾಖಲೆ ಬಿಡುಗಡೆ ಮಾಡಲಿ. ಸತ್ಯವನ್ನ ಮುಚ್ಚಿಡುವುದು ಕೂಡ ಅಪರಾಧ ಎಂದು ಶಾಸಕ ತನ್ವೀರ್ ಸೇಠ್ ಹೇಳಿದರು.

ಸುಮ್ಮನೆ ಹೇಳಿಕೆ ಕೊಟ್ಟು ಯಾಕೆ ಗೊಂದಲ ಸೃಷ್ಟಿ ಮಾಡುತ್ತಿದ್ದಾರೆ. ಸುಮ್ಮನೆ ಹಿಟ್ ಅಂಡ್ ರನ್ ಆದರೆ ಪ್ರಯೋಜನೆ ಏನು ಹೇಳಿ?, ದಿನವೂ ಸ್ಟಿಂಗ್ ಅಪರೇಷನ್ ಎನ್ನುವ ರಬ್ಬರ್ ಎಳೆಯಬಾರದು. ಸಾಕ್ಷಿಗಳು ಇದ್ದರೆ ಬಿಡುಗಡೆ ಮಾಡಲಿ. ಸರ್ಕಾರ ಈ ಪ್ರಕರಣವನ್ನ ಗಂಬೀರವಾಗಿ ತೆಗೆದುಕೊಳ್ಳಲಿ. ಇದರ ಬಗ್ಗೆ ಸಾಕ್ಷಿಗಳು ಇದ್ದರೆ ತನಿಖೆಯಾಗಲಿ, ಇವತ್ತು ರಾಜಕಾರಣ ಮಾಡುವುದೇ ಕಷ್ಟವಾಗಿದೆ. ಎಲ್ಲಿ ಯಾವ ಕ್ಯಾಮರಾ ಇರುತ್ತದೆ ಎಂಬುದೇ ಗೊತ್ತಾಗದ ಸ್ಥಿತಿ ಬಂದಿದೆ. ನನಗೆ ಹನಿಟ್ರಾಪ್ ನಲ್ಲಿ ಆಸಕ್ತಿಯಿಲ್ಲ. ಬಹುದೊಡ್ಡ ಹಿರಿಯ ನಾಗರೀಕರ ಮಧ್ಯೆ ಜಟಾಪಟಿಗೆ ಕಾರಣ ಆಗುತ್ತಿದೆ. ಕುಮಾರಸ್ವಾಮಿ ಹಿಂದೆಯೂ ಸಹ ಹೇಳುತ್ತಿದ್ದರು. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅನೇಕರಿಗೆ ಎಚ್ಚರಿಕೆ ನೀಡಿದ್ದರು. ರಾಜ್ಯದ ಉದ್ದಕ್ಕೂ ಹನಿಟ್ರಾಪ್ ಎಂಬುವುದು ಚರ್ಚೆಗೆ ಬರುತ್ತಿದೆ. ಮಾಜಿ ಸಿಎಂ ಸ್ವತಃ ಇದು ಹೊರಕ್ಕೆ ಬರಬೇಕೆಂದು ಹೇಳುತ್ತಿದ್ದಾರೆಂದರು.

ರಾಜ್ಯದ ಬೀಕರ ಬರಗಾಲ ಇರುವಂತಹ ಸಂಧರ್ಭದಲ್ಲಿ ನಮ್ಮ ಚಿಂತನೆ ರಾಜ್ಯದ ಉದ್ದಗಲಕ್ಕೂ ರೈತರ ಬಗ್ಗೆ ಕಾರ್ಯಕ್ರಮ ಕೊಡಬೇಕಾದುದಾಗಿದೆ. ಬರ ಇದ್ದರೂ ಸಹ ಚಾಮುಂಡೇಶ್ವರಿಯ ಕೃಪ ಕಟಾಕ್ಷದಿಂದ ದಸರೆಗೆ ಅನೇಕ ಮಠಾಧೀಶರು ಸೇರಿ ಗೌರವ ನೀಡಿದ್ದೇವೆ. ವಾಡಿಕೆಯಂತೆ ದಸರಾ ಬಂದಾಗ ಮಳೆ ಬರುತ್ತದೆ. ಆ ಕಡೆ ನಮ್ಮ ಗಮನವಿದೆ. ಬೇರೆಯದಕ್ಕೆ ನಮ್ಮ ಗಮನವಿಲ್ಲ. ಉಪ್ಪು ತಿಂದವರೂ ನೀರು ಕುಡಿಯುತ್ತಾರೆ ಎಂದಷ್ಟೇ ಹೇಳುತ್ತೇನೆ. ಯಾರು, ಯಾರನ್ನು, ಯಾವ ಸಂದರ್ಭದಲ್ಲಿ ಸೆರೆ ಹಿಡಿದಿದ್ದಾರೆಂಬುದು ಗೊತ್ತಿಲ್ಲ. ಬಹಳ ಕೆಟ್ಟ ಸಂಸ್ಕೃತಿಯಲ್ಲಿ ಸಾಗುತ್ತಿದ್ದೇವೆ. ಚುನಾಯಿತ ಪ್ರತಿನಿಧಿಗಳು ಆಕಾಶದಿಂದ ಬಂದವರಲ್ಲ, ಅವರು ಕೂಡ ಆಯ್ಕೆಯಾಗಿರುವ ಜನಪ್ರತಿನಿಧಿಗಳಾಗಿದ್ದೇವೆ. ಒಂದು ಕಡೆ ನಮ್ಮ ಗೌರವ ಕಾಪಾಡಿಕೊಳ್ಳುವಲ್ಲಿ ವಿಫಲ ಆಗುತ್ತಿದ್ದೇವೆ. ನಮ್ಮ ಮೇಲೆ ಆಗುತ್ತಿರುವ ಬೇರೆ ಬೇರೆ ರೀತಿಯ ಒತ್ತಡವನ್ನು ನೋಡಿದಾಗ ಪ್ರಜಾಪ್ರಭುತ್ವದ ನಿಜವಾದ ಅರ್ಥಕ್ಕೆ ಕತ್ತರಿ ಹಾಕುವ ಕೆಲಸ ಮಾಡುತ್ತಿದ್ದೇವೆ ಎನ್ನಿಸುತ್ತಿದೆ. ಗೌರವ, ಸ್ವಾಭಿಮಾನ ಇದ್ದಾಗ ಏನಾದರೂ ಕೆಲಸ ಮಾಡಲು ಸಾಧ್ಯವಾಗುತ್ತದೆ. ಈಗ ಅಂತಹ ಪರಿಸ್ಥಿತಿ ನಾವಾಗಿ ಹಾಳು ಮಾಡಿಕೊಳ್ಳುತ್ತಾ, ಬರುವ ಪೀಳಿಗೆಗೆ ಒಳ್ಳೆಯ ವಾತಾವರಣ ಸಿಗುವುದು ಕಷ್ಟ ಎಂದರು.

## ಕ್ರೆಡಿಟ್ ಸೊಸೈಟಿ ಶಾಖೆ ಸ್ಥಳಾಂತರ

ಎಚ್.ಡಿ.ಕೋಟೆ: ಎಂಟು ವರ್ಷಗಳಿಂದ ಹೆಚ್.ಡಿ.ಕೋಟೆ ಪಟ್ಟಣದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇಂಡಿಯನ್ ಕೋ ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ. ಶಾಖೆಯು ಗ್ರಾಹಕರ ಅನುಕೂಲಕ್ಕಾಗಿ ನೂತನ ಸ್ಥಳಕ್ಕೆ ಸ್ಥಳಾಂತರಗೊಳ್ಳುತ್ತಿದೆ ಎಂದು ಶಾಖಾ ವ್ಯವಸ್ಥಾಪಕ ಎಸ್.ಮಂಜು ತಿಳಿಸಿದ್ದಾರೆ.

ಪಟ್ಟಣದ ಎರಡನೇ ಮುಖ್ಯರಸ್ತೆಯಲ್ಲಿರುವ ಪಟೇಲ್ ನಂಜಪ್ಪ ಕಾಂಪ್ಲೆಕ್ಸ್ನಲ್ಲಿದ್ದ ಶಾಖೆಯು ಅ.16ರ ಶುಕ್ರವಾರದಿಂದ ಹುಣಸೂರು?ಬೇಗೂರು ಮುಖ್ಯ ರಸ್ತೆಯಲ್ಲಿರುವ ಬಿಜಿಎಸ್ ಕಲ್ಯಾಣ ಮಂಟಪದ ಎದುರಿಗೆ ನೂತನವಾಗಿ ನಿರ್ಮಿಸಲಾಗಿರುವ ಸ್ಥಳದಲ್ಲಿ ಕಾರ್ಯನಿರ್ವಹಿಸಲಿದೆ. ನೂತನ ಶಾಖೆಯ ಉದ್ಘಾಟನಾ ಕಾರ್ಯಕ್ರಮವು ಅ.16ರಂದು ಬೆಳಗ್ಗೆ 10.30ಕ್ಕೆ ನಡೆಯಲಿದ್ದು, ಸೊಸೈಟಿ ಅಧ್ಯಕ್ಷ ಡಾ. ಸೋಜನ್ ವಿ.ಅವಿರ್ಚನ್ ಹಾಗೂ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಮೀನಾ ಜಾನ್ ಅವರ ಶುಭಾಶಯಗಳೊಂದಿಗೆ ಸೊಸೈಟಿಯ ಜನರಲ್ ಮ್ಯಾನೇಜರ್ ನಿತಿನ್ ಕುಮಾರ್ ಝಾ ಅವರು ನೂತನ ಶಾಖೆಯನ್ನು ಉದ್ಘಾಟಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಡೆಪ್ಯುಟಿ ಜನರಲ್ ಮ್ಯಾನೇಜರ್‌ಗಳಾದ ವಿ.ಮೋಹನನ್ ಹಾಗೂ ಪಿ.ಸಿ. ಜಾನಿ ಉಪಸ್ಥಿತರಿರಲಿದ್ದಾರೆ. ಶಾಖೆಯ ಏಜೆಂಟ್‌ಗಳು ಹಾಗೂ ಫೆಸಿಲಿಟೇಟರ್‌ಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ನೂತನ ಸ್ಥಳದಲ್ಲಿ ಶಾಖೆಯ ಸೇವೆಗಳು ಇನ್ನಷ್ಟು ಸುಗಮವಾಗಿ ದೊರೆಯಲಿದ್ದು, ಗ್ರಾಹಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಶಾಖಾ ವ್ಯವಸ್ಥಾಪಕ ಎಸ್. ಮಂಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದಸರಾ ಕ್ರೀಡಾಕೂಟ ನಾಡಿನ ಹೆಮ್ಮೆ: ಗವಿಸಿದ್ದೇಶ್ವರ ಶ್ರೀ

ಮೈಸೂರು: 13 ನಾಡಹಬ್ಬ ದಸರಾ ನಿಮಿತ್ತವಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ರಾಜ್ಯದ 4500 ಕ್ಕಿಂತ ಹೆಚ್ಚು ಕ್ರೀಡಾಪಟುಗಳು ಸಿ.ಎಂ. ಕಪ್ ಮೈಸೂರು ದಸರಾ ಕ್ರೀಡಾಕೂಟದಲ್ಲಿ ಪಾಲ್ಗೊಂಡು ನಾಡಿನ ಕೀರ್ತಿಯನ್ನು ದೇಶದಾದ್ಯಂತ ಪಸರಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ಕೊಪ್ಪಳ ಗವಿಮಠ ಸಂಸ್ಥಾನದ ಅಭಿನವಶ್ರೀ ಗವಿಸಿದ್ದೇಶ್ವರ ಸ್ವಾಮೀಜಿ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಚಾಮುಂಡಿ ವಿಹಾರ ಜಿಲ್ಲಾ ಕ್ರೀಡಾಂಗಣಕ್ಕೆ ಭೇಟಿ ಮೊದಲಿಗೆ ಒಳಾಂಗಣ ಕ್ರೀಡಾಂಗಣದಲ್ಲಿ ಬೆಂಗಳೂರು ಗ್ರಾಮಾಂತರ ಮತ್ತು ಕಲಬುರ್ಗಿ ವಿಭಾಗಗಳ ಮಧ್ಯ ನಡೆದಿದ್ದ ವಾಲಿಬಾಲ್ ಪಂದ್ಯಾವಳಿಯನ್ನು ಸಂತೋಷದಿಂದ ವೀಕ್ಷಿಸಿ, ಅಥ್ಲೆಟಿಕ್ ಸಿಂಥೆಟಿಕ್ ಅಂಕಣಕ್ಕೆ ಆಗಮಿಸಿ ಮಹಿಳೆಯರ ಹಾಗೂ



ಪುರುಷರ 400ಘಿ4 ರಿಲೇ ವೀಕ್ಷಿಸಿ ಬಹುಮಾನ ವಿತರಿಸಿದರು. ನಂತರ ಜಿಲ್ಲಾ ಕ್ರೀಡಾಂಗಣದ ಆವರಣದಲ್ಲಿರುವ ಕುಸ್ತಿ ಮನೆಗೆ ಆಗಮಿಸಿ ದೇಸಿ ಆಟ ಮಕ್ಕಳ ಕುಸ್ತಿಯನ್ನು ನೋಡಿ ಸಂತಸ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಗದಗಿನ ಚಿಕ್ಕನಕೊಪ್ಪ ಮಠದ ಶಿವಶಾಂತವೀರ ಶ್ರೀ, ಇಲಾಖೆಯ ಜಂಟಿ ನಿರ್ದೇಶಕ ಹಾಗೂ ದಸರಾ ಕ್ರೀಡಾ ಉಪ ಸಮಿತಿ ಕಾರ್ಯಾಧ್ಯಕ್ಷ ಡಾ. ಜಿತೇಂದ್ರ ಶೆಟ್ಟಿ, ಜಂಟಿ ನಿರ್ದೇಶಕ ಸುಭಾಷ್ ಚಂದ್ರ, ಉಪ ನಿರ್ದೇಶಕ ಎಂ.ಸಿ.ರಮೇಶ್, ಸಹಾಯಕ ನಿರ್ದೇಶಕರಾದ ಮಂಜುನಾಥಸ್ವಾಮಿ, ಡಾ.ಶರಣು ಗೋಗೇರಿ, ವಿಠ್ಠಲ್ ಜಾಬ್‌ಗೌಡರ್ ಇರೇಶ್ ನಾಯಕ್, ತರಬೇತುದಾರರಾದ ವಿಜಯಕೃಷ್ಣ, ವಿನೋದ್ ಕುಮಾರ್ ಸೇರಿ ಇತರರು ಉಪಸ್ಥಿತರಿದ್ದರು.

### ನೂತನ ದಾಖಲೆ

ಅಥ್ಲೇಟಿಕ್ಸ್ ಕ್ರೀಡಾಕೂಟದಲ್ಲಿ ರಾಜ್ಯದ 5 ವಿಭಾಗಗಳ ಕ್ರೀಡಾ ಪಟುಗಳು ಕಳೆದ ವರ್ಷದ ದಾಖಲೆಯನ್ನು ಮುರಿದು ಹೊಸ ದಾಖಲೆ ನಿರ್ಮಿಸಿದ್ದಾರೆ. ಬೆಂಗಳೂರು ನಗರ ವಿಭಾಗದ ಪ್ರಸನ್ನಕುಮಾರ 200 ಮೀ ಓಟ ಸ್ಪರ್ಧೆ ಪುರುಷರ ವಿಭಾಗದಲ್ಲಿ 21.35 ಸೆಕೆಂಡನಲ್ಲಿ ಕ್ರಮೀಸಿ ಹೊಸದಾಖಲೆ ನಿರ್ಮಿಸಿದರು. ಬೆಂಗಳೂರು ನಗರ ವಿಭಾಗದ ವೈಬವ್ ಎಂ ಪಾಟೀಲ 5000ಮೀ ಪುರುಷರ ವಿಭಾಗದ ಓಟದ ಸ್ಪರ್ಧೆಯಲ್ಲಿ 15.00.08 ಸೆಕೆಂಡಗಳಲ್ಲಿ ಓಡಿ ಹೊಸದಾಖಲೆ ಬರೆದರು. ಬೆಳಗಾವಿ ವಿಭಾಗದ ಪ್ರಿಯಾಂಕ 800ಮೀ ಮಹಿಳಾ ವಿಭಾಗದ ಓಟದ ಸ್ಪರ್ಧೆಯಲ್ಲಿ 2.10.77 ಸೆಕೆಂಡಗಳಲ್ಲಿ ಕ್ರಮಿಸಿ ಹೊಸದಾಖಲೆ ನಿರ್ಮಿಸಿದ್ದಾರೆ.

# ನರ್ಸಿಂಗ್ ವೃತ್ತಿ ಶ್ರೇಷ್ಠ ವೃತ್ತಿ ಜಿ ವಿನಯಕುಮಾರ್

**ಚಾಮರಾಜನಗರ** ಎಲ್ಲಾ ವೃತ್ತಿ ಗಿಂತ ನರ್ಸಿಂಗ್ ವೃತ್ತಿ ಶ್ರೇಷ್ಠ ಎಂದು ಜೆಎಸ್ಎಸ್ ಕಾಲೇಜು ಆಫ್ ನರ್ಸಿಂಗ್ ಪ್ರಾಂಶುಪಾಲ ಜಿ ವಿನಯಕುಮಾರ್ ತಿಳಿಸಿದರು

ನಗರದ ಜೋಡಿ ರಸ್ತೆಯಲ್ಲಿರುವ ಜೆಎಸ್ಎಸ್ ಕಾಲೇಜು ನರ್ಸಿಂಗ್ ಆಫ್ ಏರ್ಪಡಿಸಿದ ವಿಶ್ವ ಆತ್ಮಹತ್ಯೆ ತಡೆ ದಿನ ಕಾರ್ಯಕ್ರಮ ಅಧ್ಯಕ್ಷತೆ ವಹಿಸಿದ ಪ್ರಾಂಶುಪಾಲ ಜಿ ವಿನಯ್ ಕುಮಾರ್ ಮಾತನಾಡಿ ದಿನದ 24 ಗಂಟೆಗಳು ಸಹ ರೋಗಿಗಳನ್ನು ನಗುಮುಖದಿಂದ ಮಾತನಾಡಿಸಿ ವೈದ್ಯರ ಸಲಹೆ ದಂತೆ ಸೂಕ್ತ ಚಿಕಿತ್ಸೆ ನೀಡುತ್ತಿದ್ದಾರೆ ಎಂದು ನರ್ಸಿಂಗ್ ವಿದ್ಯಾರ್ಥಿಗಳ ಬಗ್ಗೆ ಮೆಚ್ಚಿಗೆ ವ್ಯಕ್ತಪಡಿಸಿದರು

ಮನುಷ್ಯನಿಗೆ ಆರೋಗ್ಯದಲ್ಲಿ ಏರೋಪೇರು ಅಪ ಘಾತ ಇನ್ನಿತರ ಸಂದರ್ಭದಲ್ಲಿ ತಕ್ಷಣ ನರ್ಸಿಂಗ್ ವಿದ್ಯಾರ್ಥಿಗಳು ತಮ್ಮ ಸೇವೆ ಮೂಲಕ ಇತರರಿಗೆ ಮಾದರಿಯಾಗಿದ್ದಾರೆ ಎಂದು ತಿಳಿಸಿದರು

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಅಧಿಕಾರಿ ಡಾಕ್ಟರ್ ಚಂದ್ರ ಶೇಖರ್ ಪಿ. ಮಾತನಾಡಿ ಇತ್ತೀಚಿನ ದಿನಗಳಲ್ಲಿ ಕೆಲವು ಮಾನಸಿಕ ಒತ್ತಡದಿಂದ ಹಾಗೂ ಪರೀಕ್ಷೆಯಲ್ಲಿ ಕಡಿಮೆ ಅಂಕ ಗಳಿಸಿದ್ದೇವೆ ಎಂದು ಮಾನಸಿಕವಾಗಿ ಚಿಂತನೆ ಮಾಡಿ ಆತ್ಮಹತ್ಯೆಗೆ ಪ್ರಯತ್ನಪಟ್ಟು ಚಿಕಿತ್ಸೆ ಪಡೆದ




ಗುಣಮುಖರಾಗಿದ್ದಾರೆ ಎಂದು ತಿಳಿಸಿದರು

ಇದಕ್ಕೆಲ್ಲ ಸೂಕ್ತ ಮಾರ್ಗದರ್ಶನ ಮಾನಸಿಕ ಒತ್ತಡದಿಂದ ಬಳುತ್ತಿರುವ ಜನರಿಗೆ ಜಿಲ್ಲೆಯ ಐದು ತಾಲೂಕುಗಳಲ್ಲಿ ಅರಿವು ಅರಿವು ಮೂಡಿಸುವ ಕಾರ್ಯ ಕ್ರಮಗಳು ಇಲಾಖೆ ವತಿಯಿಂದ ಹಬ್ಬಿಕೊಳ್ಳಲಾಗಿದೆ ಯಾವುದೇ ಸಂಕೋಚ ಇಲ್ಲದೆ ನಮ್ಮ ವೈದ್ಯರನ್ನು ಸಂಪ ರ್ಕಿಸಿ ಸೂಕ್ತ ಔಷಧಿಗಳನ್ನು ತೆಗೆದುಕೊಳ್ಳಿ ಎಂದರು

ಮೈಸೂರು ಜೆಎಸ್ಎಸ್ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆ ಮನೋವೈದ್ಯಕೀಯ ವಿಭಾಗ ಸಹಪಾ ಧ್ಯಪಕ ಡಾ.ಶಿವನಂದ ಮಹಾನ್ ಜೆ ಮನೋಹರ್. ಮಾತನಾಡಿ ಆತ್ಮಹತ್ಯೆ ಒಂದು ಪರಿವಾರ ಅಲ್ಲ ಸೂಕ್ತ ಕಾಲದಲ್ಲಿ ವೈದ್ಯರನ್ನು ಸಂಪರ್ಕಿಸಿ ತಮ್ಮ ಜೀವ ಉಳಿಸಿಕೊಳ್ಳಿ ಎಂದು ಮನವಿ ಮಾಡಿದರು

ಮೈಸೂರು ಜೆಎಸ್ಎಸ್ ವೈದ್ಯಕೀಯ ಕಾಲೇಜು ಸಹಾಯಕ ಪ್ರಾಧ್ಯಾಪಕಿ ರಕ್ಷಿತ್ ಪೂಜಾರಿ ಮಾತನಾಡಿ ಪ್ರತಿಯೊಬ್ಬ ವಿದ್ಯಾರ್ಥಿಗಳು ಏನೇ ಸಮಸ್ಯೆ ಬಂದರೂ ಕಾಲೇಜಿನಲ್ಲಿ ಪ್ರಾಂಶುಪಾಲರು ಅಥವಾ ಪ್ರೊಫೆಸರ್ ಗಳು. ನಿಮ್ಮ ಗೆಳೆಯರು ಹಾಗೂ ನಿಮ್ಮ ಪೋಷಕರಿಗೆ ಗಮನಕ್ಕೆ ತಂದು ಸೂಕ್ತ ಕಾಲದಲ್ಲಿ ನಿಮ್ಮ ಮಾನಸಿಕ ಒತ್ತಡ ಕಡಿಮೆ ಮಾಡಿಕೊಳ್ಳಿ ಇದಕ್ಕೆಲ್ಲ ಕಾರಣ ನಿಮ್ಮ ದೈನಂದಿನ ಚಟುವಟಿಕೆಗಳು ಸೂಕ್ತ ಕಾಲದಲ್ಲಿ ನಿದ್ದೆ ಇಲ್ಲ ಆದ್ದರಿಂದ ಯೋಗ ಹೆಚ್ಚಿನ ಆದ್ಯತೆ ನೀಡಿ ಅವಾಗ ನಿಮ್ಮ ಮನಸ್ಸು ಹಗುರವಾಗುತ್ತದೆ ಎದರು ಕಾಲೇಜಿನ ಎಲ್ಲಾ ಪ್ರೊಫೆಸರ್ ಗಳು ವಿದ್ಯಾರ್ಥಿಗಳು ಹಾಜರಿದ್ದರು

# ಮದಕರಿನಾಯಕ ಕೋಟೆ ಸಂರಕ್ಷಿಸಿ



ಚಾಮರಾಜನಗರ: ಚಿತ್ರದುರ್ಗದಲ್ಲಿರುವ ನಾಡದೊರೆ ರಾಜವೀರ ಮದಕರಿನಾಯಕ ಕೋಟೆಯನ್ನು ಅಭಿವೃದ್ಧಿ ಪಡಿಸಿ ಸಂರಕ್ಷಣೆ ಮಾಡಬೇಕು ಎಂದು ನಗರಸಭಾ ಮಾಜಿ ಸದಸ್ಯ ಸಿ.ಎಂ.ಶಿವರಾಜ್ ಸರ್ಕಾರವನ್ನು ಒತ್ತಾಯಿಸಿದರು.

ನಗರದ ಸಂತೇಮರಹಳ್ಳಿ ವೃತ್ತದಲ್ಲಿ ನಾಯಕ ಸಮುದಾಯ ವತಿಯಿಂದ ನಡೆದ ನಾಡದೊರೆ ರಾಜ ವೀರ ಮದಕರಿನಾಯಕ ಜಯಂತಿ ಕಾರ್ಯಕ್ರಮದಲ್ಲಿ ಪುಷ್ಪಾರ್ಚನೆ ಮಾಡಿ ಮಾತನಾಡಿದರು. ಚಿತ್ರದುರ್ಗದ ಕೊನೆಯ ಪಾಳೇಗಾರರು, ನಾಡುಕಂಡಂತಹ ಶ್ರೇಷ್ಠ ಸ್ವಾಭಿಮಾನಿ ದೊರೆ ರಾಜವೀರಮದಕರಿನಾಯಕ ಶೌರ್ಯ, ನಾಡಭಕ್ತಿ, ಕೆಚ್ಚೆದೆಯ ಹೋರಾಟದ ಪ್ರತೀಕವಾಗಿದ್ದರು. ನಾಡಿಗೆ ಅಪಾರ ಕೊಡುಗೆ ನೀಡಿರುವ ಮದಕರಿನಾಯಕರ ಕೋಟೆಯನ್ನು ಸರ್ಕಾರ ಅಭಿವೃದ್ಧಿಪಡಿಸಿ, ಸಂಕರಣೆ ಮಾಡಬೇಕು ಎಂದು ಒತ್ತಾಯಿಸಿದರು.

ಜನಾಂಗದ ಮುಖಂಡರಾದ ಕೆಲ್ಲಂಬಳ್ಳಿ ಸೋಮ ನಾಯಕ, ನಗರಸಭಾ ಮಾಜಿ ಅಧ್ಯಕ್ಷಸುರೇಶ್ ನಾಯಕ್, ನಗರಸಭಾ ಸದಸ್ಯ ಸಿ.ಎಂ. ಶಿವರಾಜ್, ಕಿಚ್ಚ ಅಸೋಸಿಯೇಷನ್ ಅಧ್ಯಕ್ಷ ನಾಗೇಂದ್ರ, ಮಹದೇಶ್ವರ ಆಟೋ ಮಾಲೀಕರ ಸಂಘದ ಅಧ್ಯಕ್ಷ ಮಹೇಶ್, ಬಿಜೆಪಿ ಎಸ್ ಟಿ ಮೋರ್ಚಾದ ಜಿಲ್ಲಾಧ್ಯಕ್ಷ ಚಂದ್ರಶೇಖರ್, ಸ್ವಾಮಿ, ಸಂತೋಷ್, ಬಸವರಾಜು, ರಘು, ಸತೀಶ್, ನಾಗೇಶ್, ಮಹೇಶ್, ಶಿವಮೂರ್ತಿ, ಬಂಗಾರನಾಯಕ, ಬುಲೆಟ್ ಚಂದ್ರು, ಜಿ.ಬಂಗಾರು, ಆಟೋ ಮಂಜು,ಕೆಲ್ಲಂಬಳ್ಳಿ ಚಂದ್ರು, ಸುನಿಲ್, ಕೆಲ್ಲಂಬಳ್ಳಿ ಶಿವು ಇತರರು ಹಾಜರಿದ್ದರು.

ರೈತ ದಸರಾ

# 15,16ರಂದು ಹಾಲು ಕರೆಯುವ, ಶ್ವಾನ ಪ್ರದರ್ಶನ ಸ್ಪರ್ಧೆ

ಚಾಮರಾಜನಗರ, ಚಾಮರಾಜನಗರ ದಸರಾ ಮಹೋತ್ಸವದ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖಾ ಹಾಗೂ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಸಹಯೋಗದೊಂದಿಗೆ ಏರ್ಪಡಿಸಿರುವ ರೈತ ದಸರಾ ಅಂಗವಾಗಿ ಜಿಲ್ಲಾಮಟ್ಟದ ಹಾಲು ಕರೆಯುವ ಸ್ಪರ್ಧೆಯನ್ನು ಅಕ್ಟೋಬರ್ 15 ಮತ್ತು 16ರಂದು ಹಾಗೂ ಶ್ವಾನ ಪ್ರದರ್ಶನ ಸ್ಪರ್ಧೆಯನ್ನು ಅಕ್ಟೋಬರ್ 16ರಂದು ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದ ಪಕ್ಕದಲ್ಲಿರುವ ಸಂಯುಕ್ತ ಪದವಿ ಕಾಲೇಜು ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಅಕ್ಟೋಬರ್ 15ರಂದು ಹಾಲು ಕರೆಯುವ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವವರು ಸಂಜೆ 5 ಗಂಟೆಯೊಳಗೆ ಕಾಲೇಜು ಆವರಣ ಪ್ರವೇಶಿಸಿ ಕೆಚ್ಚಲು ಬರಿದುಗೊಳಿಸುವ ಪ್ರಕ್ರಿಯೆ ಪೂರೈಸಬೇಕು. 16ರಂದು ಬೆಳಿಗ್ಗೆ 7 ಗಂಟೆಗೆ ದಿನದ ಮೊದಲ ಬಾರಿಗೆ ಹಾಲು ಕರೆಯುವಿಕೆ ಹಾಗೂ ಅದೇ ದಿನ ಸಂಜೆ 5 ಗಂಟೆಗೆ ಎರಡನೇ ಬಾರಿ ಹಾಲು ಕರೆಯುವಿಕೆಯ ಒಟ್ಟು ಪ್ರಮಾಣವನ್ನು ಸ್ಪರ್ಧೆಗೆ ಪರಿಗಣಿಸಲಾಗುವುದು.

ವಿಜೇತರಿಗೆ ಪ್ರಥಮ ಬಹುಮಾನವಾಗಿ 20 ಸಾವಿರ ರೂ., ದ್ವಿತೀಯ ಬಹುಮಾನವಾಗಿ 15 ಸಾವಿರ ರೂ., ತೃತೀಯ ಬಹುಮಾನವಾಗಿ 10 ಸಾವಿರ ರೂ. ನೀಡಲಾಗುವುದು.

ಅಕ್ಟೋಬರ್ 16ರಂದು ಶ್ವಾನ ಪ್ರದರ್ಶನ ಸ್ಪರ್ಧೆಯು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ನಡೆಯಲಿದ್ದು, ವಿಜೇತರಾದ ಶ್ವಾನಗಳಿಗೆ ತಳಿವಾರು ವಿಶೇಷ ಬಹುಮಾನಗಳನ್ನು ನೀಡಲಾಗುವುದು.

ಹೆಚ್ಚಿನ ವಿವರಗಳಿಗೆ ಚಾಮರಾಜನಗರದ ಪಶು ಆಸ್ಪತ್ರೆಯ ಮುಖ್ಯ ಪಶುವೈದ್ಯಾಧಿಕಾರಿಗಳು (ಆಡಳಿತ) ಮೊ.ಸಂ 9141328463 ಹಾಗೂ ಮುಖ್ಯ ಪಶುವೈದ್ಯಾಧಿಕಾರಿಗಳು ಜಿಲ್ಲಾ ಪಾಲಿಕ್ಲಿನಿಕ್ ಮೊ.ಸಂ 9480310464 ಮತ್ತು ಸ್ಥಳೀಯ ಪಶುವೈದ್ಯ ಸಂಸ್ಥೆಗಳನ್ನು ಸಂಪರ್ಕಿಸಬಹುದು. ಜಿಲ್ಲೆಯ ಆಸಕ್ತ ಪಶುಪಾಲಕರು ಮತ್ತು ಶ್ವಾನ ಪಾಲಕರು/ಶ್ವಾನ ಪ್ರಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಪಶುಪಾಲನಾ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ಕೋರಿದ್ದಾರೆ.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಸ್ವಚ್ಛತೆಯಿಲ್ಲದೆ ಸೊರಗಿದ ಇಟ್ನ

## ಪಾಳು ಬಿದ್ದ ಘನತ್ಯಾಜ್ಯ ಘಟಕ । ಬಳಕೆಯಾಗದ ವಾಹನ

**ಶಿವಕುಮಾರ ತುಂಬಸೋಗೆ**

ಸರಗೂರು: ಗ್ರಾಮಕ್ಕೆ ಆಗಮಿಸುವವರನ್ನು ಹಚ್ಚಹಸಿರಿನಿಂದ ಸ್ವಾಗತಿಸಬೇಕಿದ್ದ ಇಟ್ನ ಗ್ರಾಮದಲ್ಲಿ ಇದೀಗ ದುರ್ವಾಸನೆ ಬೀರುವ ಕಸದ ರಾಶಿಗಳೇ ಸ್ವಾಗತಿಸುತ್ತಿವೆ.! ಕಪಿಲಾ ನದಿ ತಟದಲ್ಲಿರುವ ಈ ಗ್ರಾಮದಲ್ಲಿ ಸ್ವಚ್ಛತೆ ಮರೀಚಿಕೆ ಆಗಿರುವುದು, ಗ್ರಾ.ಪಂ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಗ್ರಾಮದ ರಸ್ತೆ ಬದಿಗಳಲ್ಲಿ ಎಲ್ಲೆಂದರಲ್ಲಿ ಕಸ ಬಿದ್ದಿದ್ದು, ಚರಂಡಿಗಳಲ್ಲಿ ಕಸ, ಕಡ್ಡಿ ಹಾಗೂ ಹೂಳು ತುಂಬಿ ಕೊಂಡಿವೆ. ಇದರಿಂದ ನೀರು ಸರಾಗವಾಗಿ ಹರಿಯದೆ ನಿಂತಲ್ಲೇ ನಿಂತಿದ್ದು, ಸೊಳ್ಳೆಗಳ ಉತ್ಪತ್ತಿಗೆ ಅನುಕೂಲಕರ ವಾತಾವರಣ ನಿರ್ಮಾಣವಾಗಿದೆ.

ದುರ್ವಾಸನೆ ಹಾಗೂ ಸೊಳ್ಳೆಗಳ ಕಾಟದಿಂದ ಗ್ರಾಮಸ್ಥರು ತೊಂದರೆ ಅನುಭವಿಸುತ್ತಿದ್ದು, ಸಾಂಕ್ರಾಮಿಕ ರೋಗಗಳ ಭೀತಿಯೂ ಎದುರಾಗಿದೆ.ಕಾಲ ಕಾಲಕ್ಕೆ ಚರಂಡಿಗಳನ್ನು ಸ್ವಚ್ಛಗೊಳಿಸಿ, ಗ್ರಾಮದಲ್ಲಿ ನೈರ್ಮಲ್ಯ ಕಾಪಾಡಬೇಕಾದ ಪಂಚಾಯಿತಿ ಅಧಿಕಾರಿಗಳು ಈ ಬಗ್ಗೆ ಲಕ್ಷ್ಯವಹಿಸದೆ ಇರುವುದು ಕಣ್ಣಿಗೆ ರಾಚುತ್ತಿದೆ.

ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಶ್ರೀ ಚಿಕ್ಕದೇವಮ್ಮನ ಬೆಟ್ಟಕ್ಕೆ ಬೆಂಗಳೂರು, ಮೈಸೂರು ಸೇರಿದಂತೆ ಹೊರ ರಾಜ್ಯಗಳಿಂದ ಬರುವ ಭಕ್ತರು ತುಂಬಸೋಗೆ ಮಾರ್ಗವಾಗಿ ಇಟ್ನ ಗ್ರಾಮದ ಮೂಲಕವೇ ಸಂಚರಿಸಬೇಕಿದೆ. ಆದರೆ, ಗ್ರಾಮದ ಅವ್ಯವಸ್ಥೆ ಹಾಗೂ ಕಸದ ದುರ್ವಾಸನೆ ಯಿಂದಾಗಿ ಭಕ್ತರು ಮುಜುಗರ ಅನುಭವಿ ಸುವಂತಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ತಕ್ಷಣವೇ ಕ್ರಮ ಕೈಗೊಂಡು ಗ್ರಾಮದಲ್ಲಿ ಸ್ವಚ್ಛತೆ ಕಾಪಾಡಬೇಕಿದೆ.



### ಇದ್ದೂ ಇಲ್ಲದಂತಾದ ಘನತ್ಯಾಜ್ಯ ಘಟಕ



ಕಸದ ರಾಶಿಗಳಿಂದ ಹರಡುವ ದುರ್ವಾಸನೆ, ನೊಣ ಹಾಗೂ ಸೊಳ್ಳೆಗಳಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳನ್ನು ತಡೆಗಟ್ಟುವ ಜತೆಗೆ ಗ್ರಾಮದ ಸೌಂದರ್ಯ ಹೆಚ್ಚಿಸುವ ಉದ್ದೇಶದಿಂದ ಸಾರ್ವಜನಿಕರ ತೆರಿಗೆ ಹಣದಲ್ಲಿ ಲಕ್ಷಾಂತರ ಹಣ ವ್ಯಯಿಸಿ, ಕಪಿಲಾ ನದಿ ಸಮೀಪ ನಿರ್ಮಿಸಿರುವ ಘನತ್ಯಾಜ್ಯ ವಿಲೇವಾರಿ ಘಟಕ ಇದೀಗ ನಿರುಪಯುಕ್ತವಾಗಿ ಪಾಳು ಬಿದ್ದಿದೆ ಎನ್ನಲಾಗಿದೆ. ರಸ್ತೆ ಬದಿ, ಚರಂಡಿ, ಮನೆಗಳು, ಅಂಗಡಿಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಉತ್ಪತ್ತಿಯಾಗುವ ಕಸದಿಂದ ಮಣ್ಣು ಹಾಗೂ ಗಾಳಿ ಮಾಲಿನ್ಯವಾಗುವುದನ್ನು ತಡೆಯಲು ಮನೆ, ಮನೆಗಳಿಂದ ಹಸಿ ಹಾಗೂ ಒಣ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸಲು ನಾಲ್ಕು ಚಕ್ರದ ವಾಹನವನ್ನು ಖರೀದಿಸಲಾಗಿದೆ. ಆದರೆ, ಈ ವಾಹನ ಗ್ರಾಮದಲ್ಲಿ ಒಮ್ಮೆಯೂ ಸಂಚರಿಸದೆ ನಿಷ್ಪ್ರಯೋಜಕವಾಗಿದೆ.

### ಊರಲ್ಲೇ ಇಲ್ಲದ ತೊಟ್ಟಿಗೆ ಬಿಲ್ ಮಾಡಿರುವ ಶಂಕೆ

ಗ್ರಾಮದ ಪ್ರಮುಖ ಸ್ಥಳದಲ್ಲಿ ಜಾನುವಾರುಗಳ ಕುಡಿಯುವ ನೀರಿಗಾಗಿ ತೊಟ್ಟಿ ನಿರ್ಮಿಸಿರುವುದಾಗಿ ಸರ್ಕಾರದಿಂದ ಹಣ ಪಡೆಯಲಾಗಿದೆ. ಆದರೆ, ಗ್ರಾಮದಲ್ಲಿ ಎಲ್ಲಿಯೂ ನೀರಿನ ತೊಟ್ಟಿ ನಿರ್ಮಿಸಿಲ್ಲ. ನಕಲಿ ದಾಖಲೆ ಸೃಷ್ಟಿಸಿ ಬಿಲ್ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದ್ದು, ಪಂಚಾಯಿತಿ ಕಾಮಗಾರಿಗಳ ಅನುಷ್ಠಾನ ಹಾಗೂ ಸಾರ್ವಜನಿಕ ಹಣದ ಬಳಕೆಯ ಬಗ್ಗೆ ಅನುಮಾನ ಮೂಡಿದೆ ಎಂದು ಗ್ರಾಮಸ್ಥರೊಬ್ಬರು ಆರೋಪಿಸಿದ್ದಾರೆ.

ಮೂರು ವಾರ್ಡ್‌ಗಳನ್ನು ಹೊಂದಿರುವ ಗ್ರಾಮಕ್ಕೆ ಒಂದೇ ಪಂಚಾಯಿತಿಗೆ ಜವಾಬ್ದಾರಿ ನೀಡಲಾಗಿದ್ದರೂ, ಪಂಚಾಯಿತಿಯ ವಿವಿಧ ಯೋಜನೆಗಳ ಸೌಲಭ್ಯಗಳು ನೈಜ ಅರ್ಹರಿಗೆ ತಲುಪುವ ಬದಲು ಅನುಕೂಲಸ್ಥರ ಪಾಲಾಗುತ್ತಿವೆ. ನಮ್ಮೂರಿನ ಗ್ರಾ.ಪಂನಲ್ಲಿ ಹಲವು ಅಕ್ರಮಗಳು ನಡೆದಿರುವ ಶಂಕೆಯಿದೆ. ಸಂಬಂಧಪಟ್ಟ ಮೇಲಧಿಕಾರಿಗಳು ಈ ಬಗ್ಗೆ ಗಮನಹರಿಸಬೇಕು ಎಂದಿದ್ದಾರೆ.





# ಗಪಡೆಗೆ ಕಬ್ಬು, ಬೆಲ್ಲ: ಮಾವುತ, ಕಾವಾಡಿ ಕಿಟ್

**ಮೈಸೂರು:** ನಗರದ ಅರಮನೆ ಆವರಣದಲ್ಲಿ ಡಿಸಿಸಿ ಉಪಾಧ್ಯಕ್ಷ ಎನ್.ಮಾದೇಗೌಡ ನೇತೃತ್ವದಲ್ಲಿ ಆಯೋಜಿಸಿದ್ದ ನಾಡಹಬ್ಬ ಮೈಸೂರು ದಸರಾ ಜಂಬೂ ಸವಾರಿಯಲ್ಲಿ ಭಾಗವಹಿಸಲು ಕಾಡಿನಿಂದ ನಾಡಿಗೆ ಆಗಮಿಸಿ ಅರಮನೆ ಆವರಣದಲ್ಲಿ ಬೀಡು ಬಿಟ್ಟಿರುವ ದಸರಾ ಆನೆಗಳು ಹಾಗೂ ಮಾವುತ, ಕಾವಾಡಿ ಕುಟುಂಬಗಳಿಗೆ ಕಿಟ್ ವಿತರಣ ಕಾರ್ಯಕ್ರಮ ಸಂಭ್ರಮದಿಂದ ನಡೆಯಿತು.

ಶಾಸಕ ತನ್ವೀರ್ ಸೇಠ್ ಸ್ವತಃ ಮಾವುತರಿಗೆ ಕಬ್ಬು, ಬೆಲ್ಲ, ಕಾಯಿ ಮತ್ತು ಕಾವಾಡಿ, ಮಾವುತರಿಗೆ ಹಣ್ಣು ಹಂಪಲು ವಿತರಣೆ ಮಾಡಿ ಮಾತನಾಡಿದರು. ದಸರೆಯ ವಿಶ್ವವಿಖ್ಯಾತ ಜಂಬೂಸವಾರಿ ಮೆರವಣಿಗೆಯಲ್ಲಿ ಭಾಗವಹಿಸುವ ಎಲ್ಲಾ ಆನೆಗಳ ಮಾವುತರಿಗೆ ಕೃತಜ್ಞತೆ ಸಲ್ಲಿಸುವ ನಿಟ್ಟಿನಲ್ಲಿ ಮಾದೇಗೌಡರ ನೇತೃತ್ವದಲ್ಲಿ ಆಹಾರದ ಕಿಟ್ ಅನ್ನು ನೀಡುವ ಕಾರ್ಯಕ್ರಮವನ್ನು ಮುಖಂಡರಾದ ಮಾದೇಗೌಡರ ನೇತೃತ್ವದಲ್ಲಿ ಆನೆಗಳಿಗೆ ಕಬ್ಬು, ಬೆಲ್ಲ, ಹಣ್ಣು ಹಾಗೂ ಹಂಪಲನ್ನು ನೀಡಲು ಮುಂದಾಗಿದ್ದೇವೆ. ಎಲ್ಲರ ಸುರಕ್ಷತೆಗೆ ಆದ್ಯತೆ ನೀಡಿ ನಾಡ ಹಬ್ಬಕ್ಕೆ ಇನ್ನಷ್ಟು ಮೆರಗು ತರುವ ಮಾವುತರ ಪ್ರಯತ್ನ ಫಲ ಕೊಡಲಿ. ಈ ನಾಡಿಗೆ ಎಲ್ಲರೂ ಒಳ್ಳೆಯದಾಗಲಿ ಎಂದು ಗಜಮುಖನ ಮೂಲಕ ನಿರ್ವಿಘ್ನವಾಗಿ ದಸರಾ ನಡೆಯಲಿ ಎಂದು ಆಶಿಸುತ್ತೇನೆಂದರು.

ಡಿಸಿಸಿ ಉಪಾಧ್ಯಕ್ಷ ಎನ್.ಮಾದೇಗೌಡ ಮಾತನಾಡಿ, ವಿಶ್ವ ವಿಖ್ಯಾತ ಮೈಸೂರು ದಸರಾದ ಪ್ರಮುಖ ಆಕರ್ಷಣೆಯಾದ ಜಂಬೂ ಸವಾರಿಯಲ್ಲಿ ಭಾಗವಹಿಸಲು ಕಾಡಿನಿಂದ ನಾಡಿಗೆ ಆಗಮಿಸಿರುವ



ದಸರಾ ಆನೆಗಳು ಮತ್ತು ಅವುಗಳ ನಿರ್ವಹಣೆ ಮಾಡುತ್ತಿರುವ ಮಾವುತರು ಮತ್ತು ಕಾವಾಡಿಗಳು ನಮ್ಮ ಅತಿಥಿಗಳಾಗಿದ್ದಾರೆ. ಅವರು ಮೈಸೂರಿನಲ್ಲಿ ಇರುವ ತನಕ ಅವರ ಯೋಗಕ್ಷೇಮ ನೋಡಿಕೊಳ್ಳುವುದು ನಮ್ಮಗಳ ಕರ್ತವ್ಯ ಹಾಗಾಗಿ ಆನೆಗಳಿಗೆ ಇಷ್ಟವಾದ ಕಬ್ಬು, ಬೆಲ್ಲ ಮತ್ತು ತೆಂಗನಕಾಯಿ ಕಾವಾಡಿಗರು ಮತ್ತು ಮಾವುತರು ಹಾಗೂ ಅವರ ಮಕ್ಕಳಿಗೆ ಹಣ್ಣು ಹಂಪಲು ವಿತರಣೆ ಮಾಡುವ ಮೂಲಕ ನಾವು ಅತಿಥಿ ಸತ್ಕಾರ ಮಾಡಿದ್ದೇವೆಂದರು. ಈ ಸಂದರ್ಭದಲ್ಲಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮಾಧ್ಯಮ ಕಾರ್ಯದರ್ಶಿ ಕೆ.ವಿ.ಪ್ರಭಾಕರ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ದಿ ಮೈಸೂರು ಸಿಟಿ ಕೋ ಅಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷೆ ರಾಜೇಶ್ವರಿ, ಕಾಂಗ್ರೆಸ್ ಯುವ ಮುಖಂಡರಾದ ಎಂ.ರಾಘವೇಂದ್ರ, ಎಂ.ರತನ್‌ಕುಮಾರ್, ಲೋಕೇಶ್, ಆನಂದ್, ಭದ್ರಿ, ಲತಾ ಇತರರು ಇದ್ದರು.

# ಕೆಬ್ಬೇಪುರದಲ್ಲಿ ನಿವೃತ್ತ ಯೋಧರಿಗೆ ಅದ್ದೂರಿ ಸನ್ಮಾನ

ಗುಂಡ್ಲುಪೇಟೆ, :- ತಾಲ್ಲೂಕಿನ ಕೆಬ್ಬೇಪುರ ಗ್ರಾಮದಲ್ಲಿ 29 ವರ್ಷಗಳ ಕಾಲ ಬಿಎಸ್‌ಎಫ್‌ನಲ್ಲಿ ಸೇವೆ ಸಲ್ಲಿಸಿದ ಶಿವಕುಮಾರ್ ಹಾಗೂ 26 ವರ್ಷಗಳ ಕಾಲ ಸೇವೆ ಸಲ್ಲಿಸಿದ ಶಿವಯ್ಯ ನಿವೃತ್ತರಾದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಅದ್ದೂರಿಯಾಗಿ ಸನ್ಮಾನಿಸಿ ಗೌರವಿಸಿದರು.

ಕೆಬ್ಬೇಪುರ ಹುಲಿಯಮ್ಮನ ಸೇವಾ ಟ್ರಸ್ಟ್, ಗ್ರಾಮಸ್ಥರು ಹಾಗೂ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಅವರ ವತಿಯಿಂದ ಸನ್ಮಾನ ಕಾರ್ಯಕ್ರಮ ಆಯೋಜಿಸಲಾಗಿತ್ತು. ಯೋಧರ ಮೇಲಿನ ಪ್ರೀತಿ ಮತ್ತು ಅಭಿಮಾನ ವ್ಯಕ್ತಪಡಿಸಿದ ಗ್ರಾಮಸ್ಥರು ಬೃಹತ್ ಮೋಸಂಬಿ ಹಾರವನ್ನು ಸಿದ್ಧಪಡಿಸಿ, ಕ್ರೇನ್ ಮೂಲಕ ಇಬ್ಬರೂ ಯೋಧರಿಗೆ ಹಾಗೂ ಶಾಸಕ ಗಣೇಶ್ ಪ್ರಸಾದ್ ಅವರಿಗೆ ಹಾಕಿ ಗೌರವ ಸಲ್ಲಿಸಿದರು. ಬಳಿಕ ಟಾಟಾ ಏಸ್ ವಾಹನದ ಮೇಲೆ ಯೋಧರನ್ನು ಕೂರಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಅದ್ದೂರಿ ಮೆರವಣಿಗೆ ನಡೆಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್, ಯೋಧರ ಮೇಲಿನ ಅಪಾರ ಪ್ರೀತಿ ಮತ್ತು ಗೌರವದಿಂದ ಗ್ರಾಮಸ್ಥರು ಅದ್ದೂರಿಯಾಗಿ ಸನ್ಮಾನಿಸಿರುವುದು ಹೆಮ್ಮೆಯ ಸಂಗತಿಯಾಗಿದೆ. ಎಲ್ಲ ಜನಾಂಗದವರು ಒಗ್ಗೂಡಿ ಕಾರ್ಯಕ್ರಮ ಆಯೋಜಿಸಿರುವುದು ಸಮಾಜದ ಸಾಮರಸ್ಯಕ್ಕೆ ಸಾಕ್ಷಿಯಾಗಿದೆ ಎಂದರು.

ಯೋಧರು ದೇಶದ ರಕ್ಷಣೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟು, ಕುಟುಂಬದಿಂದ ದೂರವಿದ್ದು ಚಳಿ, ಬಿಸಿಲು ಎನ್ನದೆ ಕರ್ತವ್ಯ ನಿರ್ವಹಿಸುತ್ತಾರೆ. ದೇಶದೊಳಗೆ ನುಸುಳುಕೋರರು ಹಾಗೂ



ಭಯೋತ್ಪಾದಕರು ಪ್ರವೇಶಿಸದಂತೆ ಜೀವದ ಹಂಗು ತೊರೆದು ದೇಶದ ಗಡಿಯನ್ನು ಕಾಯುತ್ತಾರೆ. ಇಂತಹ ಯೋಧರ ಸೇವೆ ಯುವಜನರಿಗೆ ಪ್ರೇರಣೆಯಾಗಬೇಕು ಎಂದು ಹೇಳಿದರು.

ರೈತರು ದೇಶಕ್ಕೆ ಅನ್ನ ನೀಡಿದರೆ, ಸೈನಿಕರು ದೇಶವನ್ನು ರಕ್ಷಿಸುತ್ತಾರೆ. ಸಮಾಜದಲ್ಲಿ ರೈತರು ಮತ್ತು ಸೈನಿಕರ ಸೇವೆಯನ್ನು ಸದಾ ಸ್ಮರಿಸಿ ಗೌರವಿಸಬೇಕು. ದೀರ್ಘಕಾಲ ದೇಶಸೇವೆ ಸಲ್ಲಿಸಿ ನಿವೃತ್ತರಾಗಿರುವ ಶಿವಕುಮಾರ್ ಮತ್ತು ಶಿವಯ್ಯ ಅವರ ಮುಂದಿನ ಜೀವನ ಸುಖಮಯವಾಗಿರಲಿ ಎಂದು ಹಾರೈಸಿದರು. ಈ ಸಂದರ್ಭದಲ್ಲಿ ಮಾಜಿ ಕಾಡಾ ಅಧ್ಯಕ್ಷ ಎಚ್.ಎಸ್. ನಂಜಪ್ಪ, ಮಾಜಿ ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷ ಕೆ.ಎಸ್. ಮಹೇಶ್, ಮುಖಂಡರಾದ ಹುಂಡೀಪುರ ಮಹೇಂದ್ರ, ಪುನೀತ್, ಮನು, ಪ್ರಕಾಶ್ ಸೇರಿದಂತೆ ಗ್ರಾಮದ ಹಿರಿಯರು, ಯುವಕರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ಶಾಸಕ ಗಣೇಶಪ್ರಸಾದ್ ಅಭಿಮತ । ಹಂಗಳ ಕ್ಷೇತ್ರದಿಂದ ಮಾದಿಗ ಸಮುದಾಯದ ಅಭ್ಯರ್ಥಿಗೆ ಅವಕಾಶ ನೀಡಲು ಮುಖಂಡರ ಮನವಿ

# ಮಾದಿಗ ಸಮುದಾಯದ ಬೇಡಿಕೆಗಳ ಈಡೇರಿಕೆಗೆ ಪ್ರಾಮಾಣಿಕ ಪ್ರಯತ್ನ

ಗುಂಡ್ಲುಪೇಟೆ: ತಾಲೂಕಿನ ಪರಿಶಿಷ್ಟ ಜಾತಿಯ ಮಾದಿಗ ಸಮುದಾಯದ ಕುಂದುಕೊರತೆಗಳನ್ನು ಆಲಿಸಿ, ಅಭಿವೃದ್ಧಿಗೆ ಪೂರಕವಾದ ಬೇಡಿಕೆಗಳನ್ನು ಈಡೇರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಶಾಸಕ ಎಚ್.ಎಂ. ಗಣೇಶಪ್ರಸಾದ್ ಭರವಸೆ ನೀಡಿದರು.

ಪಟ್ಟಣದ ಬಸವೇಶ್ವರ ಕಮ್ಯೂನಿಟಿ ಹಾಲ್‌ನಲ್ಲಿ ಆಯೋಜಿಸಿದ್ದ ಮಾದಿಗ ಸಮುದಾಯದ ಕುಂದುಕೊರತೆ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಮುದಾಯದ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಒದಗಿಸುವಂತೆ ಸಮಾಜ ಕಲ್ಯಾಣ ಸಚಿವ ಮುನಿಯಪ್ಪ ಅವರಿಗೆ ಮನವಿ ಸಲ್ಲಿಸಲಾಗಿದೆ. ಈ ಕುರಿತು ತಾವೂ ಸಚಿವರ ಗಮನ ಸೆಳೆಯುವುದಾಗಿ ತಿಳಿಸಿದರು.

**ಸಮುದಾಯದ ಅಭಿವೃದ್ಧಿಗೆ ಆದ್ಯತೆ**

ಮಾದಿಗ ಸಮುದಾಯದ ಹಲವು ಬೇಡಿಕೆಗಳಿದ್ದು, ಅವುಗಳಲ್ಲಿ ಸಾಧ್ಯವಾದಷ್ಟು ಬೇಡಿಕೆಗಳನ್ನು ಈಡೇರಿಸಲು ಶ್ರಮಿಸಲಾಗುವುದು. ಸುಮಾರು ಶೇ.80ರಷ್ಟು ಬೇಡಿಕೆಗಳನ್ನಾದರೂ ಈಡೇರಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ರಾಜಕೀಯವಾಗಿಯೂ ಎಲ್ಲರ ಅಭಿಪ್ರಾಯಗಳನ್ನು



ಸಂಗ್ರಹಿಸಿ ಸಮುದಾಯಕ್ಕೆ ಸೂಕ್ತ ಬೆಂಬಲ ನೀಡಲಾಗುವುದು. ಮುಂಬರುವ ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಚುನಾವಣೆಗಳಲ್ಲಿಯೂ ಸಮುದಾಯದೊಂದಿಗೆ ಇರುವುದಾಗಿ ಭರವಸೆ ನೀಡಿದರು.

**ಎಲ್ಲ ಸಮುದಾಯಗಳನ್ನು ಒಗ್ಗೂಡಿಸಿ ಮುನ್ನಡೆಸುವ ವಿಶ್ವಾಸ**

ಚಾಮುಲ್ ನಿರ್ದೇಶಕ ನಂಜುಂಡಪ್ರಸಾದ್ ಮಾತನಾಡಿ, ಸಮುದಾಯದ ಅಭಿವೃದ್ಧಿಗೆ ಅಗತ್ಯವಿರುವ ವಿವಿಧ ಸೌಲಭ್ಯಗಳನ್ನು ಕಲ್ಪಿಸುವಂತೆ ಸಭೆಯಲ್ಲಿ ಹಲವು ಬೇಡಿಕೆಗಳನ್ನು ಮಂಡಿಸಲಾಗಿದೆ. ಶಾಸಕ ಗಣೇಶಪ್ರಸಾದ್ ಅವರು ತಮ್ಮ ತಂದೆ ದಿವಂಗತ ಮಹದೇವಪ್ರಸಾದ್ ಅವರ ಮಾದರಿಯಲ್ಲಿ ಎಲ್ಲ ಸಮುದಾಯದವರನ್ನು ಒಗ್ಗೂಡಿಸಿಕೊಂಡು ಮುನ್ನಡೆಯಲಿದ್ದಾರೆ ಎಂಬ ವಿಶ್ವಾಸವಿದೆ. ಮಾದಿಗ ಸಮುದಾಯ ಸಹಕಾರ ನೀಡಲಿದೆ ಎಂದು ತಿಳಿಸಿದರು. ಸಭೆಯಲ್ಲಿ ಮಾಜಿ ಕಾಡಾ ಅಧ್ಯಕ್ಷ ಹಂಗಳ ನಂಜಪ್ಪ, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಕಬ್ಬಳ್ಳಿ ಮಹೇಶ್, ಎಚ್. ಎನ್ ಬಸವರಾಜು, ಲೋಕೇಶ್, ಸೋಮಶೇಖರ್, ಎಂ. ಶಿವಮೂರ್ತಿ, ಮಡಿವಾಳಪ್ಪ, ಎಪಿಎಂಸಿ ಅಧ್ಯಕ್ಷ ವಿರೋಪಾಕ್ಷ, ರಂಗಸ್ವಾಮಿ, ಗೋಪಾಲ್ ಹಂಗಳ. ಶಂಕರಟೌನ್. ಮಾದಪ್ಪ ಮಳವಳ್ಳಿ.ದೇವರಾಜ್. ಸಿದ್ದಯ್ಯ ನರಸಿಂಹ. ಮಹೇಶ್. ಹಿರಿಯ ಮುಖಂಡರು.ಯಜಮಾನ್ರು ಸೇರಿದಂತೆ ಮಾದಿಗ ಸಮುದಾಯದ ಮುಖಂಡರು ಹಾಗೂ ಇತರರು ಉಪಸ್ಥಿತರಿದ್ದರು.

### ಜಿಪಂ ಚುನಾವಣೆಯಲ್ಲಿ ಸಮುದಾಯಕ್ಕೆ ಅವಕಾಶ ನೀಡಿ

ವಕೀಲ ಹಂಗಳ ರಾಜೇಶ್ ಮಾತನಾಡಿ, ಶಾಸಕ ಗಣೇಶಪ್ರಸಾದ್ ಅವರು ಕಳೆದ ಮೂರೂವರೆ ವರ್ಷಗಳಿಂದ ಮಾದಿಗ ಸಮುದಾಯಕ್ಕೆ ಉತ್ತಮ ಸಹಕಾರ ನೀಡುತ್ತಿದ್ದು, ಗ್ರಾಮಮಟ್ಟದಲ್ಲಿಯೂ ಸಮುದಾಯದ ಪರವಾಗಿ ನಿಂತು ಸಾಮಾಜಿಕ ನ್ಯಾಯದಡಿ ವಿಶೇಷ ಕಾಳಜಿ ವಹಿಸಿದ್ದಾರೆ. ಸಮುದಾಯದ ಕುಂದುಕೊರತೆಗಳನ್ನು ಆಲಿಸಲು ಸಭೆ ಆಯೋಜಿಸಿರುವುದು ಶ್ಲಾಘನೀಯ ಎಂದರು. ಆದರೆ, ಅಭಿವೃದ್ಧಿಯ ಜೊತೆಗೆ ರಾಜಕೀಯ ಪ್ರಾತಿನಿಧ್ಯದಲ್ಲಿಯೂ ಸಮುದಾಯಕ್ಕೆ ನ್ಯಾಯ ದೊರೆಯಬೇಕಿದೆ. ಮುಂಬರುವ ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಹಂಗಳ ಕ್ಷೇತ್ರದಿಂದ ಮಾದಿಗ ಸಮುದಾಯದ ಅಭ್ಯರ್ಥಿಗೆ ಸ್ಪರ್ಧಿಸಲು ಅವಕಾಶ ಕಲ್ಪಿಸಬೇಕು. ಇದುವರೆಗೆ ಸಮುದಾಯಕ್ಕೆ ರಾಜಕೀಯವಾಗಿ ಸೂಕ್ತ ಆದ್ಯತೆ ದೊರೆತಿಲ್ಲ. ಈ ಬಾರಿ ಅವಕಾಶ ನೀಡುವ ಮೂಲಕ ನ್ಯಾಯ ಒದಗಿಸಬೇಕು ಎಂದರು.

## ಅ.16ರಿಂದ 18ರವರೆಗೆ ಶ್ರೀರಂಗಪಟ್ಟಣ ದಸರಾ ಕ್ರೀಡಾ ಕಾರ್ಯಕ್ರಮ

**ಮಂಡ್ಯ:** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಶ್ರೀರಂಗಪಟ್ಟಣ ನಾಡಹಬ್ಬ ದಸರಾ ಮಹೋತ್ಸವ-2026ರ ಅಂಗವಾಗಿ ಅಕ್ಟೋಬರ್ 16, 17 ಹಾಗೂ 18ರಂದು ವಿವಿಧ ಕ್ರೀಡಾ ಸ್ಪರ್ಧೆ ಹಾಗೂ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಅ.16ರಂದು ಬೆಳಿಗ್ಗೆ 6.30ಕ್ಕೆ 'ಫಿಟ್ ಇಂಡಿಯಾ' ಕಾರ್ಯಕ್ರಮ ನಡೆಯಲಿದ್ದು, ಪುರುಷರಿಗೆ ಶ್ರೀರಂಗಪಟ್ಟಣ ತಾಲೂಕು ಕ್ರೀಡಾಂಗಣದಿಂದ ಗಂಜಾಂ ಮಾರ್ಗವಾಗಿ ಕರಿಘಟ್ಟದವರೆಗೆ ಹಾಗೂ ಮಹಿಳೆಯರಿಗೆ ತಾಲೂಕು ಕ್ರೀಡಾಂಗಣದಿಂದ ಗಂಜಾಂ ಮಾರ್ಗವಾಗಿ ಸಂಗಮದವರೆಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸ್ಪರ್ಧೆಗಳನ್ನು 20 ವರ್ಷ ಒಳಗಿನವರು, 21ರಿಂದ 50 ವರ್ಷದೊಳಗಿನವರು ಹಾಗೂ 50 ವರ್ಷ ಮೇಲ್ಪಟ್ಟವರ ವಿಭಾಗಗಳಲ್ಲಿ ಆಯೋಜಿಸಲಾಗುತ್ತದೆ.

ಸದರಿ ದಿನದಂದು ಬೆಳಿಗ್ಗೆ 8 ಗಂಟೆಯಿಂದ ಸಂಜೆ 5 ಗಂಟೆವರೆಗೆ ಶ್ರೀರಂಗಪಟ್ಟಣ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಪುರುಷರು ಮತ್ತು ಮಹಿಳೆಯರಿಗೆ ಯೋಗಾಸನ ಸ್ಪರ್ಧೆ ನಡೆಯಲಿದೆ.

ಬೆಳಿಗ್ಗೆ 10 ಗಂಟೆಗೆ ಶ್ರೀರಂಗಪಟ್ಟಣ ತಾಲೂಕು ಕ್ರೀಡಾಂಗಣದಲ್ಲಿ ಪುರುಷರು ಮತ್ತು ಮಹಿಳೆಯರಿಗೆ ಹಗ್ಗಜಗ್ಗಾಟ, ಗೋಣಿಚೀಲದ ಓಟ ಹಾಗೂ ಜೋಡಿ ಮೂರು ಕಾಲಿನ ಓಟ ಸ್ಪರ್ಧೆಗಳನ್ನು 20 ವರ್ಷ ಒಳಗಿನವರು ಹಾಗೂ 21ರಿಂದ 50 ವರ್ಷದೊಳಗಿನವರ ವಿಭಾಗಗಳಲ್ಲಿ ನಡೆಸಲಾಗುತ್ತದೆ.

ಬೆಳಿಗ್ಗೆ 10 ಗಂಟೆಗೆ ಶ್ರೀರಂಗನಾಥಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿರುವ ರಂಗಮಂದಿರದಲ್ಲಿ ಪುರುಷರು ಮತ್ತು ಮಹಿಳೆಯರಿಗೆ ಚೆಸ್ ಸ್ಪರ್ಧೆ ಆಯೋಜಿಸಲಾಗಿದೆ.

ಅ.17ರಂದು ಬೆಳಿಗ್ಗೆ 6.30 ಗಂಟೆಗೆ ಕರಿಘಟ್ಟ ದೇವಸ್ಥಾನದ ಪಾದದಿಂದ ದೇವಸ್ಥಾನದ ಮೇಲ್ಭಾಗದವರೆಗೆ ಪುರುಷರು ಮತ್ತು ಮಹಿಳೆಯರಿಗೆ ಬೆಟ್ಟ ಹತ್ತುವ (ಚಾರಣ) ಸ್ಪರ್ಧೆ ನಡೆಯಲಿದೆ. 20 ವರ್ಷ ಒಳಗಿನವರು, 21ರಿಂದ 50 ವರ್ಷದೊಳಗಿನವರು ಹಾಗೂ 50 ವರ್ಷ ಮೇಲ್ಪಟ್ಟವರ ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ.

ಬೆಳಿಗ್ಗೆ 07 ಗಂಟೆಗೆ ಶ್ರೀರಂಗನಾಥಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಪುರುಷರು ಮತ್ತು ಮಹಿಳೆಯರಿಗೆ ಸಾಮೂಹಿಕ ಸೂರ್ಯ ನಮಸ್ಕಾರ ಕಾರ್ಯಕ್ರಮ ಆಯೋಜಿಸಲಾಗಿದೆ.

ಅ.18ರಂದು ಬೆಳಿಗ್ಗೆ ತಾಲೂಕು ಕ್ರೀಡಾಂಗಣದಲ್ಲಿ ಮಹಿಳೆಯರಿಗೆ ಬಿಂದಿಗೆ ಓಟ ಹಾಗೂ ಮಡಿಕೆ ಹೊಡೆಯುವ ಸ್ಪರ್ಧೆಗಳನ್ನು 20 ವರ್ಷ ಒಳಗಿನವರು, 21ರಿಂದ 50 ವರ್ಷದೊಳಗಿನವರು ಹಾಗೂ 50 ವರ್ಷ ಮೇಲ್ಪಟ್ಟವರ ವಿಭಾಗಗಳಲ್ಲಿ ನಡೆಸಲಾಗುತ್ತದೆ. 50 ವರ್ಷ ಮೇಲ್ಪಟ್ಟವರಿಗೆ ಮ್ಯೂಸಿಕಲ್ ಚೇರ್ ಸ್ಪರ್ಧೆಯೂ ನಡೆಯಲಿದೆ.

ಸದರಿ ದಿನದಂದು ಬೆಳಿಗ್ಗೆ 10.00 ಗಂಟೆಗೆ ತಾಲೂಕು ಕ್ರೀಡಾಂಗಣದಲ್ಲಿ ಪುರುಷರು ಮತ್ತು ಮಹಿಳೆಯರಿಗೆ ಪಾರಂಪರಿಕ ಕ್ರೀಡೆ ಮಟ್ಟಿ ಕುಸ್ತಿ ಪಂದ್ಯಾವಳಿ ನಡೆಯಲಿದೆ.

ಮಧ್ಯಾಹ್ನ 3.00 ಗಂಟೆಗೆ ಶ್ರೀರಂಗಪಟ್ಟಣದ ಬಿ.ಜಿ.ಎಸ್. ಬಾಲಜಗತ್ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ ಆವರಣದಲ್ಲಿ ಪುರುಷರಿಗೆ ದೇಹದಾಢ್ಯ ಸ್ಪರ್ಧೆ ಆಯೋಜಿಸಲಾಗಿದೆ.

ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಯೋಗಾಸನ ಸ್ಪರ್ಧೆಗೆ ಡಾ. ಪುಷ್ಪ □ 9448600606; ಪಾರಂಪರಿಕ ಕ್ರೀಡೆ ಮಟ್ಟಿ ಕುಸ್ತಿಗೆ □ 9164418541, 9590884220, 9972116070; ದೇಹದಾಢ್ಯ ಸ್ಪರ್ಧೆಗೆ □ 9886017596, 9844257208; ಚೆಸ್ ಸ್ಪರ್ಧೆಗೆ ಶ್ರೀಮತಿ ಮಾಧುರಿ ಎನ್. □ 8050244338, ಡಾ. ರಾಘವೇಂದ್ರ ಆರ್. □ 9620557621; ಬೆಟ್ಟ ಹತ್ತುವ ಸ್ಪರ್ಧೆ, ಬಿಂದಿಗೆ ಓಟ ಹಾಗೂ ಇತರೆ ಸ್ಪರ್ಧೆಗಳಿಗೆ ಶ್ರೀ ಭರತ್ ರಾಜ್ ಸಿ.ಬಿ. □ 9916644007, ಶ್ರೀ ಸೋಮಶೇಖರ್ ಬಿ. □ 9740896699, ಶ್ರೀಮತಿ ರೂಪಶ್ರೀ ಜೆ. □ 7353097540 ಹಾಗೂ ಶ್ರೀ ಸಂಜಯ್ ಕುಮಾರ್ □ 9739972472 ಅವರನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಅ. 31 ರಂದು ಮುಖ್ಯಮಂತ್ರಿಗಳು ಮಂಡ್ಯ ಜಿಲ್ಲೆಗೆ ಭೇಟಿ | ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ

# ಶಂಕುಸ್ಥಾಪನೆಗೆ ಸಕಲ ಸಿದ್ಧತೆ ಕೈಗೊಳ್ಳಿ: ಡಾ. ಕುಮಾರ

**ಮಂಡ್ಯ:** ಅಕ್ಟೋಬರ್ 31 ರಂದು ಮಾನ್ಯ ಮುಖ್ಯಮಂತ್ರಿಗಳು ಮಂಡ್ಯ ಜಿಲ್ಲೆಗೆ ಭೇಟಿ ನೀಡಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ಕಾರ್ಯಕ್ರಮಗಳನ್ನು ನೆರವೇರಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಸಂಬಂಧ ಪಟ್ಟ ಅಧಿಕಾರಿಗಳು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸಲು ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳಾದ ಡಾ. ಕುಮಾರ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.




ಮುಖ್ಯಮಂತ್ರಿಗಳ ಭೇಟಿಯ ಹಿನ್ನೆಲೆಯಲ್ಲಿ ಇಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಜಿಲ್ಲೆಯ ವಿವಿಧ ಇಲಾಖೆಗಳ ವತಿಯಿಂದ ಶಂಕುಸ್ಥಾಪನೆಗೆ ಸಿದ್ಧವಾಗಿರುವ ಹಾಗೂ ಪೂರ್ಣಗೊಂಡು ಉದ್ಘಾಟನೆಗೆ ಅರ್ಹವಾಗಿರುವ ಕಾಮಗಾರಿಗಳ ಪಟ್ಟಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಸಿದ್ಧಪಡಿಸಬೇಕು. ಕಾಮಗಾರಿಗಳ ಹೆಸರು, ವಿವರಗಳನ್ನು ತಾಂತ್ರಿಕವಾಗಿ ನಿಖರವಾಗಿ ನಮೂದಿಸಿ, ಅಧಿಕೃತ ಸಹಿಯೊಂದಿಗೆ ಸಲ್ಲಿಸಬೇಕು. ಯಾವುದೇ ಕರಡು ಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ. ಇಲಾಖೆಯ ವತಿಯಿಂದ ಪರಿಶೀಲಿಸಿ ದೃಢೀಕರಿಸಿದ ಅಧಿಕೃತ ಪಟ್ಟಿಗಳನ್ನೇ ಸಲ್ಲಿಸಬೇಕು ಎಂದು ಸ್ಪಷ್ಟಪಡಿಸಿದರು.

ಮುಖ್ಯಮಂತ್ರಿಗಳ ಕಾರ್ಯಕ್ರಮವನ್ನು ಮಂಡ್ಯ ವಿಶ್ವವಿದ್ಯಾಲಯದ ಆವರಣದಲ್ಲಿ ಆಯೋಜಿಸಲು ಉದ್ದೇಶಿಸಲಾಗಿದ್ದು, ಕಾರ್ಯಕ್ರಮದ ಯಶಸ್ಸಿಗೆ ಅಗತ್ಯವಿರುವ ಮೂಲಸೌಕರ್ಯ ಹಾಗೂ ಇತರೆ ವ್ಯವಸ್ಥೆಗಳನ್ನು ಮುಂಚಿತವಾಗಿಯೇ ಪೂರ್ಣಗೊಳಿಸಬೇಕು. ಈ ಸಂಬಂಧ ಇಲಾಖೆವಾರು ಅಧಿಕಾರಿಗಳೊಂದಿಗೆ ಸಮನ್ವಯ ಸಭೆ ನಡೆಸಿ, ವೇದಿಕೆ, ಆಸನ ವ್ಯವಸ್ಥೆ, ಸಾರ್ವಜನಿಕರ ಪ್ರವೇಶ, ಕುಡಿಯುವ ನೀರು, ಆಹಾರ, ಸ್ವಚ್ಛತೆ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಬೇಕು. ಕಾರ್ಯಕ್ರಮದ ವಿವಿಧ ಜವಾಬ್ದಾರಿಗಳ ನಿರ್ವಹಣೆಗೆ ಸಮಿತಿಗಳನ್ನು ರಚಿಸಿ, ಅಧಿಕಾರಿಗಳಿಗೆ ಸ್ಪಷ್ಟ ಹೊಣೆಗಾರಿಕೆಗಳನ್ನು ವಹಿಸಲಾಗಿದೆ ಎಂದು ಅವರು ತಿಳಿಸಿದರು.

ಜಿಲ್ಲೆಯ ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ಶಂಕುಸ್ಥಾಪನೆ ಹಾಗೂ ಉದ್ಘಾಟನೆಗೆ ಸಿದ್ಧವಾಗಿರುವ ಕಾಮಗಾರಿಗಳ ವಿವರಗಳನ್ನು ಸಂಬಂಧಪಟ್ಟ ಶಾಸಕರೊಂದಿಗೆ ಸಮನ್ವಯ ಸಾಧಿಸಿ ಅಂತಿಮಗೊಳಿಸಬೇಕು. ಕಾಮಗಾರಿಗಳ ಪ್ರಸ್ತುತ ಸ್ಥಿತಿ, ವೆಚ್ಚ ಹಾಗೂ ಇತರೆ ಅಗತ್ಯ ವಿವರಗಳನ್ನು ಸಂಬಂಧಪಟ್ಟ ಇಲಾಖೆಗಳು ಪರಿಶೀಲಿಸಿ, ಯಾವುದೇ ಗೊಂದಲಗಳಿಗೆ ಅವಕಾಶವಾಗದಂತೆ ನಿಖರವಾದ ಮಾಹಿತಿಯನ್ನು ಸಲ್ಲಿಸಬೇಕು. ಸರ್ಕಾರದ ವಿವಿಧ ಯೋಜನೆಗಳಡಿ ಫಲಾನುಭವಿಗಳಿಗೆ ವಿತರಿಸಲು ಉದ್ದೇಶಿಸಿರುವ ಸವಲತ್ತುಗಳ ಬಗ್ಗೆಯೂ ಇಲಾಖಾವಾರು ಸಮಗ್ರ ಮಾಹಿತಿ ಸಂಗ್ರಹಿಸಬೇಕು. ಈಗಾಗಲೇ ಸೌಲಭ್ಯ ಪಡೆದವರ ಸಂಖ್ಯೆ, ಪ್ರಸ್ತುತ ವಿತರಣೆಗೆ ಸಿದ್ಧವಾಗಿರುವ ಸವಲತ್ತುಗಳ ಸಂಖ್ಯೆ ಹಾಗೂ ಯೋಜನೆಗಳ ಪ್ರಗತಿ ವಿವರಗಳನ್ನು ಪ್ರತ್ಯೇಕವಾಗಿ ದಾಖಲಿಸಬೇಕು ಎಂದು ತಿಳಿಸಿದರು.

ಮುಖ್ಯಮಂತ್ರಿಗಳ ಕಾರ್ಯಕ್ರಮದಲ್ಲಿ ಸಾಂಕೇತಿಕವಾಗಿ ಫಲಾನುಭವಿಗಳಿಗೆ ಸವಲತ್ತು ವಿತರಿಸುವುದರ ಜೊತೆಗೆ, ಜಿಲ್ಲೆಯಾದ್ಯಂತ ವಿವಿಧ ಸರ್ಕಾರಿ ಯೋಜನೆಗಳ ಮೂಲಕ ಎಷ್ಟು ಫಲಾನುಭವಿಗಳಿಗೆ ನೆರವು ತಲುಪಿಸಲಾಗುತ್ತಿದೆ ಎಂಬುದರ ಸಮಗ್ರ ಚಿತ್ರಣವನ್ನು ಪ್ರಸ್ತುತಪಡಿಸಲು ಅಧಿಕಾರಿಗಳು ಸಿದ್ಧರಾಗಿರಬೇಕು. ಈ ನಿಟ್ಟಿನಲ್ಲಿ ನಿಖರ ಅಂಕಿಅಂಶಗಳು ಹಾಗೂ ಅಧಿಕೃತ ದಾಖಲೆಗಳೊಂದಿಗೆ ನಿಗದಿತ ಕಾಲಮಿತಿಯೊಳಗೆ ಮಾಹಿತಿ ಸಲ್ಲಿಸಬೇಕು. ಎಲ್ಲಾ ಇಲಾಖೆಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಸೂಚಿಸಿದರು.

ಕಾರ್ಯಕ್ರಮದಲ್ಲಿ ಸುಮಾರು 40 ಸಾವಿರ ಸಾರ್ವಜನಿಕರು ಭಾಗವಹಿಸುವ ನಿರೀಕ್ಷೆಯಿರುವುದರಿಂದ, ಎಲ್ಲರಿಗೂ ಸಮರ್ಪಕ ಆಹಾರ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಜಿಲ್ಲೆಯ ವಿವಿಧ ಇಲಾಖೆಗಳು ತಮ್ಮ ಇಲಾಖೆಗಳ ಪ್ರಮುಖ ಯೋಜನೆಗಳು, ಸಾಧನೆಗಳು ಹಾಗೂ ಜನರಿಗೆ ಒದಗಿಸುತ್ತಿರುವ ಸೌಲಭ್ಯಗಳನ್ನು ಪರಿಚಯಿಸುವ ಪರಿಣಾಮಕಾರಿ ವಸ್ತುಪ್ರದರ್ಶನ ಮಳಿಗೆಗಳನ್ನು ಸ್ಥಾಪಿಸಬೇಕು. ವಸ್ತುಪ್ರದರ್ಶನದಲ್ಲಿ ಮಾಹಿತಿ ಸ್ಪಷ್ಟವಾಗಿ ಹಾಗೂ ಆಕರ್ಷಕವಾಗಿ ಪ್ರದರ್ಶನಗೊಳ್ಳುವಂತೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅವರು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಡಾ. ಶೋಭಾರಾಣಿ ವಿ.ಜೆ. ಅವರು ಮಾತನಾಡಿ ಕಾರ್ಯಕ್ರಮಕ್ಕೆ ಆಗಮಿಸುವ ಸಾರ್ವಜನಿಕರ ಅನುಕೂಲಕ್ಕಾಗಿ ಸುಮಾರು 800 ಬಸ್‌ಗಳ ವ್ಯವಸ್ಥೆ ಕಲ್ಪಿಸಲು ಯೋಜಿಸಲಾಗಿದ್ದು, ವಾಹನಗಳ ಸುಗಮ ಸಂಚಾರ ಹಾಗೂ ನಿಲುಗಡೆಗೆ ಅಗತ್ಯ ಪಾರ್ಕಿಂಗ್ ಸ್ಥಳಗಳನ್ನು ಗುರುತಿಸಿ ಸೂಕ್ತ ಸೂಚನಾ ಫಲಕಗಳನ್ನು ಅಳವಡಿಸಲಾಗುವುದು. ಮುಖ್ಯಮಂತ್ರಿಗಳ ಹೆಲಿಕಾಪ್ಟರ್ ಇಳಿಯುವ ಹೆಲಿಪ್ಯಾಡ್ ಪ್ರದೇಶದಲ್ಲಿ ಅಗತ್ಯ ಬ್ಯಾರಿಕೇಡಿಂಗ್ ವ್ಯವಸ್ಥೆ ಮಾಡಬೇಕು. ಹೆಲಿಪ್ಯಾಡ್ ಸುತ್ತಮುತ್ತಲಿನ ಪ್ರದೇಶದಲ್ಲಿ ಸ್ವಚ್ಛತೆ ಕಾಪಾಡುವುದರ ಜೊತೆಗೆ, ಸಾರ್ವಜನಿಕರ ಸುರಕ್ಷತೆ, ವಾಹನಗಳ ಸಂಚಾರ ನಿಯಂತ್ರಣ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ಕಚೇರಿಯ ಯೋಜನಾ ನಿರ್ದೇಶಕ ಚಂದ್ರಶೇಖರ್, ಜಿಲ್ಲಾ ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಜಯಸ್ವಾಮಿ ಜಿ. ಎಸ್,ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಯ ಜಂಟಿ ನಿರ್ದೇಶಕರಾದ ಪ್ರತೀಕ್ ಹೆಗ್ಡೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ. ಬೆಟ್ಟಸ್ವಾಮಿ, ಮಂಡ್ಯ ವಿಶ್ವವಿದ್ಯಾಲಯದ ಕುಲಪತಿಗಳಾದ ಕಲ್ಪಶ್ರೀ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಮನ್‌ಮುಲ್ ಹಗರಣ ಖಂಡಿಸಿ ಕರವೇಯಿಂದ ಪ್ರತಿಭಟನಾ ಮೆರವಣಿಗೆ,ಸಿಬಿಐ ತನಿಖೆಗೆ ಆಗ್ರಹ

**ಮಂಡ್ಯ:** ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ (ಮನ್‌ಮುಲ್) ನಲ್ಲಿ ನಡೆದಿರುವ ಹಗರಣವನ್ನು ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ.ನಾರಾಯಣಗೌಡ ಬಣ) ವತಿಯಿಂದ ನಗರದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ಮತ್ತು ಧರಣಿ ನಡೆಸಲಾಯಿತು.

ಪ್ರತಿಭಟನೆಗೂ ಮುನ್ನ ನಗರದ ಸರ್ ಎಂ. ವಿಶ್ವೇಶ್ವರಯ್ಯ ಪ್ರತಿಮೆ ಬಳಿಯಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದ ಕಾರ್ಯಕರ್ತರು ನಂತರ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ಕುಳಿತು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.



ಈ ಸಂದರ್ಭದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯ ಉಪಾಧ್ಯಕ್ಷ ಎಂ.ಎಸ್. ಚಿದಂಬರ್ ಮಾತನಾಡಿ ಕಳೆದ 40-50 ವರ್ಷಗಳಿಂದ ಆರಂಭವಾದ ಮನ್‌ಮುಲ್ ಸಂಸ್ಥೆಯು ರಾಜ್ಯದಲ್ಲೇ ಅತ್ಯಂತ ಹೆಚ್ಚು ಹಾಲು ಸಂಗ್ರಹಿಸುವ ಮೂಲಕ ಮಂಡ್ಯ ಜಿಲ್ಲೆಗೆ ಕೀರ್ತಿ ತಂದಿದೆ, ಆದರೆ ಕಳೆದ ಕೆಲವು ವರ್ಷಗಳಿಂದ ಕೆಲವು ನಿರ್ದೇಶಕರು ಹಾಗೂ ಒಪ್ಪಂದದಾರರು ಸೇರಿ ಆ ಸಂಸ್ಥೆಯನ್ನು ಹಗರಣದ ಕ್ಷೇತ್ರವನ್ನಾಗಿ ಮಾಡಿಕೊಂಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕಳೆದ ವರ್ಷವೂ ಸಹ ಮನ್‌ಮುಲ್‌ನಲ್ಲಿ ಹಾಲಿಗೆ ನೀರು ಬೆರೆಸುವ ಚಟುವಟಿಕೆ ನಡೆದಿತ್ತು, ಆ ಹಗರಣ ಬೆಳಕಿಗೆ ಬರುವುದಕ್ಕೆ ಮುಂಚಿತವಾಗಿ ಕೆಲವು ರಾಜಕಾರಣಿಗಳ ಕುತಂತ್ರದಿಂದ ಅದನ್ನು ಮುಚ್ಚಿಹಾಕಲಾಗಿತ್ತು ಎಂದು ಅವರು ಆರೋಪಿಸಿದರು.

ಇತ್ತೀಚಿನ ದಿನಗಳಲ್ಲಿ ಮನ್‌ಮುಲ್‌ನಲ್ಲಿ ಹಾಲಿನ ಪುಡಿಗೆ ಕೆಲವು ಕಲಬೆರಕೆಗಳನ್ನು ಮಿಶ್ರಣ ಮಾಡಿ ಅದನ್ನು ಶಾಲೆ-ಅಂಗನವಾಡಿಗಳಿಗೆ ಹಂಚಿಕೆ ಮಾಡುವುದರಲ್ಲಿ ಹಿಂದಿನ ಆಡಳಿತ ಮಂಡಳಿಯು ತೊಡಗಿತ್ತು, ಇದನ್ನು ಲೋಕಾಯುಕ್ತರು ಹಾಗೂ ಮಾಧ್ಯಮದವರು ಪತ್ತೆಹಚ್ಚಿ ಈ ಹಗರಣ ಹೊರಬರಲು ಕಾರಣರಾಗಿದ್ದಾರೆ ಎಂದು ತಿಳಿಸಿದರು. ಮನ್‌ಮುಲ್‌ನಲ್ಲಿ ಮುಂದೆಯೂ ಮಂಡ್ಯ ಜಿಲ್ಲೆಗೆ ಒಳಿತಾಗುವ ರೀತಿಯಲ್ಲಿ ಈ ಸಂಸ್ಥೆಯು ಅಭಿವೃದ್ಧಿಯಾಗಬೇಕಾದರೆ ಈ ಹಿಂದಿನ ಹಗರಣವನ್ನು ಸಿಬಿಐಗೆ ವಹಿಸಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆಯು ಮತ್ತೊಮ್ಮೆ ಒತ್ತಾಯಿಸುತ್ತದೆ, ಒಂದು ವೇಳೆ ಇದು ಸಿಬಿಐಗೆ ಹೋಗದಿದ್ದರೆ ಮುಂದಿನ ದಿನಗಳಲ್ಲಿ ಮನ್‌ಮುಲ್ ಆವರಣದಲ್ಲಿ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ದ್ರೋಹವನ್ನು ಎಸಗಿರುವ ಆಡಳಿತ ಮಂಡಳಿಯನ್ನು ಕೂಡಲೇ ಸೂಪರ್‌ಸೀಡ್ ಮಾಡಬೇಕು ಹಾಗೂ ಆಡಳಿತಾಧಿಕಾರಿಗಳನ್ನು ನೇಮಿಸಬೇಕು ಎಂದು ಕರವೇ ಆಗ್ರಹಿಸಿದರು.

**ನಂದಿನಿ ಉತ್ಪನ್ನಗಳು ಹೆಸರುವಾಸಿ-ಶಂಕರೇಗೌಡ**

ಕರ್ನಾಟಕ ರಕ್ಷಣಾ ವೇದಿಕೆ ಮುಖಂಡ ಕೆ.ಟಿ. ಶಂಕರೇಗೌಡ ಅವರು ಮಾತನಾಡಿ ಮನ್‌ಮುಲ್‌ನಲ್ಲಿ ಮೊದಲು ಮಜ್ಜಿಗೆ, ತುಪ್ಪ, ಹಾಲು, ಬೆಣ್ಣೆ ಮತ್ತು ಇತರೆ ಉತ್ತಮ ಪದಾರ್ಥಗಳು ತಯಾರಾಗಿ ಉತ್ತಮ ಹೆಸರು ಗಳಿಸುತ್ತಿದ್ದವು, ಆದರೆ ಪ್ರಸ್ತುತ ಆಡಳಿತ ಮಂಡಳಿಯು ಅನ್ಯಾಯದ ಪರಮಾವಧಿಯಾಗಿ ಕೋಟಿಗಟ್ಟಲೆ ಹಣವನ್ನು ಲೂಟಿ ಮಾಡಿ ಮಕ್ಕಳಿಗೂ ಹಾಗೂ ಹಾಲು ಕುಡಿಯುವವರಿಗೂ ಅನ್ಯಾಯ ಮಾಡುತ್ತಿದೆ ಎಂದು ದೂರಿದರು. ಮನ್‌ಮುಲ್ ಜಿಲ್ಲೆಗೆ ಹೆಸರು ತರುವ ಸಂಸ್ಥೆಯಾಗಿತ್ತು, ಆದರೆ ಇಂತಹ ಅನ್ಯಾಯದ ಕೆಲಸಗಳಿಂದ ಮನ್‌ಮುಲ್ ತನ್ನ ನಂಬಿಕೆಯನ್ನು ಕಳೆದುಕೊಳ್ಳುವ ಸ್ಥಿತಿಗೆ ಬಂದಿದೆ ಎಂದು ಬೇಸರ ವ್ಯಕ್ತಪಡಿಸಿದರು.

## ಸಚಿವ ಚಲುವರಾಯಸ್ವಾಮಿ ಅಧಿಕಾರ ದುರ್ಬಳಕೆ, ಬಡ ರೈತರ ಸಾಗುವಳಿ ದಾಖಲೆ ನಾಶ
## ನಾಗಮಂಗಲ ಜೆಡಿಎಸ್ ಎಸ್‌ಸಿ/ಎಸ್‌ಟಿ ಘಟಕದ ಮುಖಂಡರ ಗಂಭೀರ ಆರೋಪ

**ಮಂಡ್ಯ:** ನಾಗಮಂಗಲ ತಾಲೂಕಿನಲ್ಲಿ 2021-2023ರ ವರೆಗೆ ಬಗರ್ ಹುಕುಂ ಸಾಗುವಳಿ ಸಕ್ರಮ ಸಮಿತಿಯು ಕಾನೂನು ಬದ್ಧವಾಗಿ ಅರ್ಹ ರೈತರಿಗೆ ಜಮೀನು ಮಂಜೂರು ಮಾಡುವುದನ್ನು ಸಹಿಸದೇ ಸಚಿವ ಚಲುವರಾಯಸ್ವಾಮಿ ಅವರು ಅಧಿಕಾರದ ದರ್ಪದಿಂದ ಅಧಿಕಾರಿಗಳನ್ನು ಬಳಸಿಕೊಂಡು ರಾಜಕೀಯ ದ್ವೇಷದಿಂದ ರೈತರ ಸಾಗುವಳಿ ಚೀಟಿಗಳನ್ನು ರದ್ದುಪಡಿಸಿ 694 ಅರ್ಜಿಗಳನ್ನು ವಜಾ ಮಾಡಲಾಗಿದೆ ಎಂದು ದಸಂಸ ರಾಜ್ಯ ಸಂಘಟನಾ ಕಾರ್ಯದರ್ಶಿ ಶ್ರೀನಿವಾಸ್.ಕೆ.ಎಂ ಆರೋಪಿಸಿದರು.




ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ನಾಗಮಂಗಲ ವಿಧಾನಸಭಾ ಕ್ಷೇತ್ರದ ಜಾತ್ಯತೀತ ಜನತಾದಳ ಎಸ್‌ಸಿ/ಎಸ್‌ಟಿ ಘಟಕದ ಅಧ್ಯಕ್ಷ ಸಂತೋಷ್.ಎನ್.ಆರ್ ನೇತೃತ್ವದಲ್ಲಿ ಮುಖಂಡರು ನಡೆಸಿದ ಪತ್ರಿಕಾಗೋಷ್ಠಿ ನಡೆಸಿ ಮೇಲಿನ ಆರೋಪ ಮಾಡಿದರು.

ಸಚಿವರು ಅಧಿಕಾರದ ಅವಧಿಯಲ್ಲಿ ರೈತರ ಮೂಲ ಕಡತಗಳನ್ನೇ ನಾಶಪಡಿಸಿ ಕಸದ ತೊಟ್ಟಿಗೆ ಎಸೆದು, ರೈತರನ್ನು ಬೀದಿಗೆ ಬೀಳುವಂತೆ ಮಾಡಿರುವ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು, ಮಂತ್ರಿಗಳ ಕೃಪಾಕಟಾಕ್ಷಕ್ಕಾಗಿ ಸರ್ಕಾರಿ ನಿಯಮಗಳನ್ನು ಗಾಳಿಗೆ ತೂರಿ ಹಲವು ಅಕ್ರಮಗಳನ್ನು ಮಾಡಿರುವ ಬಗ್ಗೆ ಪತ್ರಿಕಾ ಗೋಷ್ಠಿ ನಡೆಸುತ್ತಿರುವುದಾಗಿ ತಿಳಿಸಿದರು.

**ಗಂಗಸಮುದ್ರದಲ್ಲಿ ಅಕ್ರಮ ಗಣಿಗಾರಿಕೆ:** ಚೆಲುವರಾಯಸ್ವಾಮಿ ಅವರ ಬೆಂಬಲಿಗ ಕ್ರಷರ್ ಮಾಲೀಕ ಕರೀಗೌಡ ತಮ್ಮ ಪತ್ನಿ ಪ್ರೇಮಾ ಕೋಂ ಕರಿಗೌಡರವರ ಹೆಸರಿಗೆ ಹೊಣಕೆರೆ ಹೋಬಳಿಯ ಗಂಗಸಮುದ್ರ ಗ್ರಾಮದ ಸರ್ವೆ ನಂಬರ್ 143ರ ಅರಣ್ಯದ ಜಾಗವನ್ನು 3-18 ಎಕರೆಗೆ ಗಣಿಗಾರಿಕೆ ನಡೆಸಲು ಅರಣ್ಯ ಇಲಾಖೆಯಿಂದ ಎನ್‌ಒಸಿ ನೀಡದಿದ್ದರೂ ಹಣ ಪಡೆದು ಮಾನ್ಯ ಜಿಲ್ಲಾಧಿಕಾರಿ ಕುಮಾರ್ ರವರು ಅಕ್ರಮವಾಗಿ ಗಣಿಗಾರಿಕೆಗೆ ಅನುವು ಮಾಡಿಕೊಟ್ಟಿದ್ದಾರೆ ಎಂದು ಆರೋಪಿಸಿದರು.

**ಎಚ್.ಎನ್. ಕಾವಲ್ ಸರ್ವೆ ನಂ 106ರಲ್ಲಿ ಅತಿಕ್ರಮಣ** ಎಚ್.ಎನ್. ಕಾವಲ್ ಸರ್ವೆ ನಂ 106 ರಲ್ಲಿ ಸ್ಥಳೀಯ ಮತ್ತು ಇತರರಿಗೆ ಮಂಜೂರಾಗಿರುವ ಜಾಗವನ್ನು ಚೆಲುವರಾಯಸ್ವಾಮಿ ಅವರ ಬೆಂಬಲಿಗರು ಅಕ್ರಮವಾಗಿ ಅದೇ ಜಾಗಕ್ಕೆ ತಂತಿಬೇಲಿ ಹಾಕಿಸಿ, ಅಲ್ಲಿನ ರೈತರಿಗೆ ತೊಂದರೆ ನೀಡುತ್ತಿದ್ದಾರೆ ಎಂದರು.

ನಾಗಮಂಗಲ ತಾಲೂಕು ಎಸ್‌ಸಿ/ಎಸ್‌ಟಿ ವಿಭಾಗದ ಜಾತ್ಯತೀತ ಜನತಾದಳದ ಅಧ್ಯಕ್ಷ ಸಂತೋಷ್ ಮಾತನಾಡಿ ಯಾಕೆ ಈ ದುರುದ್ದೇಶದ ರಾಜಕಾರಣ, ರಾಜಕಾರಣ ಮಾಡುವುದಾದರೆ ಬಡ ರೈತರ ಸಾಗುವಳಿ, ಅವರ ಹೊಟ್ಟೆಪಾಡು ಕಿತ್ತುಕೊಂಡು ರಾಜಕಾರಣ ಮಾಡಬೇಕಾ ಎಂದು ಸಚಿವ ಚೆಲುವರಾಯಸ್ವಾಮಿ ಅವರನ್ನು ಪ್ರಶ್ನಿಸಿದರು ಚೆಲುವರಾಯಸ್ವಾಮಿ ಅವರ ಬೆಂಬಲಿಗರು ಇಂದು ಎಕರೆಗಟ್ಟಲೆ ಗಣಿ ಗುತ್ತಿಗೆ ಪಡೆದು ಗಣಿಗಾರಿಕೆ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.

ವರದಿ ನೆಪದಲ್ಲಿ 694 ಅರ್ಜಿಗಳನ್ನು ವಜಾ ಮಾಡಿದ್ದಾರೆ. 28 ವರ್ಷಗಳ ನಂತರ ಸಾಗುವಳಿ ಚೀಟಿ ಪಡೆದಿದ್ದ ಬಡ ರೈತರು ಇಂದು ಬೀದಿಗೆ ಬಿದ್ದಿದ್ದಾರೆ. ಈ ವಿರುದ್ಧ ಈ ಹಿಂದೆ ಬೃಹತ್ ಹೋರಾಟವನ್ನೂ ನಡೆಸಿದ್ದೇವೆ ಮುಂದೆಯೂ ಬೃಹತ್ ಹೋರಾಟ ನಡೆಸುತ್ತೇವೆ ಎಂದು ಎಚ್ಚರಿಸಿದರು.

ಹಿರಿಯ ಮುಖಂಡ ಮುಳುಕಟ್ಟೆ ಶಿವರಾಮು ಮಾತನಾಡಿ ನಾಗಮಂಗಲ ತಾಲೂಕು ಕಚೇರಿ ಮುಂಭಾಗದಲ್ಲಿ ಅಂಬೇಡ್ಕರ್ ಪ್ರತಿಮೆ ವಿಚಾರದಲ್ಲಿ 2017-18ರಲ್ಲಿಯೇ ದಲಿತ ವಿರೋಧಿ ನೀತಿ ಅನುಸರಿಸಲಾಗಿತ್ತು, ದಲಿತ ಕಾಲೋನಿ ಹೆಸರಿನಲ್ಲಿ ಅನುದಾನ ತಂದು ಬೇರೆ ಕಡೆ ಕಾಮಗಾರಿ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಈ ಬಗ್ಗೆ ಸೂಕ್ತ ತನಿಖೆ ನಡೆಸಿ ಬಡ ರೈತರಿಗೆ ನ್ಯಾಯ ಕೊಡಬೇಕು ಎಂದು ಒತ್ತಾಯಿಸಿದರು.

ಗೋಷ್ಠಿಯಲ್ಲಿ ಮುತ್ತಣ್ಣ, ಶ್ರೀನಿವಾಸ್, ರಮೇಶ್, ಚನ್ನಕೇಶವ,ಅಪ್ಪಾಜಪ್ಪ ಇದ್ದರು.

## ಜನಪದ ಸಾಹಿತ್ಯವನ್ನು ಉಳಿಸಿ ಬೆಳೆಸುವ ಕಾಯಕದಲ್ಲಿ ಡಾ. ರಾಮು ಮೂಲಗಿ ಅವರ ಪಾತ್ರ ಮಹತ್ತರವಾದದ್ದು

**ರಾಮನಗರ:** ಜಾನಪದ ಕಲೆಗಳಲ್ಲೊಂದಾದ ಪದಗಳನ್ನು ಹಾಡುವುದರೊಂದಿಗೆ ಅನೇಕ ಶಿಷ್ಯರಿಗೆ ಕಲೆ, ಸಾಹಿತ್ಯದ ತರಬೇತಿ ಕೊಟ್ಟು ಹಲವಾರು ಹಾಡುವ ತಂಡಗಳನ್ನು ಹುಟ್ಟು ಹಾಕಿರುವ ಹಾಗೂ ಜನಪದ ಸಾಹಿತ್ಯವನ್ನು ಉಳಿಸಿ ಬೆಳೆಸುವ ಕಾಯಕದಲ್ಲಿ ಡಾ. ರಾಮು ಮೂಲಗಿ ಅವರ ಪಾತ್ರ ಮಹತ್ತರವಾದದ್ದು ಎಂದು ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರು ತಿಳಿಸಿದರು.




ಅವರು ರಾಮನಗರದ ಜಾನಪದ ಲೋಕದಲ್ಲಿ ಕರ್ನಾಟಕ ಜಾನಪದ ಪರಿಷತ್ತು ವತಿಯಿಂದ ಲೋಕಸಿರಿ ತಿಂಗಳ ಅತಿಥಿ-121, ನಾಡೋಜ ಎಚ್. ಎಲ್ ನಾಗೇಗೌಡರ ನೆನಪಿನ ಪ್ರತಿ ತಿಂಗಳ ನಡೆಯುವ ತಿಂಗಳ ಅತಿಥಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಜನಪದ ಎನ್ನುವುದು ನಿರಕ್ಷರ ಕುಕ್ಷಿಗಳು ತಮ್ಮ ನೋವು ನಲಿವುಗಳನ್ನು ವ್ಯಕ್ತಪಡಿಸಲು ಇರುವ ಒಂದು ಮಾಧ್ಯಮ. ಆದರೆ ಜಾನಪದ ಜಾಡನ್ನು ವಿದ್ಯಾವಂತರು ಹಿಡಿದರೆ ಹೇಗೆ? ಎಂಬ ಪ್ರಶ್ನೆಗೆ ಉತ್ತರ ಡಾ. ರಾಮು ಮೂಲಗಿ ಅವರು. ಎಂ.ಎ. ಬಿ.ಎಡ್. ಪದವಿ ಅಲ್ಲದೇ ?ಧಾರವಾಡ ಜಿಲ್ಲೆಯ ಜನಪದ ಸಂಪ್ರದಾಯಗಳು? ಕುರಿತ ಸಂಶೋಧನಾ ಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯದ ಪಿಎಚ್‌ಡಿ. ಪದವಿ ಪಡೆದಿರುವ ಇವರು ವೃತ್ತಿಯಲ್ಲಿ ಪ್ರಾಧ್ಯಾಪಕರು. ಪ್ರವೃತ್ತಿಯಲ್ಲಿ ಕಲಾವಿದರು. ಧಾರವಾಡ ಜಿಲ್ಲಾ ಹುಬ್ಬಳ್ಳಿ ತಾಲ್ಲೂಕು ನೂಲ್ವಿ ಗ್ರಾಮದ ತಂದೆ ಲೇಟ್ ಬಸವಂತಪ್ಪ ಹಾಗೂ ತಾಯಿ ಲೇಟ್ ಬಸಮ್ಮ ಅವರ ಪುತ್ರರು. ಜನಪದ ಸಾಹಿತ್ಯವನ್ನು ಉಳಿಸಿ ಬೆಳೆಸುವ ಕಾಯಕದಲ್ಲಿ ಇವರ ಪಾತ್ರ ಮಹತ್ತರವಾದದ್ದು. ದೊಡ್ಡಾಟ ಪದಗಳು, ಸಣ್ಣಾಟ ಪದಗಳು, ಸುಗ್ಗಿಪದಗಳು, ಗೀಗೀಪದಗಳು, ಹಂತಿಪದಗಳು, ಲಾವಣಿ-ತತ್ವಪದಗಳು, ಡೊಳ್ಳಿನಪದಗಳು, ಸೋಬಾನೆಪದಗಳು, ಲಾಲಿ-ಜೋಗುಳಪದಗಳು, ಹಚ್ಚೆಪದಗಳು, ವೀರಭದ್ರನ ಒಡಬು, ಹೋಳಿಪದಗಳು, ಮೊಹರಂ ಪದಗಳು, ಕೊರವಂಜಿ ಪದಗಳು, ಕರಪಾಲ ಪದಗಳು, ಗೊರವರ ಪದಗಳು ಹೀಗೆ ಇವರ ಹಾಡುವ ಪದಗಳ ದೊಡ್ಡಪಟ್ಟಿಯೇ ಇದೆ. ಇವರು ಪದಗಳನ್ನು ಹಾಡುವುದಲ್ಲದೇ ಅನೇಕ ಶಿಷ್ಯರಿಗೆ ಕಲೆ, ಸಾಹಿತ್ಯದ ತರಬೇತಿ ಕೊಟ್ಟು ಹಲವಾರು ಹಾಡುವ ತಂಡಗಳನ್ನು ಹುಟ್ಟು ಹಾಕಿದ್ದಾರೆ ಎಂದು ಅವರು ತಿಳಿಸಿದರು.

ಜಾನಪದ ಲೋಕದ ಕಾರ್ಯನಿರ್ವಾಹಣಾಧಿಕಾರಿ ಸರಸವಾಣಿ ಸ್ವಾಗತಿಸಿದರು. ಯು.ಎಂ. ರವಿ ಕಲಾವಿದರೊಂದಿಗೆ ಸಂವಾದ ಕಾರ್ಯಕ್ರಮ ನಡೆಸಿದರು. ಡಿಪ್ಲೋಮಾ ವಿದ್ಯಾರ್ಥಿನಿ ವಿಜಯಲಕ್ಷ್ಮೀ ನಿರೂಪಣೆ ಮಾಡಿದರು. ಸಂಯೋಜಕ ಸಂದೀಪ್, ಜಾನಪದ ಡಿಪ್ಲೂಮಾ ವಿದ್ಯಾರ್ಥಿಗಳು ಜಾನಪದ ಲೋಕದ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಕಾವೇರಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ನಡೆದ ಅಪ್ರೆಂಟಿಸ್‌ಶಿಪ್ ಮತ್ತು ಉದ್ಯೋಗ ಮೇಳ

## ವಿದ್ಯಾರ್ಥಿಗಳು ಕೌಶಲ್ಯಗಳನ್ನು ಬೆಳೆಸಿಕೊಂಡು ಉದ್ಯೋಗಾವಕಾಶ ಪಡೆಯಲು ಸಿದ್ಧರಾಗಿ-ಡಾ.ಸಂಗಮೇಶ್ವರ್

**ಮಂಡ್ಯ:** ಉದ್ಯೋಗಾವಕಾಶಗಳ ಕೊರತೆಯಿದೆ ಎಂಬ ಭಾವನೆ ಹಲವರಲ್ಲಿದೆ.ಆದರೆ ವಿವಿಧ ಕೈಗಾರಿಕೆಗಳು ಹಾಗೂ ಕಂಪನಿಗಳಲ್ಲಿ ಉದ್ಯೋಗಾವಕಾಶಗಳು ಲಭ್ಯವಿದ್ದು, ವಿದ್ಯಾರ್ಥಿಗಳು ಅವುಗಳಿಗೆ ತಕ್ಕಂತೆ ತಮ್ಮ ಕೌಶಲ್ಯಗಳನ್ನು ಬೆಳೆಸಿಕೊಂಡು ಉದ್ಯೋಗ ಪಡೆಯಲು ಸಿದ್ಧರಾಗಬೇಕು ಎಂದು ಕಾವೇರಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಅಧ್ಯಕ್ಷ ಡಾ.ಸಂಗಮೇಶ್ವರ ಹೇಳಿದರು.

ತಾಲ್ಲೂಕಿನ ಸಿದ್ಧಯ್ಯನಕೊಪ್ಪಲು ಗೇಟ್ ಸಮೀಪದ ಸುಂಡಹಳ್ಳಿಯಲ್ಲಿರುವ ಕಾವೇರಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ವತಿಯಿಂದ ಕೇಂದ್ರ ಸರ್ಕಾರದ ಬೋರ್ಡ್ ಆಫ್ ಅಪ್ರೆಂಟಿಸ್‌ಶಿಪ್ ಟ್ರೈನಿಂಗ್ (ಬೋಟ್), ಸದರ್ನ್ ರೀಜನ್, ಚೆನ್ನೈ ಸಹಯೋಗದಲ್ಲಿ ಆಯೋಜಿಸಿದ್ದ ಅಪ್ರೆಂಟಿಸ್‌ಶಿಪ್ ಮತ್ತು ಉದ್ಯೋಗ ಮೇಳವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂಜಿನಿಯರಿಂಗ್ ಕಾಲೇಜುಗಳು, ಪಾಲಿಟೆಕ್ನಿಕ್‌ಗಳು ಹಾಗೂ ಐಟಿಐಗಳಲ್ಲಿ ವ್ಯಾಸಂಗ ಪೂರ್ಣಗೊಳಿಸಿರುವ ವಿದ್ಯಾರ್ಥಿಗಳಿಗೆ ಉದ್ಯೋಗ ಮತ್ತು ಅಪ್ರೆಂಟಿಸ್‌ಶಿಪ್ ತರಬೇತಿಯ ಅವಕಾಶಗಳನ್ನು ಕಲ್ಪಿಸುವ ಉದ್ದೇಶದಿಂದ



ಮೇಳ ಆಯೋಜಿಸಲಾಗಿದೆ.ವಿದ್ಯಾರ್ಥಿಗಳು ಇಂತಹ ಅವಕಾಶಗಳನ್ನು ಸದ್ಬಳಕೆ ಮಾಡಿಕೊಂಡು ತಮ್ಮ ವಿದ್ಯಾರ್ಹತೆ ಹಾಗೂ ಕೌಶಲ್ಯಕ್ಕೆ ಅನುಗುಣವಾಗಿ ಉತ್ತಮ ಉದ್ಯೋಗ ಪಡೆಯಲು ಮುಂದಾಗಬೇಕು ಎಂದು ಸಲಹೆ ನೀಡಿದರು.

**ಕೌಶಲ್ಯಕ್ಕೆ ತಕ್ಕ ಉದ್ಯೋಗ ಪಡೆಯಲು ಮುಂದಾಗಿ: ರಾಹುಲ್**

ಬೋರ್ಡ್ ಆಫ್ ಅಪ್ರೆಂಟಿಸ್‌ಶಿಪ್ ಟ್ರೈನಿಂಗ್‌ನ ಸಹಾಯಕ ನಿರ್ದೇಶಕ ರಾಹುಲ್ ಮಾತನಾಡಿ, ಉದ್ಯೋಗ ಮೇಳಗಳು ವಿದ್ಯಾರ್ಥಿಗಳಿಗೆ ಕೈಗಾರಿಕೆಗಳೊಂದಿಗೆ ನೇರ ಸಂಪರ್ಕ ಸಾಧಿಸಲು ಹಾಗೂ ಉದ್ಯೋಗಾವಕಾಶಗಳನ್ನು ಕಂಡುಕೊಳ್ಳಲು ಉತ್ತಮ ವೇದಿಕೆಯಾಗಿವೆ.ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಹತೆಗೆ ಅನುಗುಣವಾಗಿ ಕೌಶಲ್ಯಗಳನ್ನು ಬೆಳೆಸಿಕೊಂಡು ಉದ್ಯೋಗ ಪಡೆಯಲು ಪ್ರಯತ್ನಿಸಬೇಕು ಎಂದು ಹೇಳಿದರು.

ಅಪ್ರೆಂಟಿಸ್‌ಶಿಪ್ ತರಬೇತಿಯ ಮೂಲಕ ವಿದ್ಯಾರ್ಥಿಗಳು ಕೈಗಾರಿಕೆಗಳಲ್ಲಿ ಕೆಲಸದ ಅನುಭವ ಪಡೆಯು ವುದರ ಜತೆಗೆ ವೃತ್ತಿಜೀವನಕ್ಕೆ ಅಗತ್ಯವಾದ ಪ್ರಾಯೋಗಿಕ ಜ್ಞಾನವನ್ನು ಗಳಿಸಬಹುದು. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಬೋರ್ಡ್ ಆಫ್ ಅಪ್ರೆಂಟಿಸ್‌ಶಿಪ್ ಟ್ರೈನಿಂಗ್ ಕೈಗಾರಿಕೆಗಳು ಹಾಗೂ ಶಿಕ್ಷಣ ಸಂಸ್ಥೆಗಳ ಸಹಯೋಗದೊಂದಿಗೆ ವಿದ್ಯಾರ್ಥಿಗಳಿಗೆ ತರಬೇತಿ ಮತ್ತು ಉದ್ಯೋಗದ ಅವಕಾಶಗಳನ್ನು ಕಲ್ಪಿಸಲು ಕಾರ್ಯನಿರ್ವಹಿಸುತ್ತಿದೆ ಎಂದರು.

**ಗ್ರಾಮೀಣರಿಗೆ ಉದ್ಯೋಗ ಕಲ್ಪಿಸುವುದೇ ಉದ್ದೇಶ: ಡಾ. ಎ.ಎಸ್.ಶ್ರೀಕಂಠಪ್ಪ:** ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಒಂದೇ ವೇದಿಕೆಯಲ್ಲಿ ವಿವಿಧ ಕಂಪನಿಗಳ ಉದ್ಯೋಗಾವಕಾಶಗಳನ್ನು ಪರಿಚಯಿಸಿ, ಉದ್ಯೋಗ ಪಡೆಯಲು ನೆರವಾಗುವ ಉದ್ದೇಶದಿಂದ ಅಪ್ರೆಂಟಿಸ್‌ಶಿಪ್ ಮತ್ತು ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಕಾವೇರಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪ್ರಾಂಶುಪಾಲ ಡಾ.ಎ.ಎಸ್. ಶ್ರೀಕಂಠಪ್ಪ ಹೇಳಿದರು. ಬಿ.ಸಿ.ಎ., ಬಿ.ಎಸ್ಸಿ., ಬಿ.ಕಾಂ ಸೇರಿದಂತೆ ವಿವಿಧ ಪದವಿಗಳನ್ನು ಪೂರ್ಣಗೊಳಿಸಿದವರು ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳು ಸೂಕ್ತ ಉದ್ಯೋಗಾವಕಾಶಗಳನ್ನು ಹುಡುಕುವುದು ಕೆಲವೊಮ್ಮೆ ಸವಾಲಾಗಿರುತ್ತದೆ. ವಿಶೇಷವಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ವಿವಿಧ ಕಂಪನಿಗಳನ್ನು ಸಂಪರ್ಕಿಸಿ ಉದ್ಯೋಗ ಪಡೆಯಲು ಅಗತ್ಯವಾದ ವೇದಿಕೆ ಮತ್ತು ಮಾರ್ಗದರ್ಶನದ ಕೊರತೆ ಎದುರಾಗುತ್ತದೆ. ಇದನ್ನು ಗಮನದಲ್ಲಿಟ್ಟು ಕೊಂಡು ವಿದ್ಯಾರ್ಥಿಗಳಿಗೆ ಒಂದೇ ಸ್ಥಳದಲ್ಲಿ ವಿವಿಧ ಕಂಪನಿಗಳನ್ನು ಸಂಪರ್ಕಿಸುವ ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಿಐಟಿ ಕಾರ್ಯದರ್ಶಿ ಡಾ.ಸಿ.ಜೆ. ಗಂಗಾಧರಗೌಡ,ಡಾ.ಸಿದ್ದರಾಜು ಬಿ.ಪಿ, ಡಾ.ವಿನಯ್‌ಕುಮಾರ್ ಎಂ.ಜೆ, ಅಮಾಸ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ಕಾರ್ಗಿಲ್ ಹುತಾತ್ಮನ ಪತ್ನಿಯಿಂದ ಕರ್ನಾಟಕದ ರಾಜ್ಯಪಾಲೆಯವರೆಗೆ!

## ಡಾ. ಸುಧಾ ಯಾದವ್: ಹೋರಾಟ, ಶಿಕ್ಷಣ, ರಾಜಕೀಯ ಮತ್ತು ಸಂವಿಧಾನದ ಹೊಣೆಗಾರಿಕೆಯ ಹೊಸ ಅಧ್ಯಾಯ

ವೆಂಕಟೇಶ ಎಸ್. ಸಂಪ



ವೆಂಕಟೇಶ ಎಸ್. ಸಂಪ.
ಸಂಪಾದಕರು
ಸಂಪದ ಸಾಲು ಪತ್ರಿಕೆ
9448219347

ಕೆಲವು ಬದುಕುಗಳು ವೈಯಕ್ತಿಕ ಸಾಧನೆಯ ಕಥೆಗಳಾಗಿರುತ್ತವೆ. ಇನ್ನು ಕೆಲವು ಬದುಕುಗಳು ವೈಯಕ್ತಿಕ ನೋವನ್ನು ಮೀರಿ ಸಾರ್ವಜನಿಕ ಬದುಕಿನ ಹೊಣೆಗಾರಿಕೆಯನ್ನು ಹೊತ್ತುಕೊಳ್ಳುವ ಕಥೆಗಳಾಗಿರುತ್ತವೆ. ಡಾ. ಸುಧಾ ಯಾದವ್ ಅವರ ಜೀವನದಲ್ಲಿ ಈ ಎರಡೂ ಆಯಾಮಗಳನ್ನು ಕಾಣಬಹುದು. ಕಾರ್ಗಿಲ್ ಯುದ್ಧದಲ್ಲಿ ಪತಿಯನ್ನು ಕಳೆದುಕೊಂಡ ನೋವಿನ ನಡುವೆಯೂ ಸಾರ್ವಜನಿಕ ಜೀವನದಲ್ಲಿ ಗುರುತಿಸಿಕೊಂಡು, ರಾಜಕೀಯದಲ್ಲಿ ತಮ್ಮದೇ ಆದ ಸ್ಥಾನವನ್ನು ಗಳಿಸಿ, ಇದೀಗ ಕರ್ನಾಟಕದ ರಾಜ್ಯಪಾಲೆಯಾಗಿ ನೇಮಕಗೊಂಡಿರುವ ಅವರ ಪಯಣ ಕುತೂಹಲಕರವಾಗಿದೆ.

2026ರ ಅಕ್ಟೋಬರ್ 12ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಡಾ. ಸುಧಾ ಯಾದವ್ ಅವರನ್ನು ಕರ್ನಾಟಕದ ನೂತನ ರಾಜ್ಯಪಾಲೆಯಾಗಿ ನೇಮಕ ಮಾಡಿದ್ದಾರೆ. ಈ ನೇಮಕದೊಂದಿಗೆ ರಾಜ್ಯದ ಸಾಂವಿಧಾನಿಕ ನಾಯಕತ್ವದಲ್ಲಿ ಹೊಸ ಅಧ್ಯಾಯ ಆರಂಭವಾಗಲಿದೆ. ಆದರೆ ಈ ಹುದ್ದೆಯ ಮಹತ್ವವನ್ನು ಅರ್ಥಮಾಡಿಕೊಳ್ಳಲು ಅವರ ಹಿನ್ನೆಲೆ, ಶಿಕ್ಷಣ, ರಾಜಕೀಯ ಪಯಣ ಮತ್ತು ರಾಜ್ಯಪಾಲರ ಸಾಂವಿಧಾನಿಕ ಜವಾಬ್ದಾರಿಗಳನ್ನು ಅರಿಯುವುದು ಅಗತ್ಯ.

**ಹರಿಯಾಣದ ಹಳ್ಳಿಯಿಂದ ಉನ್ನತ ಶಿಕ್ಷಣದ ಹಾದಿಗೆ**

ಡಾ. ಸುಧಾ ಯಾದವ್ ಅವರು 1965ರ ಅಕ್ಟೋಬರ್ 16ರಂದು ಹರಿಯಾಣದ ರೇವಾರಿ ಜಿಲ್ಲೆಯ ಮೊಟ್ಲಾ ಕಲನ್ ಗ್ರಾಮದಲ್ಲಿ ಜನಿಸಿದರು. ಗ್ರಾಮೀಣ ಪರಿಸರದಲ್ಲಿ ಬೆಳೆದ ಅವರು ಶಿಕ್ಷಣವನ್ನು ತಮ್ಮ ಬದುಕಿನ ಪ್ರಮುಖ ಸಾಧನವನ್ನಾಗಿ ಮಾಡಿಕೊಂಡರು.

ಅವರು ರೂರ್ಕಿ ವಿಶ್ವವಿದ್ಯಾಲಯದಿಂದ ರಸಾಯನಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಇದೇ ವಿಷಯದಲ್ಲಿ ಪಿಎಚ್‌ಡಿ ಪದವಿಯನ್ನೂ ಗಳಿಸಿದರು. ಅವರ ಶೈಕ್ಷಣಿಕ ಹಿನ್ನೆಲೆ ಗಮನಾರ್ಹವಾಗಿದ್ದು, ರಾಜಕೀಯಕ್ಕೆ ಪ್ರವೇಶಿಸುವ ಮೊದಲು ಬೋಧನಾ ವೃತ್ತಿಯಲ್ಲಿಯೂ ತೊಡಗಿಸಿಕೊಂಡಿದ್ದರು.

ಇಲ್ಲಿ ಗಮನಿಸಬೇಕಾದ ಅಂಶವೊಂದಿದೆ. ಸಾರ್ವಜನಿಕ ಜೀವನದಲ್ಲಿ ಗುರುತಿಸಿಕೊಳ್ಳಲು ರಾಜಕೀಯ ಹಿನ್ನೆಲೆಯೇ ಇರಬೇಕು ಎಂಬ ನಿಯಮವಿಲ್ಲ. ಶಿಕ್ಷಣ, ವೈಯಕ್ತಿಕ ಅನುಭವ, ಸಾಮಾಜಿಕ ಸಂಪರ್ಕ ಮತ್ತು ಸಾರ್ವಜನಿಕ ಸೇವೆಯ ಆಸಕ್ತಿಯೂ ಒಬ್ಬರನ್ನು ನಾಯಕತ್ವದತ್ತ ಕೊಂಡೊಯ್ಯಬಲ್ಲವು. ಸುಧಾ ಯಾದವ್ ಅವರ ಬದುಕಿನ ಆರಂಭಿಕ ಹಂತ ಈ ವಿಚಾರಕ್ಕೆ ಉದಾಹರಣೆಯಾಗಿದೆ.

**ಕಾರ್ಗಿಲ್ ಯುದ್ಧದ ನೋವು? ಸಾರ್ವಜನಿಕ ಬದುಕಿನ ಸವಾಲು:** ಸುಧಾ ಯಾದವ್ ಅವರ ಜೀವನದಲ್ಲಿ 1999ರ ಕಾರ್ಗಿಲ್ ಯುದ್ಧ ಒಂದು ಮಹತ್ವದ ತಿರುವು. ಅವರ ಪತಿ ಸುಖಬೀರ್ ಸಿಂಗ್ ಯಾದವ್ ಅವರು ಗಡಿ ಭದ್ರತಾ ಪಡೆಯ (BSF)ಡೆಪ್ಯುಟಿ ಕಮಾಂಡೆಂಟ್ ಆಗಿ ಸೇವೆ





ಸಲ್ಲಿಸುತ್ತಿದ್ದರು. ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಅವರು ಹುತಾತ್ಮರಾದರು.

ಪತಿಯ ಅಗಲಿಕೆ ಕುಟುಂಬಕ್ಕೆ ವೈಯಕ್ತಿಕವಾಗಿ ತುಂಬಲಾರದ ನಷ್ಟ. ಇಬ್ಬರು ಮಕ್ಕಳ ಜವಾಬ್ದಾರಿಯೂ ಅವರ ಮೇಲಿತ್ತು ಎಂಬುದನ್ನು ಆ ಕಾಲದ ವರದಿಗಳು ಉಲ್ಲೇಖಿಸಿವೆ. ಇಂತಹ ಸಂದರ್ಭದಲ್ಲಿ ಸಾರ್ವಜನಿಕ ಬದುಕಿನತ್ತ ಹೆಜ್ಜೆಯಿಡುವುದು ಸುಲಭದ ನಿರ್ಧಾರವಲ್ಲ.

ಆದರೆ ಅವರ ಬದುಕು ಅಲ್ಲಿಗೇ ನಿಲ್ಲಲಿಲ್ಲ. 1999ರ ಲೋಕಸಭಾ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷವು ಅವರಿಗೆ ಹರಿಯಾಣದ ಮಹೇಂದ್ರಗಢ ಕ್ಷೇತ್ರದಿಂದ ಸ್ಪರ್ಧಿಸಲು ಅವಕಾಶ ನೀಡಿತು. ರಾಜಕೀಯದ ಅನುಭವ ಕಡಿಮೆ ಇದ್ದರೂ ಅವರು ಚುನಾವಣಾ ಕಣಕ್ಕಿಳಿದರು.

ಆ ಚುನಾವಣೆಯಲ್ಲಿ ಕಾಂಗ್ರೆಸ್‌ನ ಪ್ರಭಾವಿ ನಾಯಕ ರಾವ್ ಇಂದ್ರಜಿತ್ ಸಿಂಗ್ ಅವರನ್ನು ಸೋಲಿಸಿ ಲೋಕಸಭೆ ಪ್ರವೇಶಿಸಿದರು. ಯುದ್ಧದಲ್ಲಿ ಪತಿಯನ್ನು ಕಳೆದುಕೊಂಡ ಅದೇ ವರ್ಷ ಅವರು ಸಂಸತ್ತಿಗೆ ಆಯ್ಕೆಯಾಗಿದ್ದು, ಅವರ ಜೀವನದ ಅತ್ಯಂತ ಗಮನಾರ್ಹ ತಿರುವುಗಳಲ್ಲಿ ಒಂದಾಗಿದೆ.

ದುಃಖದ ಅನುಭವವೊಂದು ಸಾರ್ವಜನಿಕ ಜೀವನದ ಅಂತ್ಯವಾಗಬೇಕೆಂದಿಲ್ಲ; ಕೆಲವೊಮ್ಮೆ ಅದೇ ಹೊಸ ಜವಾಬ್ದಾರಿಯ ಆರಂಭವಾಗಬಹುದು ಎಂಬ ಸಂದೇಶವನ್ನು ಈ ಪಯಣ ನೀಡುತ್ತದೆ.

ಸಂಸತ್ತಿನಿಂದ ಬಿಜೆಪಿ ರಾಷ್ಟ್ರೀಯ ನಾಯಕತ್ವದವರೆಗೆ

1999ರಲ್ಲಿ ಲೋಕಸಭೆಗೆ ಆಯ್ಕೆಯಾದ ಸುಧಾ ಯಾದವ್ ಅವರು ರಾಷ್ಟ್ರೀಯ ರಾಜಕೀಯದಲ್ಲಿ ಗುರುತಿಸಿಕೊಂಡರು. 2004ರ ಲೋಕಸಭಾ ಚುನಾವಣೆಯಲ್ಲಿ ಮಹೇಂದ್ರಗಢ ಕ್ಷೇತ್ರದಿಂದ ಮತ್ತೆ ಸ್ಪರ್ಧಿಸಿದರೂ ಗೆಲುವು ಸಾಧಿಸಲಿಲ್ಲ. 2009ರಲ್ಲಿ ಗುರುಗ್ರಾಮ ಕ್ಷೇತ್ರದಿಂದ ಸ್ಪರ್ಧಿಸಿದಾಗಲೂ ಜಯ ಅವರದಾಗಲಿಲ್ಲ.

ಚುನಾವಣೆಯಲ್ಲಿ ಸೋಲು ಕಂಡರೂ ಅವರ ರಾಜಕೀಯ ಪಯಣ ಸಂಪೂರ್ಣವಾಗಿ ಸ್ಥಗಿತಗೊಳ್ಳಲಿಲ್ಲ. ರಾಜಕೀಯದಲ್ಲಿ ಸಂಸತ್ತಿನ ಸದಸ್ಯತ್ವವೇ ಸಾರ್ವಜನಿಕ ಸೇವೆಯ ಏಕೈಕ ಮಾರ್ಗವಲ್ಲ. ಪಕ್ಷದ ಸಂಘಟನೆ, ಸಾಮಾಜಿಕ ಸಮುದಾಯಗಳೊಂದಿಗೆ ಸಂಪರ್ಕ ಮತ್ತು ನೀತಿ ನಿರೂಪಣೆಯ ಕೆಲಸಗಳೂ ಪ್ರಮುಖ ಪಾತ್ರ ವಹಿಸುತ್ತವೆ.

2015ರಲ್ಲಿ ಅವರನ್ನು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದ ಜವಾಬ್ದಾರಿಯೊಂದಿಗೆ ನೇಮಿಸಲಾಯಿತು. ನಂತರ ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದ ಸದಸ್ಯೆಯಾಗಿಯೂ ಸೇವೆ ಸಲ್ಲಿಸಿದರು. ಕೇಂದ್ರ ಸರ್ಕಾರದ ಅಧಿಕೃತ ದಾಖಲೆಗಳ ಪ್ರಕಾರ, ಅವರು 2019ರ ಫೆಬ್ರವರಿ 28ರಂದು ಆಯೋಗದ ಸದಸ್ಯರಾಗಿ ನೇಮಕಗೊಂಡು, ಮೂರು ವರ್ಷಗಳ ಅವಧಿಯನ್ನು 2022ರ ಫೆಬ್ರವರಿ 27ರಂದು ಪೂರ್ಣಗೊಳಿಸಿದರು.

2022ರ ಆಗಸ್ಟ್‌ನಲ್ಲಿ ಬಿಜೆಪಿ ಸಂಸದೀಯ ಮಂಡಳಿ ಮತ್ತು ಕೇಂದ್ರ ಚುನಾವಣಾ ಸಮಿತಿಯಲ್ಲಿಯೂ ಅವರಿಗೆ ಸ್ಥಾನ ದೊರೆಯಿತು. ಪಕ್ಷದ ಸಂಸದೀಯ ಮಂಡಳಿಯಲ್ಲಿ ಮಹಿಳಾ ಪ್ರತಿನಿಧಿಯಾಗಿ ಅವರ ಉಪಸ್ಥಿತಿಯು ರಾಷ್ಟ್ರೀಯ ರಾಜಕೀಯದಲ್ಲಿ ಅವರ ಸಂಘಟನಾ ಪಾತ್ರವನ್ನು ತೋರಿಸುತ್ತದೆ.

**ಕರ್ನಾಟಕದ ಎರಡನೇ ಮಹಿಳಾ ರಾಜ್ಯಪಾಲೆ**

ಅಕ್ಟೋಬರ್ 12, 2026ರಂದು ರಾಷ್ಟ್ರಪತಿ ಭವನ ಹೊರಡಿಸಿದ ಅಧಿಕೃತ ಪ್ರಕಟಣೆಯ ಪ್ರಕಾರ, ಡಾ. ಸುಧಾ ಯಾದವ್ ಅವರನ್ನು ಕರ್ನಾಟಕದ ರಾಜ್ಯಪಾಲೆಯಾಗಿ ನೇಮಕ ಮಾಡಲಾಗಿದೆ. ಈ ಬದಲಾವಣೆಯಲ್ಲಿ ಥಾವರ್‌ಚಂದ್ ಗೆಹ್ಲೋಟ್ ಅವರ ಸ್ಥಾನಕ್ಕೆ ಅವರು ಬರಲಿದ್ದಾರೆ. ನೇಮಕವು ಅವರು ಹೊಸ ಹುದ್ದೆಯ ಅಧಿಕಾರ ವಹಿಸಿಕೊಳ್ಳುವ ದಿನದಿಂದ ಜಾರಿಗೆ ಬರಲಿದೆ.

ಇದರೊಂದಿಗೆ ಅವರು ಕರ್ನಾಟಕದ ಎರಡನೇ ಮಹಿಳಾ ರಾಜ್ಯಪಾಲೆಯಾಗಲಿದ್ದಾರೆ ಎಂದು ವರದಿಗಳು ತಿಳಿಸಿವೆ.

ಕರ್ನಾಟಕವು ವೈವಿಧ್ಯಮಯ ಭಾಷೆ, ಸಂಸ್ಕೃತಿ, ರಾಜಕೀಯ ಮತ್ತು ಸಾಮಾಜಿಕ ಹಿನ್ನೆಲೆಯನ್ನು ಹೊಂದಿರುವ ರಾಜ್ಯ. ಇಲ್ಲಿನ ರಾಜಕೀಯ ಬೆಳವಣಿಗೆಗಳು, ವಿಶ್ವವಿದ್ಯಾಲಯಗಳ ಆಡಳಿತ, ವಿಧಾನಮಂಡಲದ ಪ್ರಕ್ರಿಯೆಗಳು ಮತ್ತು ಸಂವಿಧಾನಾತ್ಮಕ ಹೊಣೆಗಾರಿಕೆಗಳು ರಾಜ್ಯಪಾಲರ ಹುದ್ದೆಯನ್ನು ಮಹತ್ವಪೂರ್ಣವಾಗಿಸುತ್ತವೆ.

ಆದರೆ ರಾಜ್ಯಪಾಲರ ಹುದ್ದೆಯನ್ನು ಕೇವಲ ರಾಜಕೀಯ ನೇಮಕಾತಿಯಾಗಿ ನೋಡುವುದಕ್ಕಿಂತ ಅದರ ಸಂವಿಧಾನಾತ್ಮಕ ಪಾತ್ರವನ್ನು ಅರ್ಥಮಾಡಿಕೊಳ್ಳುವುದು ಮುಖ್ಯ.

ರಾಜ್ಯಪಾಲರ ಅಧಿಕಾರ ಮತ್ತು ಜವಾಬ್ದಾರಿಗಳೇನು?

ಭಾರತೀಯ ಸಂವಿಧಾನದ ಪ್ರಕಾರ ರಾಜ್ಯಪಾಲರು ರಾಜ್ಯದ ಸಾಂವಿಧಾನಿಕ ಮುಖ್ಯಸ್ಥರು. ರಾಜ್ಯದ ದೈನಂದಿನ ಆಡಳಿತವನ್ನು ಮುಖ್ಯಮಂತ್ರಿಯ ನೇತೃತ್ವದ ಸಚಿವ ಸಂಪುಟ ನಡೆಸುತ್ತದೆ. ರಾಜ್ಯಪಾಲರು ಸಂವಿಧಾನದಲ್ಲಿ ನಿಗದಿಪಡಿಸಿರುವ ಅಧಿಕಾರ ಮತ್ತು ಮಿತಿಗಳೊಳಗೆ ಕಾರ್ಯನಿರ್ವಹಿಸುತ್ತಾರೆ.

**ಅವರ ಪ್ರಮುಖ ಜವಾಬ್ದಾರಿಗಳು:**

* ಸಚಿವ ಸಂಪುಟ: ಮುಖ್ಯಮಂತ್ರಿಯನ್ನು ನೇಮಿಸುವುದು ಮತ್ತು ಸಂವಿಧಾನಕ್ಕೆ ಅನುಗುಣವಾಗಿ ಸರ್ಕಾರ ರಚನೆಯ ಪ್ರಕ್ರಿಯೆಯಲ್ಲಿ ಪಾತ್ರವಹಿಸುವುದು.
* ವಿಧಾನಮಂಡಲ: ಅಧಿವೇಶನ ಕರೆಯುವುದು, ಮುಂದೂಡುವುದು ಮತ್ತು ಸಂವಿಧಾನದಲ್ಲಿ ನಿರ್ದಿಷ್ಟಪಡಿಸಿದ ಸಂದರ್ಭಗಳಲ್ಲಿ ಮಸೂದೆಗಳ ಕುರಿತು ನಿರ್ಧಾರ ಕೈಗೊಳ್ಳುವುದು.
* ಶಾಸನ ಪ್ರಕ್ರಿಯೆ: ಮಸೂದೆಗಳಿಗೆ ಒಪ್ಪಿಗೆ ನೀಡುವುದು, ಮರುಪರಿಶೀಲನೆಗೆ ಹಿಂದಿರುಗಿಸುವುದು ಅಥವಾ ಸಂವಿಧಾನ ಅನುಮತಿಸುವ ಸಂದರ್ಭಗಳಲ್ಲಿ ರಾಷ್ಟ್ರಪತಿಯ ಪರಿಗಣನೆಗೆ ಕಾಯ್ದಿರಿಸುವುದು.
* ವಿಶ್ವವಿದ್ಯಾಲಯಗಳು: ಸಂಬಂಧಿತ ರಾಜ್ಯ ಕಾನೂನುಗಳು ನೀಡಿರುವ ಅಧಿಕಾರಗಳ ಪ್ರಕಾರ ಕುಲಾಧಿಪತಿ ಸೇರಿದಂತೆ ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದ ಜವಾಬ್ದಾರಿಗಳನ್ನು ನಿರ್ವಹಿಸುವುದು.
* ಸಂವಿಧಾನಾತ್ಮಕ ಕರ್ತವ್ಯ: ರಾಜ್ಯದ ಆಡಳಿತ ಸಂವಿಧಾನದ ಚೌಕಟ್ಟಿನಲ್ಲಿ ನಡೆಯುವಂತೆ ತಮ್ಮ ಅಧಿಕಾರವನ್ನು ಬಳಸುವುದು.

ಈ ಅಧಿಕಾರಗಳನ್ನು ಬಳಸುವಾಗ ರಾಜ್ಯಪಾಲರು, ಚುನಾಯಿತ ಸರ್ಕಾರ, ವಿಧಾನಮಂಡಲ ಮತ್ತು ಸಂವಿಧಾನಾತ್ಮಕ ಸಂಸ್ಥೆಗಳ ನಡುವಿನ ಸಂಬಂಧ ಸೂಕ್ಷ್ಮವಾಗಿರುತ್ತದೆ. ಆದ್ದರಿಂದ ರಾಜ್ಯಪಾಲರ ಪಾತ್ರವು ಕೇವಲ ಔಪಚಾರಿಕವಾಗಿಯೂ ಅಲ್ಲ, ಅನಿಯಮಿತ ಅಧಿಕಾರದ ಹುದ್ದೆಯಾಗಿಯೂ ಅಲ್ಲ. ಸಂವಿಧಾನವೇ ಅದರ ಗಡಿ ಮತ್ತು ಮಾರ್ಗದರ್ಶಿ.

**ಕರ್ನಾಟಕದ ಜನರ ನಿರೀಕ್ಷೆಗಳೇನು?**

ಕರ್ನಾಟಕಕ್ಕೆ ಹೊಸ ರಾಜ್ಯಪಾಲರು ಬಂದಾಗ ಜನರಲ್ಲಿ ಸಹಜವಾಗಿ ನಿರೀಕ್ಷೆಗಳು ಮೂಡುತ್ತವೆ. ಶಿಕ್ಷಣದ ಗುಣಮಟ್ಟ, ವಿಶ್ವವಿದ್ಯಾಲಯಗಳ ಸ್ವಾಯತ್ತತೆ, ಸಂವಿಧಾನಾತ್ಮಕ ಸಂಸ್ಥೆಗಳ ಗೌರವ, ಪ್ರಜಾಪ್ರಭುತ್ವದ ಮೌಲ್ಯಗಳು ಮತ್ತು ರಾಜ್ಯದ ವಿವಿಧ ಸಮುದಾಯಗಳ ಆಶೋತ್ತರಗಳು ಈ ಚರ್ಚೆಯ ಪ್ರಮುಖ ಭಾಗಗಳಾಗುತ್ತವೆ.

ಸುಧಾ ಯಾದವ್ ಅವರ ಮುಂದಿರುವ ಸವಾಲು ಅವರ ಹಿಂದಿನ ರಾಜಕೀಯ ಅನುಭವವನ್ನು ಸಂವಿಧಾನಾತ್ಮಕ ಜವಾಬ್ದಾರಿಗಳೊಂದಿಗೆ ಸಮತೋಲನಗೊಳಿಸುವುದಾಗಿದೆ. ಅವರು ರಾಷ್ಟ್ರೀಯ ರಾಜಕೀಯದಲ್ಲಿ ಕಾರ್ಯನಿರ್ವಹಿಸಿರುವುದು ಒಂದು ಹಿನ್ನೆಲೆ; ರಾಜ್ಯಪಾಲರಾಗಿ ಅವರು ಹೇಗೆ ಕಾರ್ಯನಿರ್ವಹಿಸುತ್ತಾರೆ ಎಂಬುದನ್ನು ಅವರ ಮುಂದಿನ ನಿರ್ಧಾರಗಳು ಮತ್ತು ಸಾರ್ವಜನಿಕ ನಡವಳಿಕೆಯೇ ತೋರಿಸಬೇಕು.

ಕರ್ನಾಟಕದ ರಾಜಕೀಯದಲ್ಲಿ ಆಡಳಿತಾರೂಢ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವೆ ಭಿನ್ನಾಭಿಪ್ರಾಯಗಳು ಸಹಜ. ಅಂತಹ ಸಂದರ್ಭಗಳಲ್ಲಿ ಸಂವಿಧಾನದ ನಿಯಮಗಳು, ಕಾನೂನಿನ ಮಿತಿಗಳು ಮತ್ತು ಪ್ರಜಾಪ್ರಭುತ್ವದ ಸಂಪ್ರದಾಯಗಳು ನಿರ್ಧಾರಗಳಿಗೆ ಆಧಾರವಾಗಬೇಕು. ಇದೇ ರಾಜ್ಯಪಾಲರ ಹುದ್ದೆಯ ಮೂಲ ಆಶಯ.

**ಕೊನೆಯ ಮಾತು:** ವ್ಯಕ್ತಿಯ ಸಾಧನೆಗಿಂತ ಹುದ್ದೆಯ ಘನತೆ ದೊಡ್ಡದು!

ಡಾ. ಸುಧಾ ಯಾದವ್ ಅವರ ಬದುಕಿನಲ್ಲಿ ಶಿಕ್ಷಣವಿದೆ, ವೈಯಕ್ತಿಕ ಸಂಕಷ್ಟವಿದೆ, ಚುನಾವಣಾ ಗೆಲುವು ಮತ್ತು ಸೋಲುಗಳಿವೆ, ಪಕ್ಷದ ಸಂಘಟನೆಯಲ್ಲಿ ಕೆಲಸ ಮಾಡಿದ ಅನುಭವವಿದೆ. ಈಗ ಅವರ ಮುಂದೆ ಕರ್ನಾಟಕದ ಸಾಂವಿಧಾನಿಕ ಮುಖ್ಯಸ್ಥೆಯ ಜವಾಬ್ದಾರಿ ಇದೆ.

ಒಬ್ಬ ವ್ಯಕ್ತಿಯ ಹಿಂದಿನ ಸಾಧನೆಗಳು ಅವರ ಬದುಕಿನ ಪರಿಚಯವನ್ನು ನೀಡುತ್ತವೆ. ಆದರೆ ಅವರು ವಹಿಸಿಕೊಳ್ಳುವ ಉನ್ನತ ಹುದ್ದೆಯ ಯಶಸ್ಸು, ಆ ಹುದ್ದೆಯ ಮೌಲ್ಯಗಳನ್ನು ಎಷ್ಟು ಗೌರವಿಸುತ್ತಾರೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ.

ರಾಜ್ಯಪಾಲರು ಯಾವ ಪಕ್ಷದ ಹಿನ್ನೆಲೆಯಿಂದ ಬಂದಿದ್ದಾರೆ ಎನ್ನುವುದಕ್ಕಿಂತ, ಅವರು ಸಂವಿಧಾನವನ್ನು ಹೇಗೆ ಗೌರವಿಸುತ್ತಾರೆ, ಚುನಾಯಿತ ಸರ್ಕಾರದೊಂದಿಗೆ ಸಾಂವಿಧಾನಿಕ ಮಿತಿಯೊಳಗೆ ಹೇಗೆ ಕಾರ್ಯನಿರ್ವಹಿಸುತ್ತಾರೆ ಮತ್ತು ರಾಜ್ಯದ ಸಾರ್ವಜನಿಕ ಸಂಸ್ಥೆಗಳ ಘನತೆಯನ್ನು ಹೇಗೆ ಕಾಪಾಡುತ್ತಾರೆ ಎಂಬುದೇ ಮುಖ್ಯ.

ಕರ್ನಾಟಕದ ಜನರು ಡಾ. ಸುಧಾ ಯಾದವ್ ಅವರ ಮುಂದಿನ ಕಾರ್ಯವೈಖರಿಯನ್ನು ಈ ಮಾನದಂಡಗಳ ಮೇಲೆ ಗಮನಿಸಲಿದ್ದಾರೆ. ಅವರ ನೇಮಕವು ಹೊಸ ಜವಾಬ್ದಾರಿಯ ಆರಂಭ; ಆ ಜವಾಬ್ದಾರಿಯ ನಿಜವಾದ ಮೌಲ್ಯವನ್ನು ನಿರ್ಧರಿಸುವುದು ಮುಂದಿನ ನಡೆಗಳೇ.

# ಸಾವಿನೆದುರು ನಿಂತು ನಗುವ ಕಲೆ



ನಗು ಕೇವಲ ತುಟಿಯ ಅಲಂಕಾರವಲ್ಲ, ಅದು ಜೀವದೊಳಗಿನ ರಕ್ಷಾಕವಚ. ಕಠಿಣ ಘಳಿಗೆಯಲ್ಲೂ ಮಂದಹಾಸ ಉಳಿಸಿಕೊಂಡವನ ನರಮಂಡಲ ಹೆಚ್ಚು ಸಮಚಿತ್ತದಿಂದ ಕೆಲಸ ಮಾಡುತ್ತದೆ ಎಂದು ಮನೋವಿಜ್ಞಾನ ಹೇಳುತ್ತದೆ. ನಗುವಾಗ ಚಿಮ್ಮುವ ಜೈವಿಕ ರಸಾಯನಗಳು ಒತ್ತಡದ ಉರಿಯ ಝಳವನ್ನು ತಣಿಸಿ, ದೇಹದ ಶಕ್ತಿಯನ್ನು ಹಸಿರಾಗಿರಿಸುತ್ತವೆ. ಇದು ಪ್ರಕೃತಿ ನೀಡಿದ ಒಳಗಿನ ಔಷಧಿ.

ಮುಗುಳ್ನಗೆ ಸಮುದಾಯದ ನಡುವೆ ಮೌನದ ಸೇತುವೆ. ಅಪರಿಚಿತರಲ್ಲೂ ಆಪ್ತತೆ ಬೆಸೆಯುತ್ತದೆ, ಕತ್ತಲಲ್ಲಿ ದೀಪವಾಗುತ್ತದೆ. ಸಂಕಷ್ಟವನ್ನು ಧೈರ್ಯದಿಂದ ಎದುರಿಸುವ ಒಂದು ಮುಖದ ಬೆಳಕು ನೂರಾರು ಎದೆಗಳಲ್ಲಿ ಆತ್ಮವಿಶ್ವಾಸದ ಸಸಿ ನೆಡುತ್ತದೆ. ಹೀಗೆ ಒಬ್ಬನ ಸಕಾರಾತ್ಮಕತೆ ಹಲವರ ಪಾಲಿಗೆ ಪ್ರೇರಣೆಯಾಗುತ್ತದೆ.

ಆರೋಗ್ಯದ ದೃಷ್ಟಿಯಿಂದ ಹಾಸ್ಯಪ್ರಜ್ಞೆ ಆತಂಕದ ಭಾರ ಇಳಿಸುತ್ತದೆ, ಭಾವನೆಗಳಿಗೆ ಲಯ ನೀಡುತ್ತದೆ. ಪ್ರತಿಕೂಲತೆಯ ಬಿರುಗಾಳಿಯಲ್ಲೂ ಸ್ಥಿರವಾಗಿ ನಿಲ್ಲುವ ಶಕ್ತಿ ಅದರಿಂದ ಬರುತ್ತದೆ.

ಜೀವನದ ಅಂತಿಮ ಸತ್ಯವನ್ನು ಭಯದಿಂದಲ್ಲ, ಪ್ರಜ್ಞೆಯಿಂದ ಸ್ವೀಕರಿಸುವುದೇ ನಿಜವಾದ ಗೆಲುವು. ತುಟಿಯ ಮೇಲಿನ ಸಣ್ಣ ನಗು ಕೆಲವೊಮ್ಮೆ ಔಷಧಿ, ಕೆಲವೊಮ್ಮೆ ಆಶಾಕಿರಣ, ಕೆಲವೊಮ್ಮೆ ಬದುಕಿನ ಒಳಶಕ್ತಿಯೇ ಆಗುತ್ತದೆ.



ಅಂಕಣ-45
ಸಾವು ಸಂಕಟಪಡುವ ಸಂಗತಿಗಳು..!
ಡಾ.ಸುಧಾಕರ.ಜಿ.ಲಕ್ಕವಳ್ಳಿ
87479 69381

# ಅಕ್ಷರದಾಳಕ್ಕೆ ಇಳಿಯಬಹುದೇ ಓದುವ ಜೀವಗಳು



ಆನಂದ ಜಿ.ಎನ್.
ದಾಂಡೇಲಿ.

ಇತ್ತೀಚಿಗೆ ನಾ ಅನುಭವಿಸಿದ ಕೆಲ ಘಟನೆಗಳನ್ನು ಓದುಗ ಪ್ರಭುಗಳೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ. ನನ್ನ ಬರಹವನ್ನು ಚಿಕ್ಕ ಚೌಕಟ್ಟಿನಲ್ಲಿ ಸೆರೆ ಹಿಡಿಯುತ್ತ ಮನಸಿನ ಮಾತುಗಳನ್ನು ಮುಂದಿನವರಿಗೆ ತೆರೆದಿಡುವ ಪ್ರಯತ್ನ ನನ್ನದಾಗಿದೆ.

ಅನಿಯಮಿತ ಬರಹಗಳ ನಾ ನಿತ್ಯ ಬರೆದೆ ಅದೆಷ್ಟೋ ವಿಚಾರಗಳ ನಾ ಸ್ಟೇಟಸ್ ಮೂಲಕ ತಿಳಿಸಲೆತ್ನಿಸಿದೆ

ಆದರೂ ಅರಿಯದೆ ಅಳಿಯುವ ಜೀವಗಳು ಅಸಹನೆಯಲ್ಲಿ ತಾವೇ ಸರಿ ಎನ್ನುತ್ತಾ ಹುಬ್ಬೆರಿಸುತ್ತಿರುವವು ನಿತ್ಯ ನಮ್ಮೆದುರಿಗೆ.

ಆಗಾಗ ಅವರಿವರ ಮಾತುಗಳಿಗೆ ಮರುಳಾಗಿ ಹೆಜ್ಜೆ ಹಾಕಿಹರು ಸದ್ದಿಲ್ಲದೇ ಹಾಳಾಗಿ ಹೋಗುವ ದಾರಿಯಲಿ ನಿತ್ಯ



ಗೋಳಾಗಿ ಅವರಿವರ ಮಾತಿಗೆ ಮರುಳಾಗಿ. ಮತ್ತೊಂದೆಡೆ ತಮ್ಮ ಮಾತುಗಳ ತೂಕ ಅರಿಯದೆ ಆಚಾತುರ್ಯದಲಿ ಸಾಗುವ ಜೀವಗಳು ತಮ್ಮನ್ನು ಒಪ್ಪುವವರೇ ಒಳ್ಳೆಯವರು

ಒಪ್ಪದೇ ತಿಳಿಸಲೆತ್ನಿಸುವವರೆಲ್ಲಾ ಕೆಟ್ಟವರು ಎನ್ನುವ ತಮ್ಮ ಮೂಗಿನ ನೇರಕ್ಕಷ್ಟೇ ನೋಡುವ

ಜಾಣ ಕಿವುಡರೋ ಇಲ್ಲಾ ಕುರುಡರೋ ಎನ್ನುವುದು ಪ್ರಶ್ನೆ. ಬೀಳುವರು ತಾವು ತೋಡುವ ಗುಂಡಿಯಲಿ ಹೇಳಿ ಕೇಳಿ

ತಾವು ಮಾಡಿದ ತಪ್ಪುಗಳ ಸುಳಿಯಲಿ ನಿತ್ಯ ನರಳಿ ನರಳಿ ಅದರ ಅರಿವು ನೀಡುವ ಜೀವಗಳು ಅವರಿಗೆ ಸದಾ ಆಗುವರು ಮುಳ್ಳುಗಳು ಈ ಕ್ಷಣದಲ್ಲಿ ಎಂದುಕೊಳ್ಳುತ್ತಾ ತಾವೇ ತಮ್ಮಷ್ಟಕ್ಕೆ ಸಾಗುವರು ತಮ್ಮದೇ ಮೊಂಡು ಹಠದ ದಾರಿಯಲ್ಲಿ. ಇನ್ನು ಪದವಿ ಪಡೆದು ತಮ್ಮೊಳಗಿನ ಜ್ಞಾನದ ಧಾರೆ ಎರೆಯುವ ಗೌರವಯುತ ಅತೀ ಜವಾಬ್ದಾರಿಯುತ ಕಾರ್ಯಕ್ಕೆ ತಾವೇ ಬೇಡಿ ಬೇಡಿ ಬಂದರು ಯಾರಿಗೂ ಹೇಳದೇ ಕೇಳಿ ಅದನ್ನೊಮ್ಮೆ ನೋಡುವ ನಮಗಿಲ್ಲಿ ಅವರು ಮಾಡುವ ನಡೆಯುವ ದಾರಿ ನಡೆ ನುಡಿಗಳ ನೋಡುತ್ತಾ ಮೂಡುತ್ತಿದೆ ಪ್ರಶ್ನೆ ನಮಗಿಂದು ನೀಡುವರೇ ಅವರು ಸಮಾಜಕ್ಕೆ ನ್ಯಾಯವಿಲ್ಲಿ ಎಂದು. ಕೆಟ್ಟವರಿಲ್ಲ ಎಲ್ಲರೂ ಇಲ್ಲಿ ಬದಲಾಗಬಹುದು ಕೊಂಚ ಸಮಾಜವಿಲ್ಲಿ ಆದರೂ ಅದಕ್ಕೆ ಹೋಲಿಸಿದರೆ ಇರುವವರಲ್ಲಿ ಅಧಿಕರು ಅಸಮರ್ಥತೆಗಿಂತ ಆಲಸಿಗಳೇ ದೋಣಿಯ ಪಯಣಿಗರು ಕುಳಿತಿಹರು ಮೊಂಡು ಹಠದಲ್ಲಿ ತಾವೇ ಸರಿ ಎನ್ನುವ ಜೀವಗಳಿಲ್ಲಿ..!!

# ಮನಸು ಎಂಬ ಕೊಳದೊಳಗೆ...



ಪುಷ್ಪ ಪ್ರಸಾದ್

ಜಗತ್ತಿನ ಅತ್ಯಂತ ನಿಗೂಢ, ಚಂಚಲ ಮತ್ತು ಶಕ್ತಿಶಾಲಿ ವಸ್ತು ಯಾವುದು ಎಂದರೆ ಅದಕ್ಕೆ ಸಿಗುವ ಏಕೈಕ ಉತ್ತರ ?ಮನಸ್ಸು?. ಕಣ್ಣಿಗೆ ಕಾಣದ, ಕೈಗೆ ಸಿಗದ ಈ ಮನಸ್ಸನ್ನು ಕವಿಗಳು, ತತ್ವಜ್ಞಾನಿಗಳು ಹಲವು ರೂಪಗಳಲ್ಲಿ ವರ್ಣಿಸಿದ್ದಾರೆ. ಅದರಲ್ಲಿ ಅತ್ಯಂತ ಆಪ್ತವಾದ ಮತ್ತು ಅರ್ಥಪೂರ್ಣವಾದ ಹೋಲಿಕೆ ಎಂದರೆ ಮನಸ್ಸನ್ನು ಒಂದು ?ಕೊಳಕ್ಕೆ? ಹೋಲಿಸುವುದು. ಹರಿಯುವ ನದಿಗೆ ಒಂದು ವೇಗವಿರುತ್ತದೆ, ಸಾಗರಕ್ಕೆ ಆರ್ಭಟವಿರುತ್ತದೆ. ಆದರೆ ಕೊಳಕ್ಕೆ ಒಂದು ಗಾಂಭೀರ್ಯ ಮತ್ತು ಶಾಂತತೆಯ ಸ್ವಭಾವವಿರುತ್ತದೆ. ನಮ್ಮ ಆಂತರಿಕ ಜಗತ್ತು ಕೂಡ ಇಂತಹದೇ ಒಂದು ಕೊಳ.

ಹುಟ್ಟಿನ ನಿರ್ಮಲತೆ ಮತ್ತು ಇಂದಿನ ಮಾಲಿನ್ಯ: ಒಂದು ನೈಸರ್ಗಿಕ ಕೊಳವನ್ನು ಗಮನಿಸಿದರೆ, ಅದರ ನೀರು ಎಷ್ಟು ತಿಳಿಯಾಗಿರುತ್ತದೆಯೆಂದರೆ ತಳದಲ್ಲಿರುವ ಸಣ್ಣ ಕಲ್ಲು, ಮರಳು ಕೂಡ ಸ್ಪಷ್ಟವಾಗಿ ಕಾಣಿಸುತ್ತದೆ. ನಮ್ಮ ಮನಸ್ಸು ಕೂಡ ಮೂಲತಃ ಇಷ್ಟೇ ನಿರ್ಮಲವಾದದ್ದು. ಅದರಲ್ಲಿ ಪ್ರೀತಿ, ಕರುಣೆ, ಮತ್ತು ನಿಷ್ಕಲ್ಮಶ ಆನಂದದ ಒರತೆ ಇರುತ್ತದೆ. ಮಗುವಿನ ಮನಸ್ಸನ್ನು ನೋಡಿದಾಗ ಈ ತಿಳಿಗೊಳದ ದರ್ಶನ ನಮಗಾಗುತ್ತದೆ. ?

ಆದರೆ, ಇಂದಿನ ಆಧುನಿಕ ಬದುಕಿನಲ್ಲಿ ತಂತ್ರಜ್ಞಾನದ ಅತಿಯಾದ ಬಳಕೆ, ಸಾಮಾಜಿಕ ಜಾಲತಾಣಗಳ ಅಬ್ಬರ ಮತ್ತು ಸದಾ ಓಡುವ ಇಲಿ ಓಟದ ಬದುಕು ನಮ್ಮ ಮನಸ್ಸಿನ ಕೊಳಕ್ಕೆ ಅತಿಯಾದ ಕಸವನ್ನು ತಂದು ಹಾಕುತ್ತಿವೆ. ಮಾಹಿತಿ ತಂತ್ರಜ್ಞಾನದ ಈ ಯುಗದಲ್ಲಿ ಜ್ಞಾನಕ್ಕಿಂತ ಹೆಚ್ಚಾಗಿ ಗೊಂದಲಗಳೇ ಮನಸ್ಸಿನ ಕೊಳವನ್ನು ತುಂಬುತ್ತಿವೆ.

ಅಲೆಗಳನ್ನಬ್ಬಿಸುವ ಆಲೋಚನೆಗಳು:





ಶಾಂತವಾಗಿರುವ ಕೊಳದ ನೀರಿಗೆ ಒಂದು ಸಣ್ಣ ಕಲ್ಲು ಎಸೆದರೂ ಸಾಕು, ಇಡೀ ಕೊಳದಲ್ಲಿ ಅಲೆಗಳು ಏಳುತ್ತವೆ. ತಳದಲ್ಲಡಗಿದ್ದ ಕೆಸರು ಮೇಲಕ್ಕೆ ಬಂದು ನೀರು ಮಲಿನವಾಗುತ್ತದೆ. ನಮ್ಮ ದೈನಂದಿನ ಜೀವನದಲ್ಲಿ ಯಾರೋ ಆಡಿದ ಒಂದು ನಕಾರಾತ್ಮಕ ಮಾತು, ನಮಗಾಗುವ ಅಪಮಾನ, ವೈಫಲ್ಯದ ಭಯ ಅಥವಾ ಹಳೆಯ ಕಹಿ ನೆನಪುಗಳು ಮನಸ್ಸಿನ ಕೊಳಕ್ಕೆ ಬೀಳುವ ಕಲ್ಲುಗಳಿದ್ದಂತೆ. ಕೋಪ, ಅಸೂಯೆ, ಹತಾಶೆ ಮತ್ತು ಆತಂಕಗಳು ಮನಸ್ಸಿನ ತಳದಲ್ಲಿರುವ ಕೆಸರನ್ನು ಮೇಲೆಬ್ಬಿಸುತ್ತವೆ. ಯಾವಾಗ ಮನಸ್ಸಿನ ನೀರು ಮಲಿನವಾಗುತ್ತದೆಯೋ, ಆಗ ನಮಗೆ ಜೀವನದ ಸ್ಪಷ್ಟ ಚಿತ್ರಣ ಕಾಣಿಸುವುದಿಲ್ಲ. ಗೊಂದಲದ ಗೂಡಾದ ಮನಸ್ಸಿನಲ್ಲಿ ಸರಿಯಾದ ಆಲೋಚನೆಗಳು ಮೂಡುವುದಿಲ್ಲ. ಈ ಸ್ಥಿತಿಯಲ್ಲಿ ನಾವು ತೆಗೆದುಕೊಳ್ಳುವ ನಿರ್ಧಾರಗಳು ಹೆಚ್ಚಾಗಿ ತಪ್ಪಾಗಿಯೇ ಇರುತ್ತವೆ.

ಹೋಲಿಕೆಯೆಂಬ ವಿಷಗಾಳಿ: ಮನಸ್ಸಿನ ಕೊಳವನ್ನು ಕೇವಲ ಕಲ್ಲುಗಳು ಮಾತ್ರವಲ್ಲ, ಹೊರಗಿನ ವಿಷಗಾಳಿಯೂ ಕೆಡಿಸುತ್ತದೆ. ಇಂದಿನ ದಿನಗಳಲ್ಲಿ ಮತ್ತೊಬ್ಬರ ಬದುಕಿನೊಂದಿಗೆ ನಮ್ಮ ಬದುಕನ್ನು ಹೋಲಿಸಿಕೊಳ್ಳುವ ದೊಡ್ಡ ಕಾಯಿಲೆ ನಮ್ಮನ್ನು ಆವರಿಸಿದೆ. ಬೇರೆಯವರ ಯಶಸ್ಸು, ಅವರ ಐಷಾರಾಮಿ ಜೀವನವನ್ನು ನೋಡಿ ನಮ್ಮ ಮನಸ್ಸಿನ ಕೊಳದಲ್ಲಿ ಅಸೂಯೆಯ ಅಲೆಗಳನ್ನು ಎಬ್ಬಿಸಿಕೊಳ್ಳುತ್ತೇವೆ. ನೆನಪಿರಲಿ, ಪ್ರತಿ ಕೊಳದ ವಿಸ್ತೀರ್ಣ ಮತ್ತು ಆಳ ವಿಭಿನ್ನವಾಗಿರುತ್ತದೆ. ನಮ್ಮ ಕೊಳದಲ್ಲಿರುವ ನೀರನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ನಮ್ಮ ಜವಾಬ್ದಾರಿಯೇ ಹೊರತು, ಪಕ್ಕದ ಕೊಳದ ಗಾತ್ರವನ್ನು ನೋಡಿ ಕೊರಗುವುದಲ್ಲ.

ತಿಳಿಯಾಗಿಸುವ ಕಲೆ: ಮೌನದ ಶಕ್ತಿ: ಕೊಳದ ನೀರು ಮಲಿನವಾದಾಗ ಅದನ್ನು ಹಸ್ತಕ್ಷೇಪ ಮಾಡಿ ಸ್ವಚ್ಛಗೊಳಿಸಲು ಸಾಧ್ಯವಿಲ್ಲ. ನೀರನ್ನು ಕೈಯಿಂದ ಅಲ್ಲಾಡಿಸಿದಷ್ಟೂ ಕೆಸರು ಮತ್ತಷ್ಟು ಹರಡುತ್ತದೆ. ಅದಕ್ಕೆ ಇರುವ ಏಕೈಕ ಪರಿಹಾರವೆಂದರೆ, ಅದನ್ನು ?ಹಾಗೇ ಸುಮ್ಮನೆ ಬಿಡುವುದು?. ಸಮಯ ಕಳೆದಂತೆ ಕೆಸರು ತಾನಾಗಿಯೇ ಕೆಳಗೆ ಕುಳಿತು, ನೀರು ಮತ್ತೆ ಮೊದಲಿನಂತೆ ತಿಳಿಯಾಗುತ್ತದೆ. ನಮ್ಮ ಮನಸ್ಸಿಗೂ ಇದೇ ನಿಯಮ ಅನ್ವಯಿಸುತ್ತದೆ. ಬದುಕಿನಲ್ಲಿ ಆತಂಕ ಅಥವಾ ಆಕ್ರೋಶದ ಅಲೆಗಳು ಎದ್ದಾಗ ತಕ್ಷಣ ಪ್ರತಿಕ್ರಿಯಿಸದೆ, ಮನಸ್ಸನ್ನು ಸ್ವಲ್ಪ ಸಮಯ ಮೌನವಾಗಿರಲು ಬಿಡಬೇಕು. ಧಾವಂತದ ಬದುಕಿನ ಮಧ್ಯೆ ಪ್ರತಿದಿನ ನಮಗಾಗಿ ನಾವು ಸ್ವಲ್ಪ ಸಮಯವನ್ನು ಮೀಸಲಿಡಬೇಕು. ಧ್ಯಾನ, ಆತ್ಮಾವಲೋಕನ, ಒಳ್ಳೆಯ ಪುಸ್ತಕಗಳ ಓದು ಮತ್ತು ಧನಾತ್ಮಕ ಚಿಂತನೆಗಳು ಮನಸ್ಸಿನ ಕೆಸರನ್ನು ತಳ ಸೇರುವಂತೆ ಮಾಡುತ್ತವೆ.

**ಕೊನೆಯ ಮಾತು:** ಹೊರಗಿನ ಜಗತ್ತು ಸದಾ ನಮ್ಮ ಮನಸ್ಸಿನ ಕೊಳಕ್ಕೆ ಕಲ್ಲುಗಳನ್ನು ಎಸೆಯುತ್ತಲೇ ಇರುತ್ತದೆ. ಪರಿಸ್ಥಿತಿಗಳು ನಮ್ಮ ನಿಯಂತ್ರಣದಲ್ಲಿ ಇಲ್ಲದಿರಬಹುದು, ಆದರೆ ಆ ಕಲ್ಲುಗಳಿಂದ ಏಳುವ ಅಲೆಗಳನ್ನು ನಿಯಂತ್ರಿಸುವ ಶಕ್ತಿ ನಮ್ಮಲ್ಲಿದೆ. ಸುಂದರವಾದ ಕಮಲ ಅರಳುವುದೂ ಕೆಸರಿನಲ್ಲೇ. ಹಾಗೆಯೇ ಬದುಕಿನ ಸವಾಲುಗಳ ಮಧ್ಯೆಯೂ ಮನಸ್ಸನ್ನು ಪ್ರಶಾಂತವಾಗಿಟ್ಟುಕೊಂಡರೆ ಯಶಸ್ಸಿನ ಕಮಲ ಅರಳುವುದು ಖಂಡಿತ. ನಮ್ಮ ಆಂತರಿಕ ಕೊಳವನ್ನು ಸದಾ ತಿಳಿಯಾಗಿಟ್ಟುಕೊಂಡರೆ, ಅದರಲ್ಲಿ ಇಡೀ ಬದುಕಿನ ಸುಂದರ ಪ್ರತಿಬಿಂಬ ಹಾಗೂ ಸತ್ಯದ ದರ್ಶನ ನಮಗಾಗುತ್ತದೆ. ಮನಸ್ಸು ತಿಳಿಯಾದರೆ ಬದುಕು ನಿರಾಳ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,